# ಕರ್ನಾಟಕ ವಿಕಾಸ

Karnataka Vikas

ಜುಲೈ 2015
July 2015




ನೀತಿ ಆಯೋಗದ ಮುಖ್ಯಮಂತ್ರಿಗಳ ಉಪ ಸಮಿತಿಯ ಸಭೆ



ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:16.06.2015 ರಂದು ನಡೆದ ಜಿಲ್ಲಾ ಯೋಜನಾ ಸಮಿತಿಯ ಕಾರ್ಯಪಡೆಯ ಮೊದಲನೇ ಸಭೆಯನ್ನು ವಿಕಾಸಸೌಧದಲ್ಲಿ ನಡೆಸಲಾಯಿತು.



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಜುಲೈ 2015 | ಸಂಪುಟ : 56 | ಸಂಚಿಕೆ: 8
July 2015 | Volume : 56 | Issue : 8

## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ
7. ಮುಖಪುಟ ಲೇಖನ – ಬೆಳ್ಳೇಗೌಡ
9. ಲೇಖನ – ಬೂವನಹಳ್ಳಿ ನಾಗರಾಜ್
– ರೋಹಿತ್
– ಡಾ. ಟಿ. ಆರ್. ಚಂದ್ರಶೇಖರ
– ಪ್ರವೀಣ್ ಹುಲಿಕುಂಟೆ
26. ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ – ಹೆಚ್. ಆರ್. ರಾಜೇಶ್
– ಕೆ.ಸೋಮಯ್ಯ
32. ಯಶೋಗಾಥೆ – ರವೀಂದ್ರನಾಥ್
– ಡಾ. ಆರ್. ರಾಗಪ್ರಿಯ ಭಾ.ಆ.ಸೇ.,
– ಅಪ್ಪಣ್ಣ ರು. ಹಿರೇಗೌಡರ್
43. ಕವಿಯ(ಕ್ಷ) ಪ್ರಶ್ನೆ? – ಎಂ. ಗೀತಾ
44. ಕಾವ್ಯ ವಿಕಾಸ – ಕೊದ್ದಡ್ಡಿ ಮಹೇಶ್
45. ಪಂಚತಂತ್ರ ವರದಿ
46. ಸಕಾಲ ವರದಿ
47. ಸುತ್ತೋಲೆಗಳು






ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**


**ವಾರ್ಷಿಕ ಚಂದಾ**

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.


**ಕಛೇರಿ ವಿಳಾಸ**

ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857.
www.rdpr.kar.nic.in
Email : kvrdpr@gmail.com



**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಏಪ್ರಿಲ್, ಮೇ, ಜೂನ್ 2015 ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಆಕರ್ಷಕವಾಗಿ ಮೂಡಿಬಂದಿದೆ. ರಾಷ್ಟ್ರಮಟ್ಟದಲ್ಲಿ ಪಂಚಾಯತ್ ರಾಜ್ ದಿವಸ ಅದ್ದೂರಿಯಾಗಿ ಆಚರಿಸಲ್ಪಟ್ಟಿದ್ದು, ಪಂಚಾಯತ್ ರಾಜ್ ವ್ಯವಸ್ಥೆಗೊಂದು ಕಳೆಯಾಗಿದೆ. 'ರಾಷ್ಟ್ರೀಯ ಪಂಚಾಯತ್ ರಾಜ್ ದಿವಸದ ಅದ್ದೂರಿ ಆಚರಣೆ' ಎಂಬ ರಾಚಯ್ಯ ಚೌಕಿಮಠ ರವರ ಮುಖಪುಟ ವರದಿಯು ತುಂಬಾ ಚೆನ್ನಾಗಿದೆ.

**ಶ್ರೀ ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116

ಏಪ್ರಿಲ್, ಮೇ, ಜೂನ್ 2015 ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಮುಖಪುಟವು ಬಹಳ ಸುಂದರವಾಗಿತ್ತು. ಕಾವ್ಯ ವಿಕಾಸದಲ್ಲಿ ನೀರಿನ ಮನದಾಳದ ಮಾತು ಎಂಬ ಕವನವು ತುಂಬಾ ಮಾರ್ಮಿಕವಾಗಿತ್ತು. ಎನ್.ಎಚ್.ನಾಗೂರ ರವರ ಯೋಶೋಗಾಥೆಯಲ್ಲಿ ಮನಮೋಹಕ ಗ್ರಾಮ (ಮಳ್ಳಿಗೇರಿ) ಕಿರುಗ್ರಾಮದ ಪರಿಚಯ, ವೈಯಕ್ತಿಕ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಸಿ.ಸಿ.ಟಿವಿ ಆಟದ ಮೈದಾನ, ಸ್ಮಶಾನದ ವ್ಯವಸ್ಥೆ, ಓದುಗರಿಗೆ ತುಂಬಾ ಮೆಚ್ಚುಗೆಯಾಯಿತು.

**ಶ್ರೀ ಮಹಾಂತಯ್ಯ ಕೆ.ಮಠ**
ಶಿಕ್ಷಕ–ಕವಿ–ಸಾಹಿತಿ,ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮು॥ಪೋ॥ಬಂದರವಾಡ, ಅಫ್ಜಲ್‌ಪುರ ತಾಲ್ಲೂಕು, ಕಲಬುರಗಿ 585265

ಏಪ್ರಿಲ್, ಮೇ, ಜೂನ್ 2015 ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ವರ್ಣರಂಜಿತ ಬಾವಚಿತ್ರಗಳು, ಉತ್ತಮ ಲೇಖನಗಳೊಂದಿಗೆ ಚೆನ್ನಾಗಿ ಮೂಡಿಬಂದಿದೆ. ಶ್ರೀ ಸಂಜೀವಕುಮಾರ್‌ರವರು ಸರಕಾರದ ಪ್ರಧಾನ ಕಾರ್ಯದರ್ಶಿಗಳಾಗಿ ಗ್ರಾಅ ಮತ್ತು ಪಂ.ರಾಜ್ ಇಲಾಖೆಗೆ ವರ್ಗವಾಗಿರುವುದು ಸ್ವಾಗತಾರ್ಹ. ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಮಾಡಿರುವುದು ಶ್ಲಾಘನೀಯ. ನೀರಿನ ಮನದಾಳದ ಮಾತು, ಕಾವ್ಯ ಹಾಗೂ ಜಾನುವಾರುಗಳಿಗೆ ಒಂದಿಷ್ಟು ನೀರು ಉಳಿಸೋಣವೇ? ಎಂಬ ಕವಿಯ(ಕ್ಷ) ಪ್ರಶ್ನೆ)ಗಳು ಮನುಜನಿಗೆ ಅರಿವು ಮೂಡುವಂತೆ ಮಾಡಿದೆ. ಹೀಗಿ ಮಾಸ ಪತ್ರಿಕೆಯು ವಿವಿಧ ಸುತ್ತೋಲೆಗಳು, ಲೇಖನಗಳೊಂದಿಗೆ ಚೆನ್ನಾಗಿ ಮೂಡಿಬರಲೆಂದು ಆಶಿಸುತ್ತಾ, ಸಂಪಾದಕ ಮಂಡಳಿ ಸದಸ್ಯರಿಗೆ ನನ್ನ ಧನ್ಯವಾದಗಳು.

**ಶ್ರೀ ಮರಿದೇವರ ಸಿದ್ದಪ್ಪ,**
ನಿವೃತ್ತ ಶಿಕ್ಷಕ, ಚೌಡಾಪುರ ಅಂಚೆ,
ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ 583135

# ಸಚಿವಾಲಯದಿಂದ ಸಂದೇಶ




**ಸಂಜೀವ ಕುಮಾರ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು


ಪ್ರಿಯ ಬಂಧುಗಳೇ,

**ಸ್ವಚ್ಛ ಭಾರತ ಅಭಿಯಾನ, ಬಯಲು ಬಹಿರ್ದೆಸೆ ಮುಕ್ತ ರಾಜ್ಯದತ್ತ.....**

ಕೇಂದ್ರ ಸರ್ಕಾರದ ನೀತಿ ಆಯೋಗದ ಸ್ವಚ್ಛ ಭಾರತ ಅಭಿಯಾನದ ಮುಖ್ಯಮಂತ್ರಿಗಳ ಉಪ ಸಮಿತಿ ಸಭೆಯು ಇತ್ತೀಚೆಗಷ್ಟೆ ಬೆಂಗಳೂರಿನ ವಿಧಾನಸೌಧದಲ್ಲಿ ಏರ್ಪಡಿಸಲಾಗಿತ್ತು. ರಾಷ್ಟ್ರದ ಹಲವು ಮುಖ್ಯಮಂತ್ರಿಗಳು ಭಾಗವಹಿಸಿದ್ದ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯವನ್ನು 2ನೇ ಅಕ್ಟೋಬರ್, 2018 ರೊಳಗಾಗಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆಯು 2019ರ ಅಕ್ಟೋಬರ್ 2 ರಂದು ಜರುಗಲಿದ್ದು, ಅಂದಿಗೆ ಇಡೀ ದೇಶವನ್ನೇ ಬಯಲು ಶೌಚಮುಕ್ತವಾಗಿಸಬೇಕೆಂಬುದು ಕೇಂದ್ರ ಸರ್ಕಾರದ ಗುರಿ. ಆದರೆ ಇದಕ್ಕೂ ಒಂದು ವರ್ಷಕ್ಕೆ ಮೊದಲು ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸುವುದು ರಾಜ್ಯ ಸರ್ಕಾರದ ಗುರಿ ಎಂದು ಘೋಷಣೆ ಮಾಡಿರುವ ಬಗ್ಗೆ ನಮ್ಮೆಲ್ಲಾ ಅಧಿಕಾರಿ/ಸಿಬ್ಬಂದಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರೂ ಸಹ ಜತನದಿಂದ ಗಮನದಲ್ಲಿರಿಸಿಕೊಂಡು ನಮ್ಮ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸುವತ್ತ ಕಾರ್ಯಪ್ರವೃತ್ತರಾಗಬೇಕು.

**ಚುನಾಯಿತ ಪಂಚಾಯತ್ ಪ್ರತಿನಿಧಿಗಳ ಮುಂದಿನ ಸವಾಲುಗಳು ....**

ರಾಜ್ಯದ ಗ್ರಾಮ ಪಂಚಾಯತ್ ಚುನಾವಣೆಗಳು ಮುಕ್ತಾಯಗೊಂಡು ರಾಜ್ಯಾದ್ಯಂತ ಚುನಾಯಿತ ಪಂಚಾಯತ್ ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾವತಿಯಿಂದ ಜಾರಿಗೊಳಿಸಲಾಗಿರುವ ಕೇಂದ್ರ, ರಾಜ್ಯ ಮತ್ತು ವಿದೇಶಿ ನೆರವಿನ ಹಲವು ಅಭಿವೃದ್ಧಿ ಯೋಜನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಯೋಜನೆಯ ಫಲಶೃತಿಯನ್ನು ಫಲಾನುಭವಿಗಳಿಗೆ ತಲುಪಿಸುವಂತಹ ಜವಾಬ್ದಾರಿ ನಮ್ಮೆಲ್ಲ

ಈ ಚುನಾಯಿತ ಪ್ರತಿನಿಧಿಗಳದ್ದಾಗಿರುತ್ತದೆ.

**ಗ್ರಾಮ ವಿಕಾಸ ಯೋಜನೆಯ ವೇಳಾಪಟ್ಟಿಯಂತೆ ಕ್ರಮ ಜರುಗಲಿ ....**

ಇತ್ತೀಚೆಗಷ್ಟೆ ರಾಜ್ಯ ಸರ್ಕಾರ ರೂ.750.00 ಕೋಟಿ ಅನುದಾನದ ಮಹತ್ವಾಕಾಂಕ್ಷಿ ಯೋಜನೆಯಾದ ಗ್ರಾಮ ವಿಕಾಸ ಯೋಜನೆಗೆ ಚಾಲನೆ ನೀಡಿದ್ದು ಯೋಜನೆಯ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ರಾಜ್ಯದ ಗ್ರಾಮಗಳು ಸ್ವಾವಲಂಭಿ, ಸ್ವಾಭಿಮಾನಿ, ಸ್ವಚ್ಛ, ವೈಜ್ಞಾನಿಕ ದೃಷ್ಟಿಕೋನದ ಗ್ರಾಮಗಳನ್ನಾಗಿ ಪರಿವರ್ತಿಸುವುದರೊಂದಿಗೆ ವ್ಯಾಜ್ಯಮುಕ್ತ, ತ್ಯಾಜ್ಯಮುಕ್ತ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ರೂಪಿಸುವ ಗುರಿಯನ್ನು ಹೊಂದಲಾಗಿದೆ.

ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಯೋಜನೆಯಡಿ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡಬಹುದಾಗಿದ್ದು ಗರಿಷ್ಠ 5 ಗ್ರಾಮಗಳಿಗೆ ಗರಿಷ್ಠ ರೂ.3.75 ಕೋಟಿಗಳ ಅನುದಾನವನ್ನು ಮಾತ್ರ ಸೀಮಿತಗೊಳಿಸಲಾಗಿದೆ. ಯೋಜನೆಗೆ ಗ್ರಾಮಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಗರಿಷ್ಠ 5000 ಜನಸಂಖ್ಯೆಯ ಮಿತಿಯನ್ನು ಸಡಿಲಗೊಳಿಸಲಾಗಿದ್ದು, ಕಡ್ಡಾಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಗಳನ್ನು ಗ್ರಾಮಗಳ ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಬೇಕಾಗಿರುತ್ತದೆ. ಯೋಜನೆಯ ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಅಕ್ಟೋಬರ್ 2, 2016ರ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ವೇಳಾಪಟ್ಟಿಯನ್ನು ಹೊರಡಿಸಲಾಗಿದೆ. ವೇಳಾ ಪಟ್ಟಿಯನ್ನು ಇದೇ ಸಂಚಿಕೆಯ ಪುಟ ಸಂಖ್ಯೆ: 13ರಲ್ಲಿ ಗಮನಿಸುವುದು. ನಮ್ಮೆಲ್ಲ ಚುನಾಯಿತ ಪ್ರತಿನಿದಿಗಳು, ಅಧಿಕಾರಿ/ಸಿಬ್ಬಂದಿಗಳು ಸಕ್ರಿಯವಾಗಿ ತೊಡಗಿಸಿಕೊಂಡು ಯೋಜನೆಯನ್ನು ಯಶಸ್ವಿಗೊಳಿಸುತ್ತಾರೆಂಬ ಆಶಯ ನನ್ನದು.



**ಸಂಜೀವ ಕುಮಾರ್**

ಮುಖಪುಟ ಲೇಖನ

# ಮುಖ್ಯಮಂತ್ರಿಗಳ ಉಪ ಸಮಿತಿ ಸಭೆ

– ಬೆಳ್ಳೀಗೌಡ

ಸ್ವಚ್ಛ ಭಾರತ ಅಭಿಯಾನದ ಸಫಲತೆಗೆ ಮುಖ್ಯ ಮಂತ್ರಿಗಳ ಉಪ ಸಮಿತಿ ರಚಿಸಿದ್ದು ಭಾರತ ಸರ್ಕಾರದ ನೀತಿ ಆಯೋಗ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳ ಸಹಯೋಗದೊಂದಿಗೆ ಉಪ ಸಮಿತಿಯ 3ನೇ ಸಭೆಯು ದಿನಾಂಕ: 24.06.2015 ರಂದು ವಿಧಾನ ಸೌಧ ಬೆಂಗಳೂರಿನಲ್ಲಿ ನಡೆಯಿತು.



ಭಾರತ ಸರ್ಕಾರವು ಸ್ವಚ್ಛ ಭಾರತ ಅಭಿಯಾನದ ಸಫಲತೆಗಾಗಿ ರಚಿಸಿರುವ ಮುಖ್ಯಮಂತ್ರಿಗಳ ಉಪಸಮಿತಿಯ ನೀತಿ ಆಯೋಗದ ಸಭೆಯನ್ನು ದಿನಾಂಕ 24-06-2015ರಂದು ನಡೆಸಲಾಯಿತು.

ಮುಖ್ಯ ಮಂತ್ರಿಗಳ ಉಪಸಮಿತಿಯ ಸಂಚಾಲಕರಾದ ಶ್ರೀ.ಚಂದ್ರಬಾಬು ನಾಯ್ಡು, ಆಂಧ್ರ ಪ್ರದೇಶದ ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯಲ್ಲಿ ಭಾಗವಹಿಸಿದ, ಇತರೆ ರಾಜ್ಯದ ಮುಖ್ಯ ಮಂತ್ರಿಗಳು ಹಾಗೂ ಮಂತ್ರಿಗಳನ್ನು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯ ರವರು, ಸ್ವಾಗತಿಸಿ ಸನ್ಮಾನಿಸಿದರು, ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀ. ಎಚ್.ಕೆ ಪಾಟೀಲರವರು ಸಹಕರಿಸಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಮುಖ್ಯವಾಗಿ ಘನ, ದ್ರವ, ತ್ಯಾಜ್ಯ ಹಾಗೂ ಅವಶೇಷಗಳು ಮತ್ತು ಶೌಚಾಲಯಗಳ ನಿರ್ವಹಣೆಯು ಮುಖ್ಯ ವಿಷಯವಾಗಿ ಇಟ್ಟುಕೊಂಡು ಚರ್ಚೆ ನಡೆಸಲಾಯಿತು. ಘನ, ದ್ರವ, ತ್ಯಾಜ್ಯ ಹಾಗೂ ಅವಶೇಷಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರ ಬಗ್ಗೆ ಹಾಗೂ ಅದರಿಂದ ವಿದ್ಯುತ್ ಉತ್ಪಾದಿಸುವ ಸಾಧ್ಯತೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆದು, ದೇಶದಲ್ಲಿ ಪ್ರತಿ ದಿನ 1.33

ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಎಸ್‌ಡಿ&ಕಾಂ) ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ
"ಸಂಜೀವಿನಿ"-ಕೆಎಸ್‌ಆರ್‌ಎಲ್‌ಪಿಎಸ್



ಲಕ್ಷ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರಿಂದ 1300 ಮೆಘವ್ಯಾಟ್ ವಿದ್ಯುತ್ ಉತ್ಪಾದಿಸಬಹುದು. ಈ ಬಗ್ಗೆ ಕಾರ್ಯ ಯೋಜನೆ ರೂಪಿಸಿ ಖಾಸಗಿ ಕಂಪನಿಗಳ ಸಹಕಾರ ಕೇಳಬಹುದೆಂದು ಚರ್ಚೆ ನಡೆಯಿತು.

ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳ ನಿರ್ವಹಣೆ ಬಳಕೆಯನ್ನು ಪರಿಣಾಮಕಾರಿಯಾಗಿ ಎಲ್ಲಾ ರಾಜ್ಯಗಳಲ್ಲಿ ಹೇಗೆ ಮಾಡಬಹುದೆಂಬುದರ ಬಗ್ಗೆ ಚರ್ಚೆ ನಡೆದು, ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡುತ್ತಿರುವ ಘನ, ದ್ರವ, ತ್ಯಾಜ್ಯ,



ಶೌಚಾಲಯ ನಿರ್ವಹಣೆ, ನಿರ್ಮಾಣದ ಬಗ್ಗೆ ಕಿರು ಚಿತ್ರವನ್ನು ಎಲ್ಲರಿಗೂ ತೋರಿಸಲಾಯಿತು, ಹಾಗೂ ಕರ್ನಾಟಕ ರಾಜ್ಯದಲ್ಲಿ 2ನೇ ಅಕ್ಟೋಬರ್ 2018ರ ಒಳಗಾಗಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯ ಮಾಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಉತ್ತರಖಾಂಡ ಮುಖ್ಯ ಮಂತ್ರಿಗಳಾದ ಶ್ರೀ. ಹರೀಶ್ ರಾವತ್, ಮಿಜೋರಾಮ್ ಮುಖ್ಯ ಮಂತ್ರಿಗಳಾದ ಶ್ರೀ.ಲಾಲ್ ತನ್ವಲ್ ಹಾಗೂ ಮಹಾರಾಷ್ಟ್ರ ಮತ್ತು ಹರಿಯಾಣ ರಾಜ್ಯದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರುಗಳು ಹಾಗೂ ಅಧಿಕಾರ ವರ್ಗದವರು, ನೀತಿ ಆಯೋಗದ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳಾದ ಶ್ರೀಮತಿ. ಸಿಂಧೂಶ್ರೀ. ಕುಲ್ಲರ್ ರವರು ಹಾಗೂ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಕೌಶಿಕ್ ಮುಖರ್ಜಿ ರವರು, ಶ್ರೀಮತಿ. ಲತಾಕೃಷ್ಣರಾವ್‌ಜಿ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ



ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿ ವರ್ಗದವರು ಹಾಜರಿದ್ದರು.

ಸ್ವಚ್ಛ ಭಾರತ ಅಭಿಯಾನಕ್ಕೆ ಸಂಬಂಧಿಸಿದಂತೆ ಅಧ್ಯಯನ ವರದಿಯನ್ನು ಆಗಸ್ಟ್ 2015ರ ಒಳಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ನೀತಿ ಆಯೋಗದ ಮುಖ್ಯ ಮಂತ್ರಿಗಳ ಉಪ ಸಮಿತಿಯು ತೀರ್ಮಾನಿಸಿತು. ಕರ್ನಾಟಕ ರಾಜ್ಯದಲ್ಲಿ ಘನ, ದ್ರವ, ತ್ಯಾಜ್ಯ ಮತ್ತು ಶೌಚಾಲಯ ನಿರ್ವಹಣೆಯನ್ನು ಹೇಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿವೆ ಎಂಬುದರ ಬಗ್ಗೆ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಇದನ್ನು ಎಲ್ಲಾ ಅತಿಥಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖನ

# ಗ್ರಾಮ ವಿಕಾಸ ಯೋಜನೆ – ಒಂದು ಕಿರು ಟಿಪ್ಪಣಿ

– ಬೂವನಹಳ್ಳಿ ನಾಗರಾಜ್

ನಮ್ಮ ಗ್ರಾಮಗಳನ್ನು ಸ್ವಾವಲಂಬಿ, ಸ್ವಾಭಿಮಾನಿ, ಸ್ವಚ್ಛ, ವೈಜ್ಞಾನಿಕ ದೃಷ್ಟಿಕೋನದ ಗ್ರಾಮಗಳನ್ನಾಗಿ ಮಾಡಬೇಕಾಗಿದೆ. ನಮ್ಮ ಗ್ರಾಮಗಳನ್ನು ವ್ಯಾಜ್ಯ ಮುಕ್ತ, ವ್ಯಸನಮುಕ್ತ, ತ್ಯಾಜ್ಯಮುಕ್ತ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳ್ನಾಗಿ ಮಾಡುವ ಹಿನ್ನೆಲೆಯಲ್ಲಿ ಹಾಗೂ ದಿನಾಂಕ 20–10–2014 ರಂದು ಸರ್ಕಾರಿ ಆದೇಶ ಹೊರಡಿಸಿ, ಇತ್ತೀಚೆಗೆ ಯೋಜನೆಯ ಮಾರ್ಗಸೂಚಿಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಬಿಡುಗಡೆಗೊಳಿಸಿರುತ್ತಾರೆ.

ಗ್ರಾಮಗಳ ಸಂಖ್ಯೆ : ಪ್ರತಿ ಗ್ರಾಮೀಣ ಮತಕ್ಷೇತ್ರಕ್ಕೆ ಗರಿಷ್ಠ 5 ಗ್ರಾಮಗಳು (ಎಸ್‌ಸಿ & ಎಸ್‌ಟಿ ಹೆಚ್ಚು ಜನವಸತಿ ಉಳ್ಳ 2 ಗ್ರಾಮಗಳು ಸೇರಿದಂತೆ) ಒಟ್ಟು 189 ಮತಕ್ಷೇತ್ರಗಳಿಗೆ ತಲಾ ಗರಿಷ್ಠ 5 ಗ್ರಾಮಗಳು ಸೇರಿ ಒಟ್ಟು 1000 ಗ್ರಾಮಗಳು.

ಗ್ರಾಮಗಳ ಆಯ್ಕೆ : ಎಸ್‌ಸಿ & ಎಸ್‌ಟಿ ಹೆಚ್ಚು ಜನವಸತಿ ಉಳ್ಳ 2 ಗ್ರಾಮಗಳು ಸೇರಿದಂತೆ ಒಟ್ಟು 5 ಗ್ರಾಮಗಳನ್ನು ಆಯಾ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು ಆಯ್ಕೆ ಮಾಡಲು ಅವಕಾಶ. ಆಯ್ಕೆ ಮಾಡುವ ಗ್ರಾಮವು ಹಿಂದೆ ಯಾವುದೇ ಯೋಜನೆಯಡಿಯಲ್ಲಿ ಆಯ್ಕೆಯಾಗಿರಬಾರದು. ಉದಾ:– ಸ್ವಚ್ಛ ಗ್ರಾಮ, ಕುಗ್ರಾಮ–ಸುಗ್ರಾಮ, ಸುವರ್ಣ ಗ್ರಾಮೋದಯ ಇತ್ಯಾದಿ., ಗ್ರಾಮಗಳನ್ನು ಆಯ್ಕೆ ಮಾಡುವಾಗ . . .

- 5000 ಜನಸಂಖ್ಯೆಯನ್ನು ಮೀರಿದ ಗರಿಷ್ಠ 5 ಗ್ರಾಮಗಳನ್ನು ಗ್ರಾಮ ವಿಕಾಸ ಯೋಜನೆಯಲ್ಲಿ ಆಯ್ಕೆ ಮಾಡಲು ಮಾತ್ರ ಅವಕಾಶ.
- 2 ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಗರಿಷ್ಠ 8000 ಜನಸಂಖ್ಯೆಯನ್ನು ಮೀರಿದ ಗರಿಷ್ಠ 8 ಗ್ರಾಮಗಳ ಆಯ್ಕೆಗೆ ಅವಕಾಶ.
- 5000 ಜನಸಂಖ್ಯೆಯನ್ನು ಮೀರಿದ 1 ಅಥವಾ 5 ಗ್ರಾಮಗಳೊಳಗೆ 1, 2, 3, 4 ಅಥವಾ ಗರಿಷ್ಠ 5 ಗ್ರಾಮಗಳ ಆಯ್ಕೆಗೆ ಅವಕಾಶ
- 5000 ಜನಸಂಖ್ಯೆಯನ್ನು ಮೀರಿದ 1 ರಿಂದ 5 ಗ್ರಾಮಗಳೊಳಗೆ ಹಳ್ಳಿಗಳನ್ನು ಆಯ್ಕೆ ಮಾಡಿದಾಗಲೂ ಅನುದಾನವು ರೂ.3.75 ಕೋಟಿಗಳನ್ನು ಮಾತ್ರ ಹಂಚಿಕೆ ಮಾಡಲು ಸೀಮಿತಗೊಳಿಸಲಾಗುವುದು.
- 2 ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಗರಿಷ್ಠ 8000 ಜನಸಂಖ್ಯೆಯನ್ನು ಮೀರಿದ 1 ಅಥವಾ 8

ರಾಜ್ಯದ ಮಹಾತ್ವಾಕಾಂಕ್ಷಿ ಯೋಜನೆಯಾದ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಹೊರತರಲಾಗಿದೆ. ಈ ಬಗ್ಗೆ ಲೇಖಕರಿಂದ ಕಿರು ಪರಿಚಯ.

*ನಿರ್ದೇಶಕರು (ಸುಗ್ರಾಯೋ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು

ಗ್ರಾಮಗಳೊಳಗೆ 1,2,3,4,5,6,7 ಅಥವಾ 8 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ರೂ.6.00 ಕೋಟಿಗಳನ್ನು ಮಾತ್ರ ಹಂಚಿಕೆ ಮಾಡುವ ಅವಕಾಶ.

- ಗ್ರಾಮಗಳನ್ನು ಆಯ್ಕೆ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ.

**ಅನುದಾನ :** ಪ್ರತಿ ಜನಸಂಖ್ಯೆಗೆ ತಲಾನುದಾನ ರೂ.7,500/- ದಂತೆ 1000 ಜನಸಂಖ್ಯೆವುಳ್ಳ ಗ್ರಾಮಕ್ಕೆ ಕನಿಷ್ಠ ರೂ.0.75 ಕೋಟಿಯಂತೆ 5000 ಜನಸಂಖ್ಯೆಯುಳ್ಳ ಅಥವಾ ಜನಸಂಖ್ಯೆಯನ್ನು ಮೀರಿದರೂ ಸಹ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಠ ರೂ.3.75 ಕೋಟಿಗಳು. ಒಟ್ಟು 1000 ಗ್ರಾಮಗಳಿಗೆ ರೂ.750.00 ಕೋಟಿಗಳ ಅನುದಾನ ನಿಗದಿ.

**ಯೋಜನೆಯಡಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು :**

| ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು | ನಿಗದಿಪಡಿಸಲಾದ ಶೇಕಡಾವಾರು ಮೊತ್ತ |
|---|---|
| • ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ). | 50% |
| • ಗ್ರಂಥಾಲಯ / ಸಾಹಿತಿ ಕಲಾವಿಧರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ. | 12% |
| • ಯುವಕ / ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್ / ಗರಡಿಮನೆ / ಫ್ಲಡ್‌ಲೈಟ್ ಆಟದ ಮೈದಾನ / ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ | 12% |
| • ಸೌರ ಬೆಳಕು ದೀಪಗಳ ಅಳವಡಿಕೆ / LED ದೀಪಗಳು | 3% |
| • ತಿಪ್ಪೆ / ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ) | 10% |
| • ಗ್ರಾಮ ಪಂಚಾಯತ್ ನಡವಳಿಗಳನ್ನು ಟಿ ಲವಿಷನ್ ಮುಖಾಂತರ ನೇರಪ್ರಸಾರ ಹಾಗೂ ಮೂಲ ಸೌಕರ್ಯಕ್ಕೆ | 2% |
| • ಗುಡಿ/ಮಸೀದಿ/ಚರ್ಚ್‌ಗಳ, ಪುನರುಜ್ಜೀವನ/ ಜೀರ್ಣೋದ್ಧಾರ/ ಕಟ್ಟಡ ನಿರ್ಮಾಣಕ್ಕಾಗಿ | 6% |
| • ಫ್ಲೆಕ್ಸಿ ಫಂಡ್ | 5% |

**ಒಗ್ಗೂಡಿಸುವ ಕಾರ್ಯಕ್ರಮಗಳು : ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುವ ಪಟ್ಟಿ.**

| ಕ್ರ. ಸಂ. | ಕಾರ್ಯಕ್ರಮಗಳು | ಅನುಷ್ಠಾನಕ್ಕೆ ತೆಗೆದುಕೊಳ್ಳಲು ನಿಗಧಿಗೊಳಿಸಿದ ಪ್ರಮಾಣ |
|---|---|---|
| 1. | ರೈತರ ಭೂ-ಅಭಿವೃದ್ಧಿ | ಕನಿಷ್ಟ 20 ರೈತರ ಭೂ ಅಭಿವೃದ್ಧಿ |
| 2. | ನಮ್ಮ ಹೊಲ-ನಮ್ಮ ದಾರಿ | ಆಯ್ಕೆಯಾದ ಗ್ರಾಮಗಳಲ್ಲಿ ಕನಿಷ್ಠ 20 ಕಿ.ಮೀ. ಹೊಲಕ್ಕೆ ಹೋಗುವ ಮಣ್ಣಿನ ರಸ್ತೆ ನಿರ್ಮಾಣ |
| 3. | ರೈತರ ಕಣ | ಕನಿಷ್ಟ 2 |
| 4. | ಕುರಿ / ದನದ ದೊಡ್ಡಿ | ಕನಿಷ್ಟ 50 ದನದ ಹಾಗೂ ಕುರಿ ದೊಡ್ಡಿ ಅಗತ್ಯತೆ ಆಧರಿಸಿ |
| 5. | ನಮ್ಮೂರ ಕೆರೆ | ಕನಿಷ್ಠ 2 ಹೊಸ ಕೆರೆ ನಿರ್ಮಾಣ ಅಥವಾ ಕೆರೆಗಳ ಪುನಶ್ಚೇತನ |
| 6. | ಮನೆಗೊಂದು ಶೌಚಾಲಯ | 100%<br>(ಗ್ರಾಮದ ಎಲ್ಲಾ ಮನೆಗಳಿಗೂ ಶೌಚಾಲಯ ಕಡ್ಡಾಯ) |
| 7. | ಆಟದ ಮೈದಾನ | ಕನಿಷ್ಠ 2 ಆಟದ ಮೈದಾನ ನಿರ್ಮಾಣ ಮಾಡಬೇಕು. ಅದರಲ್ಲಿ 1 ಆಟದ ಮೈದಾನವನ್ನು ನಿಗಧಿಯಾದ ಶೇ.12 ರ ಅನುದಾನವನ್ನು ಬಳಸಿಕೊಂಡು ಕಡ್ಡಾಯವಾಗಿ ಫ್ಲಡ್ ಲೈಟ್ ಅಳವಡಿಸಬೇಕು |
| 8. | ಸ್ಮಶಾನಾಭಿವೃದ್ಧಿ | ಕನಿಷ್ಟ 1 ಸ್ಮಶಾನಾಭಿವೃದ್ಧಿಪಡಿಸುವುದು. |
| 9. | ನಮ್ಮ ಹಳ್ಳಿ-ನಮ್ಮ ನೀರು | ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ತೆಗೆದುಕೊಳ್ಳುವುದು |
| 10. | ರಾಜೀವ್ ಗಾಂಧಿ ಸೇವಾ ಕೇಂದ್ರ | ಅವಶ್ಯಕತೆಗನುಸಾರ ಆಯ್ಕೆಯಾದ ಗ್ರಾಮದ ಗ್ರಾಮ ಪಂಚಾಯತ್ ಕೇಂದ್ರ ಸ್ಥಾನದಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ |
| 11. | ಕೃಷಿಕ ಮಹಿಳಾ ಸಶಕ್ತೀಕರಣ | 2 ರಿಂದ 5 ಗುಂಪುಗಳಿಗೆ ಪ್ರೋತ್ಸಾಹ |
| 12. | ರಾಜೀವ್ ಗಾಂಧಿ ಚೈತನ್ಯ ಯೋಜನೆ | 50 ಜನರಿಗೆ ಸ್ವ-ಉದ್ಯೋಗ 50 ಜನರಿಗೆ ಉದ್ಯೋಗಾವಕಾಶ |
| 13. | ಕೌಶಲ್ಯಾಭಿವೃದ್ಧಿ | 50 ಜನರಿಗೆ ತರಬೇತಿ |
| 14. | ಶುದ್ಧ ಕುಡಿಯುವ ನೀರಿನ ಘಟಕ | ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಠ ಒಂದು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಹಾಗೂ ಕನಿಷ್ಠ 85 LPCD ನೀರು ಒದಗಿಸುವುದು |
| 15. | ಸಂಜೀವಿನಿ-ಜೀವನೋಪಾಯ ಅಭಿಯಾನ | 100 ಮಹಿಳೆಯರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಹಾಯಧನ |
| 16. | ಕೊಳವೆ ಬಾವಿ ಮರು ಪೂರಣ ಕಾರ್ಯಕ್ರಮ | ಸ್ಥಳೀಯ ಕೊಳವೆ ಬಾವಿ / ತೆರೆದ ಬಾವಿ ಮರು ಪೂರಣ |
| 17. | ಫುಟ್‌ಬ್ರಿಡ್ಜ್‌ಗಳ ನಿರ್ಮಾಣ | ಅವಶ್ಯಕತೆಗನುಸಾರ 2 ರಿಂದ 5 ಫುಟ್ ಬ್ರಿಡ್ಜ್‌ಗಳ ನಿರ್ಮಾಣ |
| 18. | ಗ್ರಾಮೀಣ ಗೋದಾಮುಗಳ ನಿರ್ಮಾಣ | ಕನಿಷ್ಟ ಒಂದು ಗ್ರಾಮೀಣ ಗೋದಾಮು ನಿರ್ಮಿಸುವುದು |
| 19. | ಉಧ್ಯಾನವನ ನಿರ್ಮಾಣ / ಸಸಿ ನೆಡುವಿಕೆ | ಅಗತ್ಯತೆ ಆಧರಿಸಿ ಉದ್ಯಾನವನ ನಿರ್ಮಾಣ ಹಾಗೂ ಕನಿಷ್ಠ 1000 ಸಸಿಗಳನ್ನು ಗ್ರಾಮದ ವ್ಯಾಪ್ತಿಯಲ್ಲಿ ನೆಡುವುದು |
| 20. | ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ | ಅವಶ್ಯಕತೆಗನುಸಾರ ಒಂದು ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ |
| 21. | ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ | ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸ್ಥಳೀಯ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ನಿಗದಿಯಾದ ಶೇ.12ರ ಅನುದಾನವನ್ನು ಬಳಸಿಕೊಂಡು ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಟ ಒಂದು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ |

**ಅನುಷ್ಠಾನದ ಹೊಣೆ ಗ್ರಾಮ ಪಂಚಾಯತ್‌ಗಳಿಗೆ :** ಪಾರದರ್ಶಕ ಅನುಷ್ಠಾನ ಮತ್ತು ಗುಣಮಟ್ಟದ ಕಾಮಗಾರಿಗಳಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಅನುಷ್ಠಾನದ ಹೊಣೆ.

**ಅನುದಾನ ಬಿಡುಗಡೆ :** ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಇಈಒಖ) ಮೂಲಕ ಗ್ರಾಮ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ. ಗ್ರಾಮ ಪಂಚಾಯಿತಿಗಳು ಪ್ರಗತಿಯನ್ನಾಧರಿಸಿ ಚೆಕ್ ಮೂಲಕ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ.

**ಅನುಷ್ಠಾನ ಸಂಸ್ಥೆಗಳು :** ಕರ್ನಾಟಕ ಪಾರದರ್ಶಕ ನಿಯಮಗಳಂತೆ ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ ಮತ್ತು ಕೆಆರ್‌ಐಡಿಎಲ್.

**ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆ :** ಆಯ್ಕೆಯಾದ ಗ್ರಾಮದಲ್ಲಿ ಎಲ್ಲಾ ಹಂತಗಳ ಚುನಾಯಿತ ಪ್ರತಿನಿಧಿಗಳು ಒಳಗೊಂಡಂತೆ ಗ್ರಾಮಸ್ಥರ ಸಮ್ಮುಖದಲ್ಲಿ ಮಾರ್ಗಸೂಚಿಯಲ್ಲಿ ಅಳವಡಿಸಿರುವ ಕಾಮಗಾರಿಗಳ ಅವಶ್ಯಕತೆಯನ್ನಾಧರಿಸಿ ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಗೆ ಅವಕಾಶ. ಇದಕ್ಕಾಗಿ ವಾರ್ಡ್ ಸಭೆ / ಗ್ರಾಮ ಸಭೆಗಳು ಕಡ್ಡಾಯ.

**ಗುಣಮಟ್ಟ ನಿಯಂತ್ರಕರಿಂದ ಕಾಮಗಾರಿಗಳ ಕಡ್ಡಾಯ ಪರಿಶೀಲನೆಗೆ ಅವಕಾಶ.**

**ಸಾಮಾಜಿಕ ಲೆಕ್ಕ ತಾಪಸಣೆ :** ಅನುದಾನಗಳ ಸಮರ್ಪಕ ಬಳಕೆ ಹಾಗೂ ಗುಣಮಟ್ಟದ ಕಾಮಗಾರಿಗಾಗಿ ಗ್ರಾಮದ ಸಮಸ್ಥರ ಮುಂದೆ ಸಾಮಾಜಿಕ ಲೆಕ್ಕ ತಪಾಸಣೆಗೆ ಅವಕಾಶ.

**ಶಾಸಕರ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿ :**

ಅಭಿವೃದ್ಧಿ ಕಾರ್ಯಗಳ ಪರಿವೀಕ್ಷಣೆಗೆ ಆಯ್ಕೆಯಾದ ಗ್ರಾಮಗಳ ಗ್ರಾಮ ಪಂಚಾಯತ್‌ಗಳಲ್ಲಿ ಯೋಜನಾ ಉಸ್ತುವಾರಿ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| | |
|---|---|
| 1. ಮಾನ್ಯ ಶಾಸಕರು | ಅಧ್ಯಕ್ಷರು |
| 2. ಗ್ರಾಮ ಪಂಚಾಯತ್ ಅಧ್ಯಕ್ಷರು | ಸಹ ಅಧ್ಯಕ್ಷರು |
| 3. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ | ಸದಸ್ಯರು |
| 4. ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| 5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ) | ಸದಸ್ಯರು |
| 6. ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ) | ಸದಸ್ಯರು |
| 7. ಪಂಚಾಯತ್ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು.

# ಗ್ರಾಮ ವಿಕಾಸ ಯೋಜನೆಯ ಅನುಷ್ಠಾನ ವೇಳಾಪಟ್ಟಿ

| ಕ್ರ. ಸಂ. | ಚಟುವಟಿಕೆಗಳು | ನಿಗಧಿಪಡಿಸಿದ ಅವಧಿ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿಗಳು |
|---|---|---|---|
| 1 | ಗ್ರಾಮಗಳ ಆಯ್ಕೆ – ಸಂಬಂಧಪಟ್ಟ ಶಾಸಕರ ಶಿಫಾರಸ್ಸಿನೊಂದಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸುವುದು ಮತ್ತು ಸರ್ಕಾರಕ್ಕೆ ಸಲ್ಲಿಸುವುದು. | 15.07.2015 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 2 | ಜಿಲ್ಲೆಗಳಿಂದ ಬಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ನೀಡುವುದು. | 20.07.2015 | ಸರ್ಕಾರದ ಮಟ್ಟದಲ್ಲಿ. |
| 3 | ಆಯ್ಕೆಯಾದ ಗ್ರಾಮಗಳಲ್ಲಿ ವಾರ್ಡ್ / ಗ್ರಾಮ ಸಭೆ ಜರುಗಿಸಿ ಅಭಿವೃದ್ಧಿ ಯೋಜನೆಯನ್ನು ಸಾರ್ವಜನಿಕರ ಸಹಭಾಗಿತ್ವ ಮತ್ತು ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ತಯಾರಿಸುವುದು. ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆಯುವುದು. | 14.08.2015 | ಗ್ರಾಮ ಪಂಚಾಯತ್. |
| 4 | ಸಿವಿಲ್ ಕಾಮಗಾರಿಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಸುವುದು. | 31.08.2015 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 5 | ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡುವುದು. | 05.09.2015 | ಸಕ್ಷಮ ತಾಂತ್ರಿಕ ಅಧಿಕಾರಿಗಳು. |
| 6 | ಅಭಿವೃದ್ಧಿ ಯೋಜನೆಗೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು. | 05.09.2015 | ಗ್ರಾಮ ಪಂಚಾಯತ್ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ |
| 7 | ಟೆಂಡರ್ ಪ್ರಕ್ರಿಯೆಗಳು | 27.09.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 8 | ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಆರಂಭ ಮಾಡುವುದು. ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು. | 02.10.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 9 | ಮಾಹೆವಾರು ನಿಗಧಿತ ನಮೂನೆಯಲ್ಲಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | ಪ್ರತಿ ಮಾಹೆ | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 10 | ಹಣ ಬಿಡುಗಡೆ | ತ್ರೈಮಾಸಿಕ | ಸರ್ಕಾರವು ಪ್ರಗತಿಯನ್ನಾಧರಿಸಿ ಜಿಲ್ಲಾ ಪಂಚಾಯತ್‌ಗಳ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಚೆಕ್/ EFMs ಮೂಲಕ ಹಣ ಬಿಡುಗಡೆ. |
| 11 | ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿ | ಪ್ರಗತಿಯನ್ನಾಧರಿಸಿ | ಗ್ರಾಮ ಪಂಚಾಯತ್‌ಗಳು ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣ ಪಾವತಿಸಬೇಕು. |
| 12 | ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಮುಕ್ತಾಯಗೊಳಿಸುವುದು. | 02.10.2016 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |

ಲೇಖನ



ರೋಹಿತ್

ದಕ್ಷಿಣ ಕನ್ನಡ ಜಿಲ್ಲೆಯ, ಎಡಮಂಗಲ ಗ್ರಾಮ ಪಂಚಾಯತ್‌ನಲ್ಲಿ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಪೈಪ್ ಕಾಂಪೋಸ್ಟ್ ಮೂಲಕ ಸಾವಯವ ಗೊಬ್ಬರ ತಯಾರಿಕೆ ಮಾಡಿ ಯಶಸ್ಸು ಸಾಧಿಸಿದ್ದಾರೆ.

# ವೈಯುಕ್ತಿಕ ಮನೆಯ ಹಂತದಲ್ಲಿ ತ್ಯಾಜ್ಯ ನಿರ್ವಹಣೆ

"ಸ್ವಚ್ಛತೆಯೆ ದಕ್ಷತೆಯ ಕುರುಹು" ಎಂಬ ನಾಣ್ನುಡಿಯಂತೆ ಎಡಮಂಗಲ ಗ್ರಾಮ ಪಂಚಾಯತ್ ಆಡಳಿತ ಮಂಡಳಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸುಳ್ಯ ಇವುಗಳ ಸಹಯೋಗದೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಆಶಾತಿಮ್ಮಪ್ಪ ಗೌಡ ಇವರ ಕ್ಷೇತ್ರ ವ್ಯಾಪ್ತಿಯ ಎಡಮಂಗಲ ಗ್ರಾಮ ಪಂಚಾಯತ್‌ನಲ್ಲಿ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಘನತ್ಯಾಜ್ಯದಿಂದ ಪೈಪ್ ಕಾಂಪೋಸ್ಟ್ ಮೂಲಕ ಸಾವಯವ ಗೊಬ್ಬರ ತಯಾರಿಸುವ ವಿನೂತನ ಹೆಜ್ಜೆಯೊಂದಿಗೆ ರಾಜ್ಯದಲ್ಲಿ ಪ್ರಾರಂಭಿಸಿದೆ. ಎಡಮಂಗಲ ಗ್ರಾಮ ಪಂಚಾಯತ್‌ನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮನೆಗಳಿಗೆ ತಮ್ಮ ಮನೆಯಲ್ಲಿ ದೈನಂದಿನ ತ್ಯಾಜ್ಯ ಉತ್ಪತ್ತಿಯನ್ನು (ಭೂಮಿಯಲ್ಲಿ ಕೊಳೆಯುವ ಕಸ) ಸೂಕ್ತವಾಗಿ, ಕಡಿಮೆ ವೆಚ್ಚದಲ್ಲಿ ನಿರ್ವಹಣೆ ಮಾಡುವಂತಹ ವಿಧಾನ ಇದಾಗಿದೆ.



## ಪೈಪ್ ಕಾಂಪೋಸ್ಟ್ ವಿಧಾನ:

"ಸಾವಯವ ಗೊಬ್ಬರ ಕೃಷಿಗೆ ಪುಷ್ಠೀಕರ" ಎಂಬ ಅನುಭವದಂತೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್, ನೆಹರು ಮೆಮೋರಿಯಲ್ ಕಾಲೇಜು, ಸುಳ್ಯದ ಎಂ.ಎಸ್.ಡಬ್ಲ್ಯು ವಿದ್ಯಾರ್ಥಿಗಳ ಸಹಯೋಗದೊಂದಿಗೆ ಮರ್ಧೂರಡ್ಕ ಕಾಲೋನಿಯ 30 ಮನೆಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯಗಳನ್ನು (ಭೂಮಿಯಲ್ಲಿ ಕರಗುವ ವಸ್ತುಗಳು) ತಾವೇ ಸೂಕ್ತವಾಗಿ ನಿರ್ವಹಣೆ ಮಾಡುವ ದೃಷ್ಟಿಯಿಂದ ಪ್ರತಿ ಮನೆಗಳಲ್ಲಿ ಪೈಪ್ ಕಾಂಪೋಸ್ಟಿಂಗ್ ಅಳವಡಿಸಿ, ಮನೆಗಳಲ್ಲಿ

ಆರ್ಯಾಪು ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ
ಪಿನ್-574 210, ಫೋನ್:- 9743802863

ಉತ್ಪತಿಯಾದ ಹಸಿ ಕಸಗಳನ್ನು ಪೈಪ್ ಕಾಂಪೋಸ್ಟಿಂಗ್ ಮೂಲಕ 40 ದಿನಗಳಲ್ಲಿ ಫಲವತ್ತಾದ ಸಾವಯವ ಜೈವಿಕ ಗೊಬ್ಬರವನ್ನು ಪಡೆಯುವ ಸರಳ ವಿಧಾನ ಇದಾಗಿದೆ. 6ಇಂಚು ದಪ್ಪದ 6ಅಡಿ ಎತ್ತರದ ಪೈಪ್ ಅನ್ನು ಒಂದುವರೆ ಅಡಿ ಆಳದಲ್ಲಿ ನೇರವಾಗಿ ನಿಲ್ಲಿಸಬೇಕು, ನಂತರ ಪೈಪ್‌ನ ಒಳಗೆ 1 ಕೇಜಿ ಬೆಲ್ಲದ ನೀರು ಮತ್ತು 2 ಕೇಜಿ ಸಗಣಿ ನೀರು ಬೆರೆಸಿ ಪೈಪ್ ಒಳಗಡೆ ಹಾಕಿ ನಂತರ ಮನೆಯಲ್ಲಿ ಉತ್ಪತಿಯಾದ ಹಸಿಕಸವನ್ನು ಪೈಪ್‌ಗೆ ನೇರವಾಗಿ ಹಾಕಬೇಕು ವಾರಕ್ಕೊಮ್ಮೆ ಪೈಪ್‌ನಲ್ಲಿ ತುಂಬಿರುವ ತ್ಯಾಜ್ಯದ ಮೇಲೆ ಒಂದು ಹಿಡಿ ಮಣ್ಣು ಮತ್ತು 1/2 ಲೀಟರ್‌ನಷ್ಟು ಬೆಲ್ಲದ ನೀರನ್ನು ಹಾಕುತ್ತಿರಬೇಕು. ಇದರಿಂದ ಜೈವಿಕ ಬ್ಯಾಕ್ಟೀರಿಯ ಉತ್ಪಾದನೆಗೆ ಸಹಾಯವಾಗುತ್ತದೆ. ಹಾಗೂ ಜೈವಿಕ ಪ್ರಕ್ರಿಯೆ ಚುರುಕುಗೊಳ್ಳುತ್ತದೆ. ಒಂದು ಪೈಪ್ ಸುಮಾರು 3 ತಿಂಗಳವರೆಗೆ ಬರುತ್ತದೆ. ಈ



ಗ್ರಾಮ ಪಂಚಾಯತ್ ಅಧ್ಯಕ್ಷರಿಂದ ಪೈಪ್ ಕಾಂಪೋಸ್ಟ್‌ಗೆ ಚಾಲನೆ ನೀಡುತ್ತಿರುವುದು

ಪೈಪ್‌ನ ಒಳಗಡೆ ಶೇಖರವಾದ ಕಸ 40 ದಿನಗಳಲ್ಲಿ ಉತ್ತಮವಾದ ಸಾವಯುವ ಗೊಬ್ಬರವಾಗಿ ಪರಿವರ್ತನೆಗೊಳ್ಳುತ್ತದೆ. ಇದನ್ನು ಮನೆಯ ಕೈತೋಟ ತರಕಾರಿ ಅಥವಾ ಇತರೆ ಎಲ್ಲಾ ಕೃಷಿಗೆ ಬಳಸಬಹುದಾಗಿದೆ.

ಎಡಮಂಗಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಈಗಾಗಲೇ ಪೈಪ್ ಕಾಂಪೋಸ್ಟ್ ಮಾತ್ರವಲ್ಲದೇ ವಿಶೇಷವಾಗಿ ವರ್ತಕರನ್ನು ಗಮನದಲ್ಲಿಟ್ಟುಕೊಂಡು ಪೇಟೆಯಲ್ಲಿ ಉತ್ಪತ್ತಿಯಾಗುತ್ತಿರುವ (ಭೂಮಿಯಲ್ಲಿ



ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ, ಜಿಲ್ಲಾ ಸಂಯೋಜಕರು ಭೇಟಿ ನೀಡಿ ಪೈಪ್ ಕಾಂಪೋಸ್ಟ್ ಪ್ರಕ್ರಿಯೆ ಬಗ್ಗೆ ಪರಿಶೀಲನೆ ಮಾಡುತ್ತಿರುವುದು.

ಕರಗುವ ವಸ್ತು) ಘನತ್ಯಾಜ್ಯವನ್ನು ತಿಪ್ಪೆಗುಂಡಿ ಮೂಲಕ ಸಾವಯವ ಗೊಬ್ಬರವನ್ನು ತಯಾರಿಸುವ ಮೂಲಕ ವಿನೂತನವಾಗಿ (ಪ್ರಾಯೋಗಿಕವಾಗಿ) ಯಶಸ್ಸನ್ನುಗಳಿಸಿದ್ದು "ಪರಿಶುದ್ಧವಾದ ಗಾಳಿ ಮತ್ತು ನೀರು ಜಗತ್ತಿನ ಮೊಟ್ಟ ಮೊದಲ ಔಷಧ" ಎಂಬ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಎಡಮಂಗಲ ಗ್ರಾಮದ ಅಧಿಕಾರಿ ವರ್ಗ/ ಆಡಳಿತ ಮಂಡಳಿ/ಸಿಬ್ಬಂದಿ ವರ್ಗ ಹಾಗೂ ಸಮುದಾಯದ ಕಾರ್ಯ ಶ್ಲಾಘನೀಯವಾದದ್ದು.

### ತಿಪ್ಪೆಗುಂಡಿಯಿಂದ ಸಾವಯವ ಗೊಬ್ಬರ ಪಡೆಯುವ ವಿಧಾನ:





- 2x2x2 ಉದ್ದ ಮತ್ತು ಅಗಲ ಹಾಗೂ ಆಳದ ಒಂದು ಗುಂಡಿ ರಚನೆ.
- ಪೇಟೆ ಅಥವಾ ಮನೆ, ಶಾಲೆ, ಅಂಗನವಾಡಿಗಳಲ್ಲಿ ಉತ್ಪತ್ತಿಯಾದ, ಭೂಮಿಯಲ್ಲಿ ಕರಗುವ ವಸ್ತು (ಕಾಗದ, ತರಕಾರಿ ಅಡಿಗೆ ಮನೆಯ ತ್ಯಾಜ್ಯ) ಗಳನ್ನು ಗುಂಡಿಗೆ ಹಾಕುವುದು.
- ಸ್ವಲ್ಪ ಪ್ರಮಾಣದ ಸಗಣಿ ನೀರನ್ನು ಗುಂಡಿಯಲ್ಲಿ ಹಾಕಿ ಅದರ ಮೇಲೆ ತ್ಯಾಜ್ಯ ಹಾಕಿದರೆ ಉತ್ತಮ.
- ಗುಂಡಿಯಲ್ಲಿ ತ್ಯಾಜ್ಯ ಹಾಕಿದ ಮೇಲೆ ಸ್ವಲ್ಪ ಪ್ರಮಾಣದ ಮಣ್ಣನ್ನು ತ್ಯಾಜ್ಯದ ಮೇಲೆ ಹರಡುವುದು.
- ಗುಂಡಿ ಭರ್ತಿ ಆದಲ್ಲಿ ಬದಲಿ ಗುಂಡಿ. ಅಥವಾ



**ತಿಪ್ಪೆಗುಂಡಿ ಮೂಲಕ ಕಸದಿಂದ ಸಾವಯವ ಗೊಬ್ಬರವನ್ನು ತಯಾರಿಸಿರುವ ಸ್ಥಳೀಯ ಪ್ರಗತಿಪರ ಕೃಷಿಕರು**

ಗುಂಡಿಯಲ್ಲಿ ಉತ್ಪತ್ತಿಯಾದ ಗೊಬ್ಬರವನ್ನು ಹೊರತೆಗೆದು, ಕೃಷಿಗೆ ಬಳಸುವುದು, ಮತ್ತು ಗುಂಡಿಯನ್ನು ಪುನ: ಬಳಕೆ ಮಾಡುವುದು.


ಈ ಕಾರ್ಯಕ್ರಮ ಯಶಸ್ವಿಯಾಗಲು ಇದರ ಬೆನ್ನೆಲುಬಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಮಾಧವ ಅಮೀನ್, ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ವಿಶಾಲಾಕ್ಷಿ ಹಾಗೂ ಶ್ರೀ ರಾಮಕೃಷ್ಣ ರೈ,



ಮಾಲೇಂಗ್ರಿ, ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಗ್ರಾಮ ಪಂಚಾಯತ್ ಸದಸ್ಯರು, ಶ್ರೀಮತಿ ಶುಭದಾ ಎಸ್.ರೈ, ಶ್ರೀಮತಿ ಆಶಾದೀಪ, ಶ್ರೀ ಸುಂದರ ಗೌಡ, ಶ್ರೀ ರೋಹಿತ್ ಎ. ಆರ್. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಂಗಳೂರು, ಹಾಗೂ ಶ್ರೀ ಉದಯಕುಮಾರ್ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗ ಹಾಗೂ ಊರ ಸಮಸ್ತ ಸಂಘ ಸಂಸ್ಥೆಗಳ ಕಾರ್ಯ ಶ್ಲಾಘನೀಯ ವಾದದ್ದು. ಹಾಗೂ ಈ ಪದ್ಧತಿಯ ಅನುಕೂಲವನ್ನು ಅರಿತು, ಇದನ್ನು ಅಳವಡಿಸಿ ಕೊಂಡು, ತ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆಯಲ್ಲಿ ಭಾಗಿಯಾದ ಎಲ್ಲಾ ಗ್ರಾಮಸ್ಥರೂ ಕೂಡ ಅಭಿನಂದನಾರ್ಹರು.

ಲೇಖನ

# ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಗ್ರಾಮ ಸ್ವರಾಜ್



ಡಾ. ಟಿ. ಆರ್. ಚಂದ್ರಶೇಖರ

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪಂಚಾಯತ್ ರಾಜ್ ಗ್ರಾಮ ಸ್ವರಾಜ್ ಎಂದು ಕರೆಯಬೇಕೆಂದು ಶ್ರೀ ರಮೇಶ್‌ಕುಮಾರ್ ಸಮಿತಿ ಸಲಹೆ ನೀಡಿದೆ. ಗ್ರಾಮಗಳು ಎಲ್ಲಾ ದೃಷ್ಟಿಯಿಂದ ಸ್ವಾವಲಂಬಿಗಳಾಗಬೇಕೆಂಬ ಮಹಾತ್ಮ ಗಾಂಧಿಯವರ ಕನಸು ನನಸು ಮಾಡುವುದು ನಮ್ಮೆಲ್ಲರ ಹೊಣೆ.

ಸ್ವಾತಂತ್ರ್ಯಾನಂತರ ಕಳೆದ 68 ವರ್ಷಗಳ ಅವಧಿಯಲ್ಲಿ ನಮ್ಮ ಗ್ರಾಮೀಣ ಆರ್ಥಿಕತೆ, ಸಮಾಜ ಮತ್ತು ರಾಜಕಾರಣಗಳಲ್ಲಿ ಅನೇಕ ಬಗೆಯ ಮೂಲಭೂತ ಮತ್ತು ಗಣನೀಯ ಬದಲಾವಣೆಗಳಾಗಿವೆ. ಭಾರತದ ಬೆನ್ನೆಲುಬು ಕೃಷಿ ಎಂದು ಹೇಳಲಾಗುತ್ತಿತ್ತು. ಇಂದು ಆ ಸ್ಥಿತಿಯಿಲ್ಲ. ಕರ್ನಾಟಕವನ್ನೇ ತೆಗೆದುಕೊಂಡರೆ 2011ರ ಜನಗಣತಿ ಪ್ರಕಾರ ನಮ್ಮಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಶೇ 50ಕ್ಕಿಂತ ಕಡಿಮೆ. ನಮ್ಮ ರಾಜ್ಯದ ಒಟ್ಟು ವರಮಾನಕ್ಕೆ ಕೃಷಿಯ ಕಾಣಿಕೆ ಕನಿಷ್ಟ ಶೇ 15ಕ್ಕಿಳಿದಿದೆ. ನಮ್ಮ ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ನಗರವಾಸಿಗಳ ಪ್ರಮಾಣ ಶೇ38 ಮೀರುತ್ತದೆ. ಅಂದರೆ 'ರೀಯಲ್ ಇಂಡಿಯಾ: ರೂರಲ್ ಇಂಡಿಯಾ' ಅನ್ನುವ ಸ್ಥಿತಿ ಇಂದು ಉಳಿದಿಲ್ಲ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ತಾತ್ಪೂರ್ತಿಕವಾಗಿ ವಲಸೆ ಹೋಗುವವರ ಪ್ರಮಾಣ ಅತಿಯಾಗಿದೆ. ನಮ್ಮ ರಾಜ್ಯದಲ್ಲಿ ಕೃಷಿ ಹಿಡುವಳಿಗಾರರ ಸಂಖ್ಯೆ 2001ರಲ್ಲಿ 68 ಲಕ್ಷವಿದ್ದುದು 2011ರಲ್ಲಿ ಅವರ ಸಂಖ್ಯೆ 65 ಲಕ್ಷಕ್ಕಿಳಿದಿದೆ. ಜನಸಂಖ್ಯೆಯ ಬೆಳವಣಿಗೆಯು ಇಂದು



ಸಮಸ್ಯೆಯಾಗಿ ಉಳಿದಿಲ್ಲ. ಕರ್ನಾಟಕವು ಸಮತೋಲನದ ಜನಸಂಖ್ಯೆಯ ಬೆಳವಣಿಗೆಯ ಮಟ್ಟವನ್ನು ತಲುಪಿದೆ ಎಂದು ಹೇಳಲಾಗುತ್ತಿದೆ.

ಈ ಎಲ್ಲ ಬದಲಾದ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ನಾವು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಹಾಗೆ ನೋಡಿದರೆ ನಮ್ಮ ಹಳ್ಳಿಗಳು ಯಾರಿಗೂ ಬೇಡವಾಗಿವೆ. ಹಳ್ಳಿಯ ಬದುಕನ್ನು ಜನರು ಇಷ್ಟ ಪಡುತ್ತಿಲ್ಲ. ಗ್ರಾಮೀಣ ಬದುಕಿನ ಬಗ್ಗೆ ಜನರಿಗೆ 'ಅಭಿಮಾನ' ಇದೆ ಎಂದು ಧೈರ್ಯದಿಂದ ಹೇಳುವ ಸ್ಥಿತಿಯಿಲ್ಲ. ಸರ್ಕಾರಗಳಿಗೂ ಗ್ರಾಮೀಣ ಪ್ರದೇಶದ ಬಗ್ಗೆ ನಗರ ಪ್ರದೇಶಕ್ಕಿದ್ದಷ್ಟು ಕಾಳಜಿ ಇದ್ದಂತೆ ಕಾಣುತ್ತಿಲ್ಲ.

'ವಚನ', ಸೊಸೈಟಿ ರಸ್ತೆ, ಅಮರಾವತಿ, ಹೊಸಪೇಟೆ 583 201

ಪಂಚಾಯತ್ ರಾಜ್ ವ್ಯವಸ್ಥೆಯನ್ನು 'ಪಂಚಾಯತ್ ರಾಜ್ ಗ್ರಾಮ ಸ್ವರಾಜ್' ಎಂದು ಕರೆಯಬೇಕೆಂದು ಶ್ರೀ ರಮೇಶ್ ಕುಮಾರ್ ಸಮಿತಿಯು ಸಲಹೆ ಮಾಡಿದೆ. ನಮ್ಮ ಗ್ರಾಮಗಳು ಎಲ್ಲ ದೃಷ್ಟಿಯಿಂದ ಸ್ವಾವಲಂಬಿಗಳಾಗಬೇಕು ಎಂಬುದು ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ ಕನಸಾಗಿತ್ತು. ನಮಗೆ ಗೊತ್ತಿದೆ. ಇಂದು ಆ ಬಗೆಯ ಗ್ರಾಮ ಸ್ವರಾಜ್ ಸಾಧ್ಯವಿಲ್ಲ. ವಿದ್ಯುಚ್ಛಕ್ತಿ, ನೀರು, ಅನುಭೋಗಿ ಸರಕುಗಳು, ಉನ್ನತ ಶಿಕ್ಷಣ, ಪ್ರೌಢ ವೈದ್ಯಕೀಯ ಸೇವೆ ಮುಂತಾದವುಗಳಿಗೆ ನಮ್ಮ ಗ್ರಾಮಸ್ಥರು ನಗರಗಳನ್ನು ಅವಲಂಬಿಸಬೇಕಾಗುತ್ತದೆ.

## ಪಂಚಾಯತ್ ಗ್ರಾಮ ಸ್ವರಾಜ್ ವ್ಯವಸ್ಥೆ ಯಾಕೆ ಬೇಕು? ಗ್ರಾಮ ಪಂಚಾಯತಿಗಳು ಯಾಕೆ ಬೇಕು?

ನಮ್ಮ ರಾಜ್ಯದಲ್ಲಿ ನಗರವಾಸಿಗಳ ಪ್ರಮಾಣ 2011ರಲ್ಲಿ ಶೇ38ರಷ್ಟಾಗಿದೆ. ನಾವು ಬಯಸಲಿ-ಬಿಡಲಿ ನಮ್ಮ ನಗರಗಳ ಬೆಳವಣಿಗೆಯನ್ನು ತಡೆಯದೆ ಬೇರೆ ಮಾರ್ಗವಿಲ್ಲ. ನಮ್ಮ ಬೆಂಗಳೂರನ್ನೇ ತೆಗೆದುಕೊಳ್ಳಿ. ಎಷ್ಟು ಜನರನ್ನು ಅದು ಭರಿಸಬಲ್ಲದು? ಅದರ ಧಾರಣ ಶಕ್ತಿ ಎಷ್ಟಿರಬಹುದು? ನಮಗೆ ಈಗ ಗೊತ್ತಿರುವಂತೆ ಬೆಂಗಳೂರು ಅತಿಯಾಗಿ ಬೆಳೆದಿದೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪ್ರತಿ ಆರು ಜನರಲ್ಲಿ ಒಬ್ಬರು ಬೆಂಗಳೂರಿನ ವಾಸಿಗಳಾಗಿದ್ದಾರೆ. ಅದರ ಜನಸಂಖ್ಯೆಯು ಒಂದು ಕೋಟಿ ಮೀರುತ್ತದೆ. ಇದು ಸುಸ್ಥಿರಗತಿ ಅಭಿವೃದ್ಧಿಯಲ್ಲ. ಪಶ್ಚಿಮದ ದೇಶಗಳಲ್ಲಿದ್ದಂತೆ ಕೃಷಿಯ ಅವಲಂಬನೆಯು ಕಡಿಮೆಯಾಗಿ ಉದ್ದಿಮೆ ಮತ್ತು ಸೇವಾ ಕ್ಷೇತ್ರಗಳು ನಮ್ಮ ದೇಶದಲ್ಲೂ ವೇಗವಾಗಿ ಮತ್ತು ಬಲಾಢ್ಯವಾಗಿ ಬೆಳೆಯಬೇಕು ಎಂದು ಆಶಿಸುವುದು ಸರಿಯಲ್ಲ. ಅಲ್ಲಿ ನಡೆದಂತೆ ಇಲ್ಲಿಯೂ ನಡೆಯಬೇಕು ಎಂಬ ನಿಯಮವೇನಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆ ಯಾಕೆ ಬೇಕು ಅಂದರೆ ಅದು ನಮ್ಮ ಕೃಷಿ ಸಂಸ್ಕೃತಿಯ ರಕ್ಷಣೆಗೆ ಬೇಕು.

- ಪಂಚಾಯತ್ ರಾಜ್ಯ ವ್ಯವಸ್ಥೆ ಯಾಕೆ ಬೇಕು ಅಂದರೆ ನಗರೀಕರಣ ಆಧಾರಿತ ಅಭಿವೃದ್ಧಿ ಅನ್ನುವುದು ಸುಸ್ಥಿರಗತಿಯೂ ಅಲ್ಲ ಮತ್ತು ಜೀವಪರವೂ ಅಲ್ಲ. ಅದಕ್ಕೆ ಪಂಚಾಯತ್ ರಾಜ್ ವ್ಯವಸ್ಥೆ ಬೇಕು.
- ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಮಾತ್ರ ನಮ್ಮ ಗ್ರಾಮೀಣ ಸಂಸ್ಕೃತಿ, ಸಂಗೀತ, ಕರಕುಶಲಕಲೆ, ಪ್ರಕೃತಿಪರವಾದ ಜೀವನ ಮುಂತಾದವುಗಳ ರಕ್ಷಣೆ ಸಾಧ್ಯ.
- ಪಂಚಾಯತ್ ರಾಜ್ ವ್ಯವಸ್ಥೆಯಿಂದ 'ಸಣ್ಣದು ಸುಂದರ' ಎಂದು ಹೇಳಲಾಗುತ್ತದೆ. ಬೃಹತ್ತಾದುದು, ದೊಡ್ಡದು ಅಸಹ್ಯಕರ ಮತ್ತು ಅಪಾಯಕರವಾಗಿರುತ್ತದೆ.
- ಪಂಚಾಯತ್ ರಾಜ್ಯ ವ್ಯವಸ್ಥೆಯು ನಮ್ಮ ಜನತಂತ್ರದ ಬುನಾದಿಯಾಗಿದೆ. ಪ್ರಜಾಪ್ರಭುತ್ವ ಸಂಭವಿಸ ಬೇಕಾದುದೇ ಗ್ರಾಮಗಳಲ್ಲಿ!
- ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಮಾತ್ರ ಮಳೆ ನೀರು ಕೊಯ್ಲು, ಅಂತರ್ಜಲ ರಕ್ಷಣೆ, ಅರಣ್ಯಗಳನ್ನು ಕಾಪಾಡುವುದು, ಸಾವಯವ ಬದುಕನ್ನು ಸಾಧಿಸಿಕೊಳ್ಳುವುದು ಸಾಧ್ಯ.
- ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಮಾತ್ರ ನಮ್ಮ ಕೆರೆ ಕಟ್ಟೆಗಳನ್ನು, ಕಾಲುವೆ-ಕುಂಟೆಗಳನ್ನು, ಊರೊಟ್ಟಿಗಿನ ಸಂಪನ್ಮೂಲಗಳನ್ನು ರಕ್ಷಿಸುವುದು ಸಾಧ್ಯ ಅಥವಾ ಅಂತಹ ವ್ಯವಸ್ಥೆಯಲ್ಲಿ ಮಾತ್ರ ಅವುಗಳಿಗೆ ಅವಕಾಶವಿರುತ್ತದೆ.
- ಪಂಚಾಯತ್ ರಾಜ್ ವ್ಯವಸ್ಥೆಯಿದ್ದರೆ ಮಾತ್ರ ನಮ್ಮ ಭಾಷೆಯು ಉಳಿಯುತ್ತದೆ, ಬೆಳೆಯುತ್ತದೆ. ಅಲ್ಲಿ ಅದಕ್ಕೆ ಪೋಷಣೆ ದೊರೆಯುತ್ತದೆ.
- ಪ್ರಜಾಪ್ರಭುತ್ವ ಅಂದರೆ 'ಅನುಸಂಧಾನಾತ್ಮಕ ಸರ್ಕಾರ' (ಗೌರ್ವನಮೆಂಟ್ ಬೈ ಡಿಸ್‌ಕಷನ್) ಎಂಬ ಅರ್ಥವಿದೆ. ಇದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಾತ್ರ ಸಂಭವಿಸಬಲ್ಲದು. ಜನವಸತಿಗಳು, ವಾರ್ಡ್‌ಗಳು, ಗ್ರಾಮಗಳು ಬಹಳ ಚಿಕ್ಕವಿರುವುದರಿಂದ ಅಲ್ಲಿ ಚರ್ಚೆ ಸಾಧ್ಯ, ಸಂವಾದ ಸಾಧ್ಯ, ಅನುಸಂಧಾನ ಸಾಧ್ಯ.
- ಪಂಚಾಯತ್ ರಾಜ್ ವ್ಯವಸ್ಥೆಯಿಂದ ಬ್ರಹ್ಮರಾಕ್ಷಸನಂತೆ ಬೃಹದಾಕಾರವಾಗಿ ಬೆಳೆಯುವ ಅಧಿಕಾರಶಾಹಿ ಎಂಬ ವ್ಯವಸ್ಥೆಯನ್ನು ತಡೆಯಬಹುದು.

- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಾತ್ರ ಜನರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವುದು ಸಾಧ್ಯ. ಜನರನ್ನು ಒಳಗೊಳ್ಳುವ ಅಭಿವೃದ್ಧಿ ಅಲ್ಲಿ ಮಾತ್ರ ಸಂಭವಿಸಬಲ್ಲದು.
- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ, ಮಹಿಳೆಯರ ರಕ್ಷಣೆ ಅಲ್ಲಿ ಸಾಧ್ಯ.

## ನಮ್ಮ ಪಂಚಾಯತ್ ರಾಜ್ ಸಂಸ್ಥೆಗಳು ಭ್ರಷ್ಟಾಚಾರದ ಕೂಪವೇ?

ಅನವಶ್ಯಕವಾಗಿ, ಅಗತ್ಯಕ್ಕಿಂತ ಅಧಿಕವಾಗಿ, ಉತ್ಪ್ರೇಕ್ಷೆಯಿಂದ – blown out of proporetion ಅನ್ನುತ್ತೇವಲ್ಲ ಹಾಗೆ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ಅತಿಯಾಗಿ ವರ್ಣಿಸಲಾಗುತ್ತಿದೆ. ನಿಜ, ಅಲ್ಲಿ ಭ್ರಷ್ಟಾಚಾರವಿದೆ. ಲಂಚ–ರುಶುವತ್ತು ಮುಂತಾದ ಸಮಸ್ಯೆಗಳಿವೆ. ಆದರೆ ಅದು ಎಲ್ಲ ಕಡೆಯು ಇದೆ ತಾನೇ! ಈ ಟೀಕೆ ಎಲ್ಲಿಯವರೆಗೆ ಹೋಗಿದೆಯೆಂದರೆ ಇದನ್ನು 'ಭ್ರಷ್ಟಾಚಾರದ ವಿಕೇಂದ್ರೀಕರಣ' ಎಂದು ಹೀಯಾಳಿಸಲಾಗುತ್ತಿದೆ. ಇದು ಸರಿಯಲ್ಲ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಿರುವ ಅಧಿಕಾರ, ಹಣಕಾಸು ಸಂಪನ್ಮೂಲ, ಸಿಬ್ಬಂದಿ ಅತ್ಯಲ್ಪ. ಅಲ್ಲಿ ಭ್ರಷ್ಟಾಚಾರ ಎಷ್ಟು ನಡೆಯಲು ಸಾಧ್ಯ? ಭ್ರಷ್ಟಾಚಾರ ಕೆಟ್ಟದು. ಅದನ್ನು ತಡೆಯಬೇಕು. ಈ ಮಾತು ನಮ್ಮ ದೇಶದ ಎಲ್ಲ ರಾಜಕೀಯ ಸಂಸ್ಥೆಗಳಿಗೂ ಅನ್ವಯವಾಗುವ ಸಂಗತಿಯಾಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಅದು ನಮ್ಮ ಸಮಾಜಕ್ಕೂ ಅನ್ವಯವಾಗುವ ಸಂಗತಿಯಾಗಿದೆ.

## ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ ವ್ಯವಸ್ಥೆಯ ದೃಷ್ಟಿಯಿಂದ ಅಭಿವೃದ್ಧಿ ಎಂದರೇನು?

ಇಂದು ಬಂಡವಾಳವನ್ನೇ ಅಭಿವೃದ್ಧಿ ಎಂದು ತಿಳಿಯಲಾಗುತ್ತಿದೆ. ವಿದೇಶಿ ಬಂಡವಾಳ(ಎಫ್ ಡಿ ಐ) ಎಂದು ನಾವು ಜಪ ಮಾಡುತ್ತಿದ್ದೇವೆ. ಕಾಮಗಾರಿಗಳು, ಥಳ ಥಳನೆ ಹೊಳೆಯು ರಸ್ತೆಗಳು, ಗಗನಚುಂಬಿ ಕಟ್ಟಡಗಳು, ವರಮಾನ ಏರಿಕೆ ಇವು ಅಭಿವೃದ್ಧಿಯೇ? ಒಂದು ಹಂತದವರೆಗೆ ಸರಿ. ಇವೆಲ್ಲ ಅಭಿವೃದ್ಧಿಗೆ ಬೇಕು. ಆದರೆ ಅಭಿವೃದ್ಧಿ ಅಂದರೆ ಇಷ್ಟೇ ಅಲ್ಲ. ಇವೆಲ್ಲ ಅಭಿವೃದ್ಧಿಯ ಸಾಧನಗಳು.

ಜನರಿಗೆ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು, ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಮಕ್ಕಳಿಗೆ ಅವರ ಗಂಡಂದಿರು ಹೊಡೆಯುವುದನ್ನು ನಿಲ್ಲಿಸುವುದು, ಮಳೆ ನೀರು ಕೊಯ್ಲು, ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯುವುದು ಅಭಿವೃದ್ಧಿಯಲ್ಲವೇ? ಗ್ರಾಮಗಳಲ್ಲಿ ಆರೋಗ್ಯ ಸಬ್ ಸೆಂಟರ್, ಆಶಾ ಕಾರ್ಯಕರ್ತೆಯರು, ಅಂಗನವಾಡಿಗಳು, ಶಾಲೆಗಳು, ಇವೆಲ್ಲ ಅಭಿವೃದ್ಧಿಯ ಸಂಗತಿಗಳಲ್ಲ!

ನಮ್ಮಲ್ಲಿ ಲಾಗಾಯ್ತಿನಿಂದ ಆರೋಗ್ಯವನ್ನು 'ಆರೋಗ್ಯ ಸಂಪತ್ತು' ಎಂದು ಕರೆದುಕೊಂಡು ಬಂದಿದ್ದೇವೆ. ಆರೋಗ್ಯವು ಅಭಿವೃದ್ಧಿಯ ಅವಿಭಾಜ್ಯ ಅಂಗ. ಮಹಿಳೆಯರನ್ನೂ ಸೇರಿಸಿಕೊಂಡು ಜನರ ಮತ್ತು ಮಕ್ಕಳ ಆರೋಗ್ಯವನ್ನು ಸಂರಕ್ಷಿಸುವುದು ಅಭಿವೃದ್ಧಿಯೇ!

ವರಮಾನ ಏರಿಕೆಯೇ ಅಭಿವೃದ್ಧಿಯಲ್ಲ. ಮೆಹಬೂಬ್ ಉಲ್ ಹಕ್ 1990ರಲ್ಲಿ ಹೇಳಿರುವಂತೆ 'income is not the sum total of human lives'. ಬಜೆಟ್ಟಿನ ಗಾತ್ರ ಹೆಚ್ಚಾಗುವುದು ಅಭಿವೃದ್ಧಿಯಲ್ಲ. ನಮ್ಮ ಬಜೆಟ್ಟಿನ ಗಾತ್ರ ಒಂದು ಲಕ್ಷ ಕೋಟಿ ಮೀರಿದೆ ಅನ್ನುವುದನ್ನೆ ಅಭಿವೃಧಿ ಸಾಧನೆ ಅನ್ನುವ ರೀತಿಯಲ್ಲಿ ಮಾತನಾಡುವುದು ಕೇಳಿ ಬರುತ್ತದೆ. ಇಲ್ಲಿ ಕೇಳಿಕೊಳ್ಳಬೇಕಾದ ಪ್ರಶ್ನೆ ಯಾರ ವರಮಾನ? ಯಾವುದರ ಬಜೆಟ್ಟು? ಅಭಿವೃದ್ಧಿ ಅನ್ನುವುದು ಜನರು ಅನುಭವಿಸಬೇಕಾದ ಒಂದು ಸಂಗತಿ. ಈ ಕಾರಣಕ್ಕೆ ಅಮರ್ತ್ಯ ಸೇನ್ ಮತ್ತೆ ಮತ್ತೆ ಅಭಿವೃದ್ಧಿ ಅಂದರೆ ಜನರ ಸಮೃದ್ಧ ಬದುಕೇ ವಿನಾ ಸಮೃದ್ಧ ಆರ್ಥಿಕತೆಯಲ್ಲ ಎಂದು ಹೇಳುತ್ತಾ ಬಂದಿದ್ದಾರೆ.

ಅಕ್ಷರ, ಆರೋಗ್ಯ, ಆಹಾರ, ಆಶ್ರಯ—ಇವೆಲ್ಲ ಅಭಿವೃದ್ಧಿಯ ಸೂಚಿಗಳು.

ಅಕ್ಷರವೇ ಅಭಿವೃದ್ಧಿ.

ಆರೋಗ್ಯವೇ ಅಭಿವೃದ್ಧಿ.

ಆಹಾರವೇ ಅಭಿವೃದ್ಧಿ.

ಆಶ್ರಯವೇ ಅಭಿವೃದ್ಧಿ.

ಆದಾಯವೇ ಅಭಿವೃದ್ಧಿ.

They are the constituent components of development. ವರ್ಲ್ಡ್ ಬ್ಯಾಂಕ್ ಲಿಂಗ

ಸಮಾನತೆಯನ್ನು 'ಸ್ಮಾರ್ಟ್ ಎಕನಾಮಿಕ್ಸ್' ಎಂದು ಕರೆದಿದೆ. ಅನಕ್ಷರತೆ, ಬಡತನ, ಹಸಿವು, ಅಪೌಷ್ಟಿಕತೆ ಮುಂತಾದವು ಮಾನವ ಹಕ್ಕಿನ ಉಲ್ಲಂಘನೆಯ ಸಂಗತಿಗಳು. ಬಡವರಾಗಿಲ್ಲದಿರುವುದು ಮಾನವ ಹಕ್ಕು. ಹಸಿವಿನಿಂದ ಬಿಡುಗಡೆ ಮಾನವ ಹಕ್ಕು. ಅಭಿವೃದ್ಧಿಯು ಹಕ್ಕಿನ ಸಂಗತಿಯೇ ವಿನಾ ಹಂಗಿನ ಸಂಗತಿಯಲ್ಲ. Not to be poor is a Human Right, not to be hungry is a Human Right. Not to be illiterate is a Human Right.

- ಜನರು ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳಲ್ಲಿ ಆಯ್ಕೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದು ಅಭಿವೃದ್ಧಿ.
- ಅಭಿವೃದ್ಧಿಯಲ್ಲಿ ತಮ್ಮ ಪಾಲನ್ನು ಒತ್ತಾಯಿಸುವುದಕ್ಕೆ, ದಕ್ಕಿಸಿಕೊಳ್ಳುವುದಕ್ಕೆ, ತನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಅಗತ್ಯವಾದ ಧಾರಣಾ ಸಾಮರ್ಥ್ಯವನ್ನು ಉತ್ತಮ ಪಡಿಸಿಕೊಳ್ಳುವ ಪ್ರಕ್ರಿಯೆಯೇ ಅಭಿವೃದ್ಧಿ.
- ಜನರನ್ನು ಒಳಗೊಳ್ಳುವ ಉತ್ಪಾದನಾ ಕ್ರಮವನ್ನು ಅಭಿವೃದ್ಧಿ ಎಂದು ಕರೆಯಬಹುದು.
- ಜನರಿಗೆ ಶುದ್ಧ ಕುಡಿಯುವ ನೀರನ್ನು ನೀಡುವುದರಿಂದ ಅವರ ಬದುಕು ಸಮೃದ್ಧವಾಗುತ್ತದೆ. ಇದು ಅಭಿವೃದ್ಧಿ.
- ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯುವುದರಿಂದ ಮಹಿಳೆಯರ ಬದುಕು ಉತ್ತಮವಾಗುತ್ತದೆ. ಇದು ಅಭಿವೃದ್ಧಿ. ನಮ್ಮ ಜನಸಂಖ್ಯೆಯಲ್ಲಿ ಶೇ50ರಷ್ಟು ಮಹಿಳೆಯರಿದ್ದಾರೆ.
- ಗ್ರಾಮದ ಎಲ್ಲ ಮಕ್ಕಳು 14ನೆಯ ವಯಸ್ಸಿನವರೆಗೆ ಶಾಲೆಗೆ ಹೋಗುವಂತೆ ಮಾಡುವುದು ಅಭಿವೃದ್ಧಿ. ಅಕ್ಷರವೇ ಅಭಿವೃದ್ಧಿ.
- ಎಲ್ಲರಿಗೂ ತಲೆಯ ಮೇಲೊಂದು ಸೂರನ್ನು ನೀಡುವುದು ಅಭಿವೃದ್ಧಿ.
- ಭೂ ಮೇಲ್ಮೈ ನೀರನ್ನು ಮಳೆಗಾಲದಲ್ಲಿ ಸೂಕ್ತವಾಗಿ ಸಂಗ್ರಹಿಸುವುದರ ಮೂಲಕ ಗ್ರಾಮದ ಕುಡಿಯುವ ನೀರಿನ ಸಮಸ್ಯೆ-ಕೊರತೆಯನ್ನು ನಿವಾರಿಸಿಕೊಳ್ಳಬಹುದು. ಇದು ಅಭಿವೃದ್ಧಿ.
- ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ರೆವಿನ್ಯೂ ಅಧಿಕಾರಿಗಳು ಮುಂತಾದವರ ಸೇವೆಯನ್ನು ಪೂರ್ಣವಾಗಿ ಉಪಯೋಗಿಸಿ ಕೊಂಡು ನಮ್ಮ ಗ್ರಾಮಗಳಲ್ಲಿ ಜನರ ಬದುಕನ್ನು ಉತ್ತಮಪಡಿಸಬಹುದು. ಇದು ಅಭಿವೃದ್ಧಿ.
- ಗ್ರಾಮದಲ್ಲಿ ಸಾಮಾಜಿಕ ಪ್ರತ್ಯೇಕತನವನ್ನು ಅನುಭವಿಸುತ್ತಿರುವ ಜನರಿಗೆ ಅಭಿವೃದ್ಧಿ ಫಲಗಳು ಹೆಚ್ಚು ಹೆಚ್ಚು ದೊರೆಯುವಂತೆ ಮಾಡಬೇಕು. ಇದು ಸಾಮಾಜಿಕ ನ್ಯಾಯವನ್ನು ಆಧರಿಸಿದ ಅಭಿವೃದ್ಧಿ.
- ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರನ್ನು ನೀಡುವುದರ ಮೂಲಕ ಜನರ ಆರೋಗ್ಯವನ್ನು ಉತ್ತಮ ಪಡಿಸಬಹುದು. ಆರೋಗ್ಯ ಅಂದರೆ ಆಸ್ಪತ್ರೆ-ಔಷಧಿ, ವೈದ್ಯರು ಅಷ್ಟೇ ಅಲ್ಲ. ಕುಡಿಯುವ ನೀರು, ಶುದ್ಧ ಗಾಳಿ, ಸಮತೋಲನ ಆಹಾರ, ಲಿಂಗ ಸಮಾನತೆ ಮುಂತಾದವು ಅಭಿವೃದ್ಧಿಯ ಸಂಗತಿಗಳು.

ಬಂಡವಾಳವಿಲ್ಲದೆ ಅಭಿವೃದ್ಧಿಯನ್ನು ಮಾಡುವುದು ಸಾಧ್ಯವಿಲ್ಲ ಎಂಬ ನಂಬಿಕೆಯು ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿ ಬಿಟ್ಟಿದೆ. ಇದು ಒಂದು ಮಟ್ಟದವರೆಗೆ ಸರಿ. ಅಭಿವೃದ್ಧಿಗೆ ಬಂಡವಾಳ ಬೇಕು. ಆದರೆ ಬಂಡವಾಳ ಹೂಡಿಕೆಯೇ ಅಭಿವೃದ್ಧಿಯಲ್ಲ.

ಅಭಿವೃದ್ಧಿಯಲ್ಲಿ ಜನರು ಪ್ರಧಾನ ಸ್ಥಾನದಲ್ಲಿರಬೇಕು. ಅಭಿವೃದ್ಧಿ ಅನ್ನುವುದು ಮಹಿಳೆಯರನ್ನು ಸೇರಿಸಿಕೊಂಡು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರು ಭಾಗವಹಿಸಬೇಕು. ಅಭಿವೃದ್ಧಿ ಅನ್ನುವುದು ಜನರು ಅನುಭವಿಸುವ ಸಂಗತಿ. ವಿಶ್ವಸಂಸ್ಥೆಯು 1986ರಲ್ಲಿ ಘೋಷಿಸಿದ 'ಅಭಿವೃದ್ಧಿ ಹಕ್ಕಿ'ನ ಮೊದಲನೆಯ ಆರ್ಟಿಕಲ್‌ನಲ್ಲಿ ಅಭಿವೃದ್ಧಿಯನ್ನು ಹೀಗೆ ವಿವರಿಸಿದೆ.

"ಅಭಿವೃದ್ಧಿ ಹಕ್ಕು ಜನರಿಂದ ಬೇರ್ಪಡಿಸಲಾಗದ ಮಾನವ ಹಕ್ಕು. ಈ ಕಾರಣದಿಂದ ಪ್ರತಿಯೊಬ್ಬರಿಗೂ ಮತ್ತು ಸಕಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಪಾಲುಗೊಳ್ಳುವ, ಅದಕ್ಕೆ ಕಾಣಿಕೆ ನೀಡುವ ಮತ್ತು ಅದರ ಫಲಗಳನ್ನು ಅನುಭವಿಸುವ ಸಮಾನ ಹಕ್ಕುಗಳನ್ನು ಪಡೆದು ಕೊಂಡಿರುತ್ತಾರೆ"

ಇಲ್ಲಿ 'ಅನುಭಫಿಸುವುದು' ಅನ್ನುವುದು ಮುಖ್ಯ. ಅಭಿವೃದ್ಧಿಯಲ್ಲಿ 'ಶ್ರಮ ಪಡುವವರು ಒಬ್ಬರು, ಅದನ್ನು ಅನುಭವಿಸುವವರು ಮತ್ತೊಬ್ಬರು' ಅನ್ನುವಂತಾಗ ಬಾರದು.

ಜನರು ಕೇವಲ ಅಭಿವೃದ್ಧಿಯ ಸಾಧನ ಸಂಪನ್ಮೂಲವಲ್ಲ. People are not resources. People have resources. ಜನರನ್ನು ಅಭಿವೃದ್ಧಿಯ ಸಾಧನ ಸಂಪನ್ಮೂಲವನ್ನಾಗಿ ಮಾಡಲಾಗಿದೆ. ಸಾಂಪ್ರದಾಯಿಕ ಅಭಿವೃದ್ಧಿ ಮೀಮಾಂಸೆಯಲ್ಲಿ ಜನರನ್ನು ಹ್ಯೂಮನ್ ರಿಸೋರ್ಸ್ ಎಂದು ಗುರುತಿಸಲಾಗುತ್ತದೆ. ವಾಸ್ತವವಾಗಿ ಅಭಿವೃದ್ಧಿಯ ಅಂತಿಮ ಗುರಿ ಜನರು. ಜನರು ಅಭಿವೃದ್ಧಿಯ ಕರ್ತೃಗಳು ಮತ್ತು ಜನರು ಅಭಿವೃದ್ಧಿಯ ಅನುಭೋಗಿಗಳು.

## ನೈರ್ಮಲ್ಯ ಕ್ರಾಂತಿ

ಇಂದು ನೈರ್ಮಲ್ಯದ ಬಗ್ಗೆ, ಸ್ವಚ್ಛತೆಯ ಬಗ್ಗೆ, ಶೌಚಾಲಯದ ಬಗ್ಗೆ ಬಹಳ ಮಾತುಗಳನ್ನಾಡಲಾಗುತ್ತಿದೆ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನೈರ್ಮಲ್ಯ, ಸ್ವಚ್ಛತೆ, ಶೌಚಾಲಯ ಶುಚಿಯಾಗಿರುವುದು, ಗ್ರಾಮ ಸ್ವಚ್ಛವಾಗಿರುವುದು ಯಾರಿಗೆ ಬೇಡ? ಆದರೆ ಜನರಿಗೆ ಮೊದಲು ಹೊಟ್ಟೆ-ಬಟ್ಟೆ ಮುಖ್ಯ ತಾನೆ! ಯಾವುದನ್ನು ಮೇಲಿನಿಂದ ಹೇರಲಾಗುತ್ತದೋ ಅದು ಯಶಸ್ವಿಯಾಗುವುದು ಸಾಧ್ಯವಿಲ್ಲ. ಜನರಿಗೆ ಶೌಚಾಲಯ ಬೇಕು ಅನ್ನಿಸಬೇಕು. ನಮ್ಮ ಮನೆ, ಮನೆಯ ಸುತ್ತ-ಮುತ್ತ ಚೊಕ್ಕಟವಾಗಿರಬೇಕು ಎಂದು ಜನರಿಗೆ ಅನ್ನಿಸಬೇಕು. ಅದಕ್ಕೆ ಅವರಲ್ಲಿ ಧಾರಣಾ ಸಾಮರ್ಥ್ಯವಿರಬೇಕು. ಗ್ರಾಮೀಣ ಪ್ರದೇಶದಲ್ಲಿ ಜನರು ಬಯಲಿನಲ್ಲಿ ಮಲವಿಸರ್ಜನೆ ಮಾಡುವುದರಿಂದ ರೋಗಗಳು ಹರಡುತ್ತವೆ. ಇದಕ್ಕೆ ಮಾಡುವುದೇನು? ಶೌಚಾಲಯ ಬೇಕು. ಸಮುದಾಯ ಶೌಚಾಲಯಗಳು ಬೇಕು. ಅವುಗಳಿಗೆ ನೀರು ಬೇಕು. ಬಡತನ, ಹಸಿವು, ಅಪೌಷ್ಟಿಕತೆ, ಅಸಮಾನತೆ ತಾರತಮ್ಯ ಮುಂತಾದ ಅಸ್ವಾತಂತ್ರ್ಯಗಳನ್ನು ನಿವಾರಿಸದೆ ನೈರ್ಮಲ್ಯ ಕ್ರಾಂತಿ ಸಾಧ್ಯವಿಲ್ಲ. ಅದರ ಪ್ರಚಾರ ನಡೆಯಬಹುದು. ಸ್ವಚ್ಛತೆಯ ಬಗ್ಗೆ ಎಷ್ಟು ಮಾತನಾಡಲಾಗುತ್ತಿದೆಯೋ ಅದರ ಕಾಲು ಭಾಗದಷ್ಟನ್ನು ಬಡತನ ನಿವಾರಣೆಯ ಬಗ್ಗೆ ಮಾತನಾಡುತ್ತಿಲ್ಲ.

ಇಂದು ನಮ್ಮಲ್ಲಿ ಎರಡು ಬಗೆಯ ಅಭಿವೃದ್ಧಿ ಮಾದರಿಗಳು ಕೆಲಸ ಮಾಡುತ್ತಿವೆ. ಮೊದಲನೆಯದು 'ಸಾಮಾಜಿಕ ನ್ಯಾಯದ ಮೂಲಕ ಅಭಿವೃದ್ಧಿ' ಇದನ್ನು ಅಮರ್ತ್ಯ ಸೇನ್ ಮಾದರಿ ಎಂದು ಕರೆಯಬಹುದು. ಎರಡನೆಯದು 'ಅಭಿವೃದ್ಧಿಯ ಮೂಲಕ ಸಾಮಾಜಿಕ ನ್ಯಾಯ' ಇದನ್ನು ಜಗದೀಶ್ ಭಗವತಿ ಮಾದರಿ ಎಂದು ಕರೆಯಬಹುದು. ಎರಡನೆಯ ಮಾದರಿಯಲ್ಲಿ ಅಭಿವೃದ್ಧಿ ನಡೆಯಬಹುದು. ಆದರೆ ಅದರ ಮೂಲಕ ಸಾಮಾಜಿಕ ನ್ಯಾಯ ಸಂಭವಿರುವುದಕ್ಕೆ ನಮಗೆ ನಿದರ್ಶನಗಳು ಚರಿತ್ರೆಯಲ್ಲಿ ದೊರೆಯುವುದಿಲ್ಲ. ಜೊಸೆಫ್ ಸ್ಟಿಗ್‌ಲಿಡ್ಜ್ ಇದನ್ನು ಮತ್ತೆ ಮತ್ತೆ ಹೇಳುತ್ತಿದ್ದಾನೆ. ನಮ್ಮ ರಾಜ್ಯದಲ್ಲಿ ನಾವು ಸಾಮಾಜಿಕ ನ್ಯಾಯದ ಮೂಲಕ ಅಭಿವೃದ್ಧಿ ಮಾದರಿಯನ್ನು ಅನುಸರಿಸುತ್ತಿದ್ದೇವೆ. ಅದರಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಆದರೆ ನಾವು ಅಳವಡಿಸಿಕೊಂಡಿರುವ ಮಾದರಿ ಸರಿಯಾಗಿದೆ. ಅಭಿವೃದ್ಧಿ ಮುಖ್ಯ. ಅದಕ್ಕಿಂತ ಯಾರಿಗಾಗಿ ಅಭಿವೃದ್ಧಿ - ಯಾರ ಅಭಿವೃದ್ಧಿ ಅನ್ನುವುದು ಹೆಚ್ಚು ಮುಖ್ಯ. 'ಅಭಿವೃದ್ಧಿ ಮೊದಲು; ಸಾಮಾಜಿಕ ನ್ಯಾಯ ನಂತರ' ಎಂಬ ಸೂತ್ರ ಇಂದು ಸೂಕ್ತವಾದುದಲ್ಲ. ಅಭಿವೃದ್ಧಿಯಷ್ಟೇ ಸಾಮಾಜಿಕ ನ್ಯಾಯವೂ ಮುಖ್ಯ. ಉತ್ಪಾದನೆಯಷ್ಟೇ ವಿತರಣೆಯೂ ಮುಖ್ಯ. ಈ ದಿಶೆಯಲ್ಲಿ ನಮ್ಮ ರಾಜ್ಯದ ಪ್ರಯತ್ನ ಯಶಸ್ವಿಯಾಗಲಿ.

ಲೇಖನ

# ಸರ್ಕಾರಿ ನೌಕರರ ಆರೋಗ್ಯ ರಕ್ಷಣೆಗೆ "ಜ್ಯೋತಿ ಸಂಜೀವಿನಿ" ಯೋಜನೆ



**ಪ್ರವೀಣ್ ಹುಲಿಕುಂಟೆ**

ಜ್ಯೋತಿ ಸಂಜೀವಿನಿ ಯೋಜನೆಯಿಂದ ಸರ್ಕಾರಿ ನೌಕರರು ಹಾಗೂ ಅವರುಗಳ ಕುಟುಂಬದ ಅವಲಂಬಿತ ಸದಸ್ಯರುಗಳು ಗಂಭೀರ ಖಾಯಿಲೆಗಳಿಗೆ ಅತ್ಯಾಧುನಿಕ ಸೌಲಭ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಹೃದಯ ರೋಗ, ಕ್ಯಾನ್ಸರ್, ಮೂತ್ರಪಿಂಡದ ತೊಂದರೆ, ನರರೋಗ, ನವಜಾತ ಶಿಶುಗಳು ಮತ್ತು ಮಕ್ಕಳ ಕಾಯಿಲೆ, ಅಪಘಾತ ಮತ್ತು ಸುಟ್ಟಗಾಯ ಮುಂತಾದ ಆಘಾತಕಾರಿ ಕಾಯಿಲೆಗಳು ಹಾಗೂ ಅವುಗಳ ನಿವಾರಣೆಗೆ ತಗಲುವ ದುಬಾರಿ ಖರ್ಚು ವೆಚ್ಚಗಳು ಜನ ಜೀವನದ ಮೇಲೆ ಗಂಭೀರ ಸ್ವರೂಪದ ಪರಿಣಾಮಗಳನ್ನು ಉಂಟುಮಾಡುತ್ತಿವೆ. ಸಕಾಲದಲ್ಲಿ ಸರಿಯಾದ ಚಿಕಿತ್ಸೆ ದೊರೆಯದಿದ್ದರೆ ಅಮೂಲ್ಯ ಜೀವಗಳಿಗೆ ಆಪತ್ತು ಸಂಭವಿಸುತ್ತದೆ. ಸರ್ಕಾರಿ ಸೇವೆಯಲ್ಲಿಯೇ ಇಡೀ ಜೀವಮಾನವೆಲ್ಲಾ ಕಳೆಯುವ ಸರ್ಕಾರಿ ನೌಕರರಿಗೆ ಹಾಗೂ ಅವರುಗಳ ಕುಟುಂಬಗಳ ಅವಲಂಬಿತ ಸದಸ್ಯರುಗಳಿಗೆ ಇಂತಹ ಸ್ಥಿತಿ ಬರಬಾರದೆಂಬ ಮಹತ್ವದ ಉದ್ದೇಶದೊಂದಿಗೆ ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗಾಗಿ ದಿನಾಂಕ: 20-01-2015 ರಿಂದ "ಜ್ಯೋತಿ ಸಂಜೀವಿನಿ" ಎಂಬ ನೂತನ ಯೋಜನೆಯನ್ನು ಜಾರಿಗೊಳಿಸಿದೆ.



ಗಂಭೀರ ಖಾಯಿಲೆಗಳಿಂದ ಬಳಲುತ್ತಿರುವ ರಾಜ್ಯ ಸರ್ಕಾರಿ ನೌಕರರು ಹಾಗೂ ಅವರುಗಳ ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ಅತ್ಯಾಧುನಿಕ ಸೌಲಭ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಒದಗಿಸುವ ಮಹತ್ವದ ಯೋಜನೆಯಾಗಿದೆ. ರಾಜ್ಯದ 162 ಕ್ಕೂ ಹೆಚ್ಚು ನೊಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ 449 ಬಗೆಯ ಚಿಕಿತ್ಸೆಗಳಿಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಜ್ಯೋತಿ ಸಂಜೀವಿನಿ ಯೋಜನೆಗೆ

ಐ.ಇ.ಸಿ ಸಮಾಲೋಚಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ



ಸಂಬಂಧಿಸಿದ ಪೂರ್ಣ ವಿವರಗಳು ಈ ಕೆಳಕಂಡಂತಿರುತ್ತವೆ.

**ಜ್ಯೋತಿ ಸಂಜೀವಿನಿ ಯೋಜನೆ ಉದ್ದೇಶ:**

ಗಂಭೀರ ಹಾಗೂ ಮಾರಣಾಂತಿಕ ಖಾಯಿಲೆಗಳಿಗೆ ತುತ್ತಾದ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಸೂಪರ್ ಸ್ಪೆಷಿಯಾಲಿಟಿ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ, ಥೆರಫಿಗಳು ಮತ್ತು ವೈದ್ಯಕೀಯ ಚಿಕಿತ್ಸೆಗಳನ್ನು ಒಳಗೊಂಡಂತೆ ಉತ್ತಮ ಗುಣಮಟ್ಟದ ವೈದ್ಯಕೀಯ ನೆರವನ್ನು ಒದಗಿಸುವುದು ಜ್ಯೋತಿ ಸಂಜೀವಿನಿ ಯೋಜನೆಯ ಉದ್ದೇಶವಾಗಿರುತ್ತದೆ.

**ಯೋಜನೆಯಲ್ಲಿ ಒಳಗೊಳ್ಳುವ ಕಾಯಿಲೆಗಳು:**

ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರ ಪಿಂಡದ ಖಾಯಿಲೆ, ಸುಟ್ಟ ಗಾಯ, ಅಪಘಾತ* ನವಜಾತ ಶಿಶುಗಳಿಗೆ ಸಂಬಂಧಿಸಿದ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆಯ ಸೌಲಭ್ಯ ದೊರೆಯುತ್ತದೆ.

ಮೇಲೆ ತಿಳಿಸಲಾದ ಏಳು ತರಹದ ಆಘಾತಕಾರಿ ಕಾಯಿಲೆಗಳಿಗೆ ಸಂಬಂಧಿಸಿದ 449 ಬಗೆಯ ಶಸ್ತ್ರ ಚಿಕಿತ್ಸೆಗಳನ್ನು ಯೋಜನೆಯ ಅಡಿಯಲ್ಲಿ ಗುರುತಿಸಲಾಗಿದ್ದು ಈ ಎಲ್ಲ ಚಿಕಿತ್ಸೆಗಳಿಗೆ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಉಚಿತವಾಗಿ ಒದಗಿಸಲಾಗುತ್ತದೆ.

ಅರ್ಹತೆ ಮತ್ತು ಫಲಾನುಭವಿಗಳು: "ಫಲಾನುಭವಿ" ಎಂದರೆ ರಾಜ್ಯ ಸರ್ಕಾರಿ ನೌಕರರು ಮತ್ತು ಸರ್ಕಾರದ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಅವರ ಕುಟುಂಬದ ಅವಲಂಬಿತ ಸದಸ್ಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (Medical Attendant) ನಿಯಮಾವಳಿ-1963ರ ನಿಯಮ 2(1)ರ(i)(ii) ಮತ್ತು (iii) ರನ್ವಯ ಸರ್ಕಾರಿ ನೌಕರರ ಕುಟುಂಬದ ಅವಲಂಭಿತ ಸದಸ್ಯರನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ:

(ಎ) ಸರ್ಕಾರಿ ನೌಕರನ ಪತ್ನಿ ಅಥವಾ ಪತಿ.

(ಬಿ) ಸರ್ಕಾರಿ ನೌಕರರ ತಂದೆ ಮತ್ತು ತಾಯಿ (ಮಲತಾಯಿ ಒಳಗೊಂಡಂತೆ)

ಇವರು ಸರ್ಕಾರಿ ನೌಕರನ ಜೊತೆಯಲ್ಲಿ ಸಾಮಾನ್ಯವಾಗಿ ವಾಸವಿರತಕ್ಕದ್ದು ಮತ್ತು ಇವರ ಮಾಸಿಕ ಆದಾಯ ಒಟ್ಟು ರೂ. 6,000/- ಗಳನ್ನು ಮೀರತಕ್ಕದ್ದಲ್ಲ.

(ಸಿ) ಸರ್ಕಾರಿ ನೌಕರನ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುವ ಮಕ್ಕಳು (ದತ್ತು ಮಕ್ಕಳು ಮತ್ತು ಮಲ-ಮಕ್ಕಳು ಒಳಗೊಂಡಂತೆ) ಸರ್ಕಾರಿ ನೌಕರನು ತನ್ನ ಕುಟುಂಬದ ಸದಸ್ಯರ ಅವಲಂಬನೆಯ ಕುರಿತು ಪ್ರಮಾಣಿತ ಘೋಷಣೆಯನ್ನು ಸಲ್ಲಿಸತಕ್ಕದ್ದು.

ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್‌ಆರ್‌ಎಂಎಸ್ ಡಾಟಾ ಬೇಸ್‌ನೊಂದಿಗೆ ಸಮನ್ವಯಿತಗೊಂಡಿರುವ ಸರ್ಕಾರಿ ನೌಕರನ "ಕೆಜಿಐಡಿ" ಪಾಲಿಸಿ ಸಂಖ್ಯೆಯು ಸರ್ಕಾರಿ ನೌಕರನ ಗುರುತಿನ ಮಾನದಂಡವಾಗಿರುತ್ತದೆ. ಸರ್ಕಾರಿ ನೌಕರರ ಅವಲಂಬಿತರ ಕುಟುಂಬ ಸದಸ್ಯರ ವಿವರಗಳನ್ನು ಸಹ ಹೆಚ್‌ಆರ್‌ಎಂಎಸ್ ಡಾಟಾ ಬೇಸ್‌ನೊಂದಿಗೆ ಸಮನ್ವಯಗೊಳಿಸಬೇಕಿರುತ್ತದೆ.

**ಯೋಜನೆಯ ವಿನ್ಯಾಸ:**

ಜ್ಯೋತಿ ಸಂಜೀವಿನಿ ಯೋಜನೆಯನ್ನು, ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನೋಂದಾಯಿತ ನೆಟ್‌ವರ್ಕ್ ಆಸ್ಪತ್ರೆಗಳ ಮೂಲಕ ವೈದ್ಯಕೀಯ ಆರ್ಥಿಕ ನೆರವಿಗೆ ಯಾವುದೇ ಗರಿಷ್ಠ ಮಿತಿಯಿಲ್ಲದಂತೆ, ಆರೋಗ್ಯ ಭರವಸೆಯ ವಿಧಾನದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯು ಅನುಷ್ಠಾನಗೊಳಿಸುತ್ತದೆ. ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿ ಫಲಾನುಭವಿಗಳಿಗೆ ಒದಗಿಸುವ ವೈದ್ಯಕೀಯ ನೆರವು ಸಂಪೂರ್ಣವಾಗಿ ನಗದುರಹಿತವಾಗಿ ಪಡೆಯ ಬಹುದಾಗಿರುತ್ತದೆ.

1) ಯೋಜನೆಯಲ್ಲಿ ನಿಗದಿಪಡಿಸಿರುವ ಬೆನಿಫಿಟ್ ಪ್ಯಾಕೇಜ್‌ನ ದರಗಳಿಗಿಂತ ಹೆಚ್ಚು ದರದ ಸ್ಟೆಂಟ್, ಪ್ರೋಸ್ತೆಸಿಸ್ ಮತ್ತು ಇಂಪ್ಲಾಂಟ್ಸ್‌ಗಳ ಅಳವಡಿಕೆಯನ್ನು ಫಲಾನುಭವಿಯು ಬಯಸಿದ್ದಲ್ಲಿ / ಆಯ್ಕೆ ಮಾಡಿಕೊಂಡಲ್ಲಿ.

2) ಯೋಜನೆಯಲ್ಲಿ ನಿಗದಿಪಡಿಸಿದ ವಾರ್ಡ್ ಸೌಲಭ್ಯಕ್ಕಿಂತ ಉನ್ನತ ದರ್ಜೆಯ ವಾರ್ಡ್ ಸೌಲಭ್ಯಗಳನ್ನು ಫಲಾನುಭವಿಯು ಆಯ್ಕೆ ಮಾಡಿಕೊಂಡಲ್ಲಿ.

ಮೇಲಿನ ಸಂದರ್ಭಗಳಲ್ಲಿ ಫಲಾನುಭವಿಯು ಹೆಚ್ಚುವರಿ ದರಗಳನ್ನು ಭರಿಸಬೇಕಾಗುತ್ತದೆ.

**ವೈದ್ಯಕೀಯ ಸೌಲಭ್ಯದ ಪ್ಯಾಕೇಜ್:**

ಜ್ಯೋತಿ ಸಂಜೀವಿನಿ ಯೋಜನೆಯ ಅಡಿಯಲ್ಲಿ, ಏಳು ತರಹದ ಗಂಭೀರ ಹಾಗೂ ಮಾರಣಾಂತಿಕ ಖಾಯಿಲೆಗಳಾದ ಹೃದ್ರೋಗ, ನರರೋಗ, ಕ್ಯಾನ್ಸರ್, ಶಿಶುಗಳ ಶಸ್ತ್ರಚಿಕಿತ್ಸೆ, ಜೆನಿಟೋ ಯೂರಿನರಿ ಶಸ್ತ್ರಚಿಕಿತ್ಸೆಗಳು, ಸುಟ್ಟಗಾಯ ಇವುಗಳಿಗೆ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲಾಗುವುದು.

ಮೇಲೆ ಕಾಣಿಸಿರುವ ಏಳು ಕಾಯಿಲೆಗಳಿಗೆ ಸಂಬಂಧಿಸಿದ 449 ಬಗೆಯ ಚಿಕಿತ್ಸಾ/ಶಸ್ತ್ರಚಿಕಿತ್ಸೆಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ. ಬೆನಿಫಿಟ್ ಪ್ಯಾಕೇಜ್‌ನಲ್ಲಿ ವೈದ್ಯಕೀಯ ಸಮಾಲೋಚನೆ, ಚಿಕಿತ್ಸಾ ಪೂರ್ವದ ಪರೀಕ್ಷೆಗಳು, ಚಿಕಿತ್ಸೆಯ ವೆಚ್ಚ, ಊಟೋಪಚಾರ, ಆಸ್ಪತ್ರೆಯ ವೆಚ್ಚ ಹಾಗೂ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 10 ದಿನಗಳಿಗೆ ಬೇಕಾಗುವ ಔಷಧಿ ಸೌಲಭ್ಯಗಳು ಒಳಗೊಂಡಿರುತ್ತವೆ. ಬೆನಿಫಿಟ್ ಪ್ಯಾಕೇಜ್‌ನಲ್ಲಿ ನಿಗದಿಪಡಿಸಿರುವ ಇಂಪ್ಲಾಂಟ್ಸ್, ಸ್ಟೆಂಟ್ಸ್ ಇತ್ಯಾದಿಗಳ ಗರಿಷ್ಠ ದರಗಳಿಗಿಂತ ಹೆಚ್ಚುವರಿ ದರದ ಪರಿಕರಗಳನ್ನು ಬಯಸಿದಲ್ಲಿ ವ್ಯತ್ಯಾಸದ ಹಣವನ್ನು ಫಲಾನುಭವಿ ಭರಿಸ ಬೇಕಾಗುತ್ತದೆ.

ಇದಲ್ಲದೆ, ಫಲಾನುಭವಿಯು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಿಗದಿತ ಖಾಯಿಲೆಗಳಿಗೆ ಸಂಬಂಧಿಸಿದಂತೆ 60 ಅನುಸರಣಾ ಚಿಕಿತ್ಸಾ ಸೌಲಭ್ಯಗಳು (defined follow-up packages) ಸಹ (ವೈದ್ಯಕೀಯ ಸಮಾಲೋಚನೆ, ಡಯಗ್ನೊಸ್ಟಿಕ್ಸ್ ಮತ್ತು ಔಷಧೋಪಚಾರ ಒಳಗೊಂಡಂತೆ) ಈ ಯೋಜನೆಯಡಿಯಲ್ಲಿ ಲಭ್ಯವಿರುತ್ತವೆ. ವಿವರಗಳು ಈ ಕೆಳಕಂಡಂತಿರುತ್ತದೆ:

| ಕ್ರ. ಸಂ. | ಕಾಯಿಲೆಯ ವಿವರ | ಚಿಕಿತ್ಸಾ ವಿಧಾನಗಳ ಸಂಖ್ಯೆ | ಅನುಸರಣಾ ಚಿಕಿತ್ಸಾ ವಿಧಾನಗಳ ಸಂಖ್ಯೆ |
|---|---|---|---|
| 1 | ಹೃದ್ರೋಗ :<br>(ಕಾರ್ಡಿಯೋ ಥೊರಾಸಿಕ್/ಕಾರ್ಡಿಯೋವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ ಮತ್ತು ಹೃದಯ ಶಸ್ತ್ರಚಿಕಿತ್ಸಾ ವಿಧಾನವು ಒಳಗೊಂಡಂತೆ) | 145 | 23 |
| 2 | ಕ್ಯಾನ್ಸರ್:<br>(ವೈದ್ಯಕೀಯ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮತ್ತು ರೇಡಿಯೇಶನ್ ಒಳಗೊಂಡಂತೆ) | 189 | 1 |
| 3 | ನರರೋಗ:<br>(ಕ್ರೇನಿಯಲ್, ಸ್ಪೈನಲ್ ಮತ್ತು ಪೆರಿಫೆರಲ್ ನರಶಸ್ತ್ರಚಿಕಿತ್ಸೆ ವಿಧಾನಗಳು ಒಳಗೊಂಡಂತೆ) | 50 | 28 |
| 4 | ಜೆನಿಟೋ ಯೂರಿನರಿ ಶಸ್ತ್ರಚಿಕಿತ್ಸೆಗಳು:<br>(ಮೂತ್ರಪಿಂಡ ಮತ್ತು ಕಾಂಜೆನೈಟಲ್ ಜೆನಿಟಲ್ ಕಾಯಿಲೆಗಳು ಒಳಗೊಂಡಂತೆ) | 21 | 8 |
| 5 | ಸುಟ್ಟಗಾಯ:<br>(ವಿದ್ಯುತ್ ಅಪಘಾತ ಒಳಗೊಂಡಂತೆ) | 11 | |
| 6 | ಅಪಘಾತ:<br>(ಬಹು ಅಂಗಗಳು ಒಳಗೊಂಡಂತಹ ಗಾಯ) | 8 | |
| 7 | ಶಿಶುಗಳ ಶಸ್ತ್ರಚಿಕಿತ್ಸೆ:<br>(ನವಜಾತ ಶಿಶುಗಳಿಗೆ ಸಂಬಂಧಿಸಿದಂತೆ) | 25 | |
| | ಒಟ್ಟು ಚಿಕಿತ್ಸಾ ವಿಧಾನಗಳು | 449 | 60 |



## ನೆಟ್‌ವರ್ಕ್ ಆಸ್ಪತ್ರೆಗಳ ಜಾಲ :

ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ನೆರವಾಗುವಂತೆ ರಾಜ್ಯದಲ್ಲಿ (ಹಾಗೂ ರಾಜ್ಯದ ಗಡಿ ಭಾಗಕ್ಕೆ ಸಮೀಪವಿರುವ ನೆರೆ ರಾಜ್ಯಗಳೂ ಸೇರಿದಂತೆ) ಅತ್ಯುತ್ತಮ ದರ್ಜೆಯ 162 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಯೋಜನೆಯೊಂದಿಗೆ ನೋಂದಣಿ ಮಾಡಿಕೊಳ್ಳಲಾಗಿದೆ. ಈ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಫಲಾನುಭವಿಗಳಿಗೆ ಚಿಕಿತ್ಸೆ ಒದಗಿಸಲಾಗುತ್ತದೆ. ಅರ್ಹ ಆಸ್ಪತ್ರೆಗಳ ಗುರುತಿಸುವಿಕೆ ಮತ್ತು ನೋಂದಣಿ ಪ್ರಕ್ರಿಯೆಯು ಸಂದರ್ಭಕ್ಕನುಗುಣವಾಗಿ ನಿರಂತರವಾದ ಪ್ರಕ್ರಿಯೆಯಾಗಿರುತ್ತದೆ.

| ಕ್ರಮ ಸಂಖ್ಯೆ | ಮಾಸಿಕ ವೇತನ | ಪಡೆಯಲರ್ಹವಾದ ವಾರ್ಡ್‌ಗಳ ದರ್ಜೆ/ ಸೌಲಭ್ಯಗಳು |
|---|---|---|
| 1. | ರೂ. 16,000/– ರವರೆಗೆ | ಸಾಮಾನ್ಯ ವಾರ್ಡ್ |
| 2. | ರೂ. 16,000/– ದಿಂದ ರೂ. 43,200/–ವರೆಗೆ | ಅರೆಖಾಸಗಿ ವಾರ್ಡ್ |
| 3. | ರೂ. 43,201/ ಮತ್ತು ಮೇಲ್ಪಟ್ಟು | ಖಾಸಗಿ ವಾರ್ಡ್ |

## ವಾರ್ಡ್ ಸೌಲಭ್ಯಗಳ ವಿವರ :

ವೇತನ ಶ್ರೇಣಿಗನುಗುಣವಾಗಿ ಸರ್ಕಾರಿ ನೌಕರರು ಈ ಕೆಳಕಂಡ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ.

## ಆರೋಗ್ಯ ಮಿತ್ರರು:

ಯೋಜನೆಗೆ ಸಂಬಂಧಿಸಿದ ಎಲ್ಲ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ (ನೆಟ್‌ವರ್ಕ್ ಆಸ್ಪತ್ರೆಗಳು) ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಆರೋಗ್ಯ ಮಿತ್ರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಆರೋಗ್ಯ ಮಿತ್ರರು ಚಿಕಿತ್ಸೆ ಅಗತ್ಯವಿರುವ ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಚಿಕಿತ್ಸೆ ಪಡೆದುಕೊಳ್ಳಲು ಅನುಕೂಲವಾಗುವಂತೆ ಸೂಕ್ತ ಮಾರ್ಗದರ್ಶನ ಹಾಗೂ ಸಹಾಯ ನೀಡುತ್ತಾರೆ.

ಸರ್ಕಾರಿ ನೌಕರರು ಹಾಗೂ ಫಲಾನುಭವಿಗಳು ಈ ಯೋಜನೆಯ ಕುರಿತು ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ. ಸಂಖ್ಯೆ 1800 425 8330 ಅನ್ನು ಸಂಪರ್ಕಿಸಬಹುದಾಗಿದೆ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ


# ಗ್ರಾಮ ಪಂಚಾಯಿತಿಯಲ್ಲಿ ತೆರಿಗೆ ವಸೂಲಾತಿ ಮತ್ತು ತೆರಿಗೆ ಸಂಗ್ರಹಕ್ಕೆ ವಿನೂತನ ಪ್ರಯೋಗ



ಹೆಚ್. ಆರ್. ರಾಜೇಶ್

*ತೆರಿಗೆಯನ್ನು ಆನ್ ಲೈನ್ ಮೂಲಕ ನೇರವಾಗಿ ಪಾವತಿಸಲು, ಎಲೆಕ್ಟ್ರಾನಿಕ್ ಉಪಕರಣಗಳ ಮುಖಾಂತರ ಪಂಚತಂತ್ರದ ಮೂಲಕ ಮಾಹಿತಿಯನ್ನು ಪಡೆದುಕೊಂಡು ತೆರಿಗೆ ಸಂಗ್ರಹಿಸಲಾಗುತ್ತಿದೆ.*

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ 73ನೇ ತಿದ್ದುಪಡಿ ಮುಖಾಂತರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ತೆರಿಗೆಯನ್ನು ನಿರ್ಧರಿಸಿ ವಸೂಲಿ ಮಾಡಿ, ಖರ್ಚು ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. ಹೊಸದಾಗಿ 6000 ಗ್ರಾಮ ಪಂಚಾಯತಿಗಳಿಗೆ ಚುನಾಯಿತರಾಗಿ ಬಂದಿರುವ ಹೊಸ ನಿರೀಕ್ಷೆಗಳೊಂದಿಗೆ ಸುಮಾರು 98000 ಜನಪ್ರತಿನಿಧಿಗಳಿಗೆ ಆಯ್ಕೆ ಮಾಡಿ ಕಳುಹಿಸಿದ ಜನ ಸಾಮಾನ್ಯರಿಗೆ ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಬೀದಿ ದೀಪ, ನೈರ್ಮಲ್ಯ, ಚರಂಡಿ ವ್ಯವಸ್ಥೆ, ಮತ್ತು ಸಾಮಾಜಿಕ ಕಾರ್ಯಗಳನ್ನು ತಲುಪಿಸುವ ಕೆಲಸಗಳನ್ನು ಮಾಡಲು ಉತ್ಸಕರಾಗಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಗತ್ಯವಾಗಿ ಬೇಕಾಗಿರುವುದು ಆರ್ಥಿಕ ಸಂಪನ್ಮೂಲ.




ಇಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ಶಾಸನ ಬದ್ಧ ಅನುದಾನವು ಜನಸಂಖ್ಯೆ ಆಧಾರದ ಮೇಲೆ 8 ಮತ್ತು 10 ಲಕ್ಷ ರೂ ಗಳನ್ನು ಹಾಗೂ ಕೇಂದ್ರ ಸರ್ಕಾರದಿಂದ 13 ನೇ ಹಣಕಾಸನ್ನು ಜನಸಂಖ್ಯೆ ಆಧಾರದ ಮೇಲೆ ನೀಡುತ್ತಿದೆ. ಈ ಅನುದಾನವು ಪ್ರತಿ ಪಂಚಾಯಿತಿಗೆ 5ರಿಂದ 10 ಲಕ್ಷ ಮೀರುವುದಿಲ್ಲ. ಶಾಸನ ಬದ್ಧ ಅನುದಾನದಲ್ಲಿ ಶೇ 40 ಭಾಗ ಸಿಬ್ಬಂದಿ ಸಂಬಳಕ್ಕೆ ಮತ್ತು ಶೇ 60 ಭಾಗ ವಿದ್ಯುತ್ ಬಿಲ್ಲಿಗೆ ಸರಿ ಹೊಂದುತ್ತದೆ. ಉಳಿಕೆ 13 ನೇ ಹಣಕಾಸು ಆಯೋಗದ ಅನುದಾನದಲ್ಲಿ ಕುಡಿಯುವ ನೀರಿನ ನಿರ್ವಹಣೆ ಅಥವಾ ಮಾರ್ಗಸೂಚಿಯ ಪ್ರಕಾರ ವ್ಯಯ ಮಾಡಬೇಕಾಗಿರುತ್ತದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹುಸ್ಕೂರು ಗ್ರಾಮ ಪಂಚಾಯಿತಿ, ಬೆಂಗಳೂರು ಉತ್ತರ ತಾಲೂಕು.




ರಾಜ್ಯದಲ್ಲಿ 40ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳು ಸರ್ಕಾರ ನಿಡುವ ಅನುದಾನದ ಮೇಲೆ ಅವಲಂಬಿತವಾಗಿರುತ್ತವೆ. ಶೇ 40ಕ್ಕೂ ಹೆಚ್ಚು ಪಂಚಾಯಿತಿಗಳು ಸ್ವಂತ ಸಂಪನ್ಮೂಲ ಕ್ರೋಢೀಕರಿಸಿ ಪಂಚಾಯಿತಿಗಳು ಸ್ವಂತ ಸಂಪನ್ಮೂಲಕ್ಕೆ ಒತ್ತು ಕೊಟ್ಟಿರುತ್ತವೆ. ಶೇ 20 ಪಂಚಾಯಿತಿಗಳು ವಿದ್ಯುತ್ ಬಿಲ್ಲನ್ನು ಬಾಕಿ ಉಳಿಸಿಕೊಂಡು ಸಿಬ್ಬಂಧಿಗಳಿಗೆ ಸರಿಯಗಿ ಸಂಬಳ ಕೊಡಲು ಆಗದ ಸ್ಥಿತಿಯಲ್ಲಿರುತ್ತವೆ.

ಗ್ರಾಮ ಪಂಚಾಯತಿಗಳು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕಾರ ಗ್ರಾಮ ಪಂಚಾಯತಿಗಳು ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ಅವಕಾಶ ಕಲ್ಪಿಸಿದರೂ ಸಹ ವೈಜ್ಞಾನಿಕ ತೆರಿಗೆ ವಸೂಲಿಯಿಂದ ಕ್ರಮ ಕೈಗೊಳ್ಳದೆ, ತೆರಿಗೆ ನಿರ್ಧರಣೆಯಲ್ಲಿ ಕಾಲ ಕಾಲಕ್ಕೆ ಪರಿಷ್ಕರಣೆ ಮಾಡದೆ ಹಿಂದುಳಿದಿದೆ. ಉದಾಹರಣೆಗೆ ರಾಜ್ಯದಲ್ಲಿ 2013–14ನೇ ಸಾಲಿನ ಬಾಕಿ ರೂ. 391 ಕೋಟಿ ಚಾಲ್ತಿ (2013–14) ರೂ. 349 ಕೋಟಿ ಒಟ್ಟು ರೂ. 740 ಕೋಟಿಗಳಾದರೂ, ವಸೂಲಿಯಾಗುತ್ತಿರುವುದು ಅಂದಾಜು ರೂ. 400 ಕೋಟಿಗಳು ಮಾತ್ರ. ಇದಲ್ಲದೆ 2013–14ನೇ ಸಾಲಿನ ಅಂತ್ಯದವರೆಗೂ ಕಟ್ಟ ಬೇಕಾಗಿರುವ ವಿದ್ಯುತ್ ಬಿಲ್ಲಿನ ಮೊತ್ತ ರೂ. 3236 ಕೋಟಿ ಮತ್ತು ರೂ. 479 ಕೋಟಿ ಸೆಸ್.

ಗ್ರಾಮ ಪಂಚಾಯಿತಿಗಳು ಭೂಮಿ ತೆರಿಗೆ, ಕಟ್ಟಡ ತೆರಿಗೆ, ಪರವಾನಗಿ ಶುಲ್ಕ (ಕಟ್ಟಡ ರಚನೆ), ಉದ್ಯಮ ಪರವಾನಗಿ, ಮ್ಯುಟೇಶನ್ ಶುಲ್ಕ, ಮಾರುಕಟ್ಟೆ ಶುಲ್ಕ, ಅಥವಾ ಹರಾಜು ಶುಲ್ಕ, ಕಟ್ಟಡ ಬಾಡಿಗೆ ನೀಡುವುದು, ಆಸ್ತಿ ಮಾರಾಟ, ನೀರು ಸರಬರಾಜು ಶುಲ್ಕ, ಬೀದಿ ದೀಪದ ಶುಲ್ಕ, ಇನ್ನೂ ಮುಂತಾದ ತೆರಿಗೆಗಳನ್ನು ನಿರ್ಧರಿಸಿ ವಸೂಲಿ ಮಾಡುತ್ತಿವೆ. ಆದರೂ ಸಹ ಇನ್ನುಕೆಲವು ತೆರಿಗೆ ವ್ಯಾಪ್ತಿಯಿಂದ ಮರೆಯಾಗಿರುವ ಮೊಬೈಲ್ ಟವರ್‌ಗಳು, ಟಿ ವಿ ಕೇಬಲ್ ಸಂಪರ್ಕ, ವಾಸದ ಉದ್ದೇಶಕ್ಕೆ ಅನುಮತಿ ಪಡೆದು ವಾಣಿಜ್ಯ ಉದ್ದೇಶ ನಡೆಸುತ್ತಿರುವ ಕಟ್ಟಡಗಳು, ಭೂ ಪರಿವರ್ತನೆಯಾಗದ ಸ್ಥಳದಲ್ಲಿ ರಸ್ತೆ ಬದಿಗಳಲ್ಲಿ ನಡೆಸುತ್ತಿರುವ ವ್ಯಾಪಾರ ವಹಿವಾಟುಗಳ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ಬೃಹತ್ ಮಟ್ಟದ ಕೋಳಿ, ದನ, ಕುರಿ ಸಾಕಾಣಿಕೆ ಘಟಕಗಳು, ನರ್ಸರಿ ಫಾರಂಗಳು, ಇಟ್ಟಿಗೆ ಗೂಡುಗಳು, ಬೃಹತ್ ವಿಸ್ತೀರ್ಣದ ತಡೆಗೋಡೆಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಬರಬೇಕಾಗಿರುವ ರಾಜ ಧನದ ಪ್ರಕರಣ, ಅರಣ್ಯ ಇಲಾಖೆಯಿಂದ ಅರಣ್ಯ ಸಮಿತಿಗಳಿಗೆ ಬದಲಾಗಿ ಗ್ರಾಮ ಪಂಚಾಯಿತಿಗಳಿಗೆ ಬರಬೇಕಾಗಿರುವ ಇನ್ನೂ ಅನೇಕ ಆದಾಯದ ಮೂಲಗಳಿಂದ ಸರಿಯಾದ ಸಂಪನ್ಮೂಲ ಕ್ರೋಢೀ ಕರಿಸಲು ಸಾಧ್ಯವಾಗಿರುವುದಿಲ್ಲ.

ತೆರಿಗೆ ನಿರ್ಧರಣೆ ಮತ್ತು ವಸೂಲಾತಿಯಲ್ಲಿ ಗ್ರಾಮ ಪಂಚಾಯತಿಗಳು ಮತ್ತು ಸರ್ಕಾರ ಮಟ್ಟದಲ್ಲಿ ವೈಜ್ಞಾನಿಕವಾಗಿ ಇದುವರೆಗೂ ಯಾವುದೆ ಪ್ರಯೋಗ ಅಥವಾ ಕ್ರಮಗಳು ಜಾರಿಯಾಗದೆ, ಹಳೆ ಪದ್ಧತಿಯಲ್ಲಿ ಗ್ರಾಮ ಪಂಚಾಯತಿಗಳು ತಮ್ಮ ಮನಸ್ಸಿಗೆ ಬಂದಂತೆ ತೆರಿಗೆಯನ್ನು ನಿರ್ಧರಿಸಿ, ತೆರಿಗೆ ವಸೂಲಿಗಾರರ ಮೂಲಕ ತೆರಿಗೆಯನ್ನು ಮನೆ ಮನೆಗೂ ತೆರಳಿ ವಸೂಲಿ ಮಾಡುವ ಪ್ರಕ್ರಿಯೆ ಮುಂದುವರೆಯುತ್ತಿದೆ. ಡಿಮಾಂಡ್ ಬಿಲ್ಲು, ತಗಾದೆ ಆದೇಶ ನೀಡುವುದು ಮಾತ್ರ ಅಧಿಕಾರಿಗಳ ಕೆಲಸವಾಗುತ್ತದೆ. ನಂತರವೂ ವಸೂಲಿಯಾಗದಿದ್ದರೆ ಜಪ್ತಿ ವಾರೆಂಟ್ ಹೊರಡಿಸುವ ಕ್ರಮ ಅಧ್ಯಕ್ಷರದ್ದಾಗಿರುತ್ತದೆ. ಆದರೆ ರಾಜ್ಯದಲ್ಲಿ ಇದುವರೆಗೂ ಜಪ್ತಿ ವಾರಂಟ್ ಹೊರಡಿಸಿ ತೆರಿಗೆ ವಸೂಲಿ ಮಾಡಿರುವುದು ಬೆರಳೆಣಿಕೆ ಪಂಚಾಯತಿಗಳು ಮಾತ್ರ. ಅಲ್ಲದೆ ತೆರಿಗೆ ರಶೀದಿ




ನೀಡುವುದು ಹಳೆಯ ಪದ್ಧತಿಯಾಗಿದ್ದು ಇದರಿಂದ ರಶೀದಿಗಳನ್ನು ನಕಲು ಮಡುವುದು, ನಿಗದಿತ ವೇಳೆಯಲ್ಲಿ ಹಣ ಬ್ಯಾಂಕಿಗೆ ಪಾವತಿಸದಿರುವುದು, ಹಣಕಾಸಿನ ದುರುಪಯೋಗ ಮತ್ತು ದಿನ ಪುಸ್ತಕ, ನಗದು ಪುಸ್ತಕ, ಹಣ ಜಮೆ ಮಾಡಿದ ದಾಖಲೆಗಳು ಇಟ್ಟು ನಿರ್ವಹಿಸ ಬೇಕಾಗಿರುತ್ತದೆ. ಇದು ಸಮಯದ ವ್ಯಯ ಮತ್ತು ಹೆಚ್ಚು ಕೆಲಸ ತೆಗೆದುಕೊಳ್ಳುತ್ತದೆ.

ಜಗತ್ತು ಇಂದು ವೈಜ್ಞಾನಿಕವಾಗಿ ತುಂಬ ಮುಂದುವರೆದಿದ್ದು ಇಲಾಖೆಯಲ್ಲಿ ಗ್ರಾಮ ಪಂಚಾಯತಿಗಳು ಅಂತರ್ಜಾಲ, GPS, ಇ–ಪೇಮೆಂಟ್ ಮುಂತಾದ ವೈಜ್ಞಾನಿಕ ತಂತ್ರಜ್ಞಾನಗಳೊಂದಿಗೆ ಅನೇಕ ವೆಬ್‌ಸೈಟ್‌ಗಳಲ್ಲಿ ದಿನ ನಿತ್ಯ ಕೆಲಸ ಮಾಡುತ್ತಿದ್ದು, ತೆರಿಗೆ ವಸೂಲಿಯಲ್ಲಿಯೂ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲು ಪ್ರಯತ್ನಗಳು ನಡೆಯುತ್ತಿವೆ.

ತೆರಿಗೆಯನ್ನು ಆನ್ ಲೈನ್ ಮೂಲಕ ನೇರವಾಗಿ ಪಾವತಿಸಲು, ಎಲೆಕ್ಟ್ರಾನಿಕ್ ಉಪಕರಣಗಳ ಮುಖಾಂತರ ಪಂಚತಂತ್ರದ ಮೂಲಕ ಮಾಹಿತಿಯನ್ನು Download ಮಾಡಿಕೊಂಡು, ತೆರಿಗೆ ಸಂಗ್ರಹಿಸಿ ಮಾಹಿತಿಯನ್ನು Upload ಮಾಡುವುದು, ಅಲ್ಲದೆ ವಿದ್ಯುತ್ ಬಿಲ್ಲು ಮತ್ತು ತೆರಿಗೆ ಬಿಲ್ಲನ್ನು ಜೊತೆಜೊತೆಯಲ್ಲಿಯೇ ನೀಡಲು ಪ್ರಯೋಗಗಳೂ ನಡೆಯುತ್ತಿವೆ.

ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಶೇ 50 ರಷ್ಟು ಮಾತ್ರ ತೆರಿಗೆ ವಸೂಲಿಯಾಗುತ್ತಿದ್ದು, ಶೇ 10 ರಿಂದ 100 ರವರೆಗೂ ವಸೂಲಿ ಮಾಡುತ್ತಿರುವ ಪಂಚಾಯತಿಗಳಿವೆ. ಕೆಲವು ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಿ ಮೊತ್ತವು, ತೆರಿಗೆ ವಸೂಲಿಗೆ ತಗಲುವ ಖರ್ಚಿಗೆ ಸಮನಾಗಿರುತ್ತದೆ. ನಿಗದಿತ ಸಮಯದಲ್ಲಿ ಫೋನ್ ಬಿಲ್ಲು, ಕೇಬಲ್ ಬಿಲ್ಲು, ವಿದ್ಯುತ್ ಬಿಲ್ಲು ಕಟ್ಟುವ ಜನಸಾಮಾನ್ಯರಿಗೆ ಗ್ರಾಮ ಪಂಚಾಯತಿಯಿಂದ ಕುಡಿಯುವ ನೀರಿನ ಸೌಲಭ್ಯ, ರಸ್ತೆ, ಬೀದಿ ದೀಪ, ನೈರ್ಮಲ್ಯ ಅಗತ್ಯ ಸೇವೆಗಳನ್ನು ನೀಡುವ ಗ್ರಾಮ ಪಂಚಾಯತಿಗೆ ತೆರಿಗೆ ಕಟ್ಟಲು ಜನರಲ್ಲಿ ಜಾಗೃತಿ ಮೂಡಿಸಿ ರಾಜ್ಯಮಟ್ಟದಲ್ಲಿ 100 ಚದರ ಮೀಟರ್‌ಗೆ 1 ರೂ. ನಂತೆ ತೆರಿಗೆಯ ದರ ನಿಗದಿಯಂತಹ ಅಗತ್ಯ ತಿದ್ದುಪಡಿಗಳನ್ನು ಪಾರದರ್ಶಕವಾಗಿ ಜಾರಿಗೆ ತಂದಲ್ಲಿ ಮಾತ್ರ ಈವರೆಗಿನ ತೆರಿಗೆಗಿಂತ ಸಾವಿರ ಕೋಟಿ ಹೆಚ್ಚು ತೆರಿಗೆಯನ್ನು ಸಂಗ್ರಹಿಸಲು ಗ್ರಾಮ ಪಂಚಾಯತಿಗಳು ಶಕ್ತವಾಗುತ್ತವೆ. ಈಗಾಗಲೇ ವಿದ್ಯುತ್ ಬಿಲ್ಲಿನ ನಿರ್ವಹಣೆಗಾಗಿ ಪ್ರತ್ಯೇಕ ಖಾತೆಯನ್ನು ತೆಗೆದಿರುವುದರಿಂದ ಶಾಸನಬದ್ಧ ಅನುದಾನವು ಸಿಬ್ಬಂದಿ ಸಂಬಳ ಮತ್ತು ವಿದ್ಯುತ್ ಬಿಲ್ಲಿನ ನಿರ್ವಹಣೆಗೆ ಸಾಕಾಗುತ್ತದೆ.

ತೆರಿಗೆ ನಿರ್ಧರಣೆಯನ್ನು ವೈಜ್ಞಾನಿಕವಾಗಿ ಮಾಡಿ, ವಸೂಲಾತಿ ಮಾಡದೆ ಇದ್ದರೆ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟುಮಾಡಿದಂತಾಗುತ್ತದೆ. ಕಡ್ಡಾಯವಾಗಿ ಖರ್ಚು ಮಾಡಬೇಕಾಗಿರುವ ಶೇ 25, ಜನಪ್ರತಿನಿಧಿಗಳಿಗೆ ನೀಡಬೇಕಾಗಿರುವ ಶೇ 3 ಗೌರವ ಧನ, ವಿದ್ಯುತ್ ಬಿಲ್ಲು, ಸಿಬ್ಬಂದಿ ಸಂಬಳದ ಮೇಲೆ ಪರಿಣಾಮ ಬೀರುತ್ತಾ ಗ್ರಾಮ ಪಂಚಾಯತಿಯ ಅಭಿವೃದ್ಧಿ ಕುಂಠಿತಗೊಂಡು ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ಗ್ರಾಮಪಂಚಾಯತಿಗಳ ನೂತನ ಸದಸ್ಯರ ಮುಂದಿರುವ ಸಮಸ್ಯೆಗಳು ಹಾಗೂ ಸವಾಲುಗಳು



ಕೆ.ಸೋಮಯ್ಯ

2015ನೇ ಸಾಲಿನಲ್ಲಿ ಆಯ್ಕೆಯಾಗಿರುವ ಗ್ರಾಮ ಪಂಚಾಯ್ತಿಗಳ ನೂತನ ಸದಸ್ಯರ ಮುಂದೆ ಕಂಡುಬರುವ ಸಾರ್ವತ್ರಿಕ ಹಾಗೂ ಸಾಮಾನ್ಯ ಮೂಲಭೂತ ಸಮಸ್ಯೆಗಳ ಬಗ್ಗೆ ಕಿರು ಪರಿಚಯ.

"ಪ್ರಜಾಪ್ರಭುತ್ವದ ಬೇರುಗಳೆಂದರೆ ಸ್ಥಳೀಯ ಸರ್ಕಾರಗಳು, ಆ ಬೇರುಗಳಿಗೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳೆಂಬ ನೀರು ಮತ್ತು ಗೊಬ್ಬರವನ್ನು ಬಳಸಿದರೆ ಪ್ರಜಾಪ್ರಭುತ್ವವೆಂಬ ಹೆಮ್ಮರ ರುಚಿಯಾದ ಹಣ್ಣುಗಳನ್ನು ನೀಡುತ್ತದೆ".



ಎಂಬ ಹೇಳಿಕೆಯನ್ನು ಒಮ್ಮೆ ಅವಲೋಕಿಸಿದಾಗ ಬೃಹತ್ ರಾಷ್ಟ್ರವಾದ ಭಾರತದಲ್ಲಿ ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಾದರೆ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಸಾಮಾಜಿಕ ನ್ಯಾಯ ಅತ್ಯವಶ್ಯಕವಾಗಿರುತ್ತದೆ. ನಮ್ಮ ದೇಶದಲ್ಲಿ ಬೇರೆ-ಬೇರೆ ಧರ್ಮ, ಜಾತಿ, ಭಾಷೆ ಹಾಗೂ ಸಂಸ್ಕೃತಿಗಳನ್ನು ಹೊಂದಿರುವ ಜನರು ವಾಸಿಸುತ್ತಿದ್ದು ಇವರೆಲ್ಲರಿಗೂ ಮೂಲಭೂತ ಸೌಕರ್ಯಗಳಾದ ಆಹಾರ, ಬಟ್ಟೆ, ವಸತಿಗಳನ್ನು ಒದಗಿಸಬೇಕಾದುದು ನಾಗರೀಕತೆಯ ಮೊದಲ ಹೆಜ್ಜೆಯಾಗಿರುತ್ತದೆ. ಈ ಮೊದಲ ಹೆಜ್ಜೆಯನ್ನು ಇಡಬೇಕಾದುದು ಸ್ಥಳೀಯ ಸರ್ಕಾರದ ಧ್ಯೇಯವಾಗಿರುತ್ತದೆ. ಇಂತಹ ಮಹತ್ವಪೂರ್ಣ ಧ್ಯೇಯೋದ್ದೇಶಗಳನ್ನು ಈಡೇರಿಸಬೇಕಾದುದು ಜನಪ್ರತಿನಿಧಿಗಳ ಆದ್ಯ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ 2015ನೇ ಸಾಲಿನಲ್ಲಿ ಆಯ್ಕೆಯಾಗಿರುವ ಎಲ್ಲಾ ಗ್ರಾಮಪಂಚಾಯತಿಗಳ ನೂತನ ಸದಸ್ಯರ ಮುಂದೆ ಕಂಡುಬರುವ ಸಾರ್ವತ್ರಿಕ ಹಾಗೂ ಸಾಮಾನ್ಯ ಮೂಲಭೂತ ಸಮಸ್ಯೆಗಳನ್ನು ಪಟ್ಟಿ ಮಾಡಬಹುದಾದರೆ...

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಶ್ರೀರಾಂಪುರ ಗ್ರಾಮಪಂಚಾಯ್ತಿ, ಮೈಸೂರು ತಾಲ್ಲೂಕು
ಮೊಬೈಲ್ ಸಂಖ್ಯೆ: 9480873322

**1. ಸಂವಹನದ ಕೊರತೆ (Lack of communication):**

ನಮ್ಮ ಅಭಿಪ್ರಾಯಗಳನ್ನು ಮತ್ತು ಅನಿಸಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಇರುವ ಏಕೈಕ ಸಾಧನ ವೆಂದರೆ ಭಾಷೆ. ನಾವು ಬಳಸುವ ಭಾಷೆಯು ಗುಣಮಟ್ಟದಿಂದ ಕೂಡಿದ್ದರೆ ಸಾರ್ವಜನಿಕ ಸಮಸ್ಯೆಗಳನ್ನು ಶೇಕಡ 50ರಷ್ಟು ಮೊದಲ ಬಾರಿಗೆ ನಿವಾರಿಸಬಹುದಾಗಿರುತ್ತದೆ ಎಂದರೆ ಜನಪ್ರತಿನಿಧಿಗಳು ಆಯ್ಕೆಯಾದ ಬಳಿಕವೂ ಸಹ ಜನಸೇವಕರೆಂದು ತಿಳಿದು ಸಾರ್ವಜನಿಕ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾದುದು ಉತ್ತಮ ಜನಪ್ರತಿನಿಧಿಯ ಲಕ್ಷಣ ವಾಗಿರುತ್ತದೆ. ಆದರೆ ವಯಸ್ಕ ಮತದಾನ (Adult Franchise system) ಪದ್ಧತಿಯ ಕಾರಣದಿಂದ ವಿದ್ಯಾರ್ಹತೆಯನ್ನು ಪರಿಗಣಿಸದೆ 21 ವರ್ಷ ವಯಸ್ಸಾದ ಸ್ತ್ರೀ–ಪುರುಷರು ಜನಪ್ರತಿನಿಧಿಗಳಾಗಿ ಆಯ್ಕೆಯಾಗಿರುವುದರಿಂದ ಎಲ್ಲೋ ಒಂದು ಕಡೆ ಸಂವಹನದ ಕೊರತೆ ಉಂಟಾಗಿ ಸಮಸ್ಯೆಗಳನ್ನು ಅರ್ಥೈಸುವಲ್ಲಿ ಜನ ಪ್ರತಿನಿಧಿಗಳು ಹಿಂದೆ ಬಿದ್ದಿರುವುದು ಸುಳ್ಳಲ್ಲ. ಆದಕಾರಣ ಉತ್ತಮ ಸಂವಹನ ಕೌಶಲ್ಯದ ಕೊರತೆಯನ್ನು ಹೋಗಲಾಡಿಸಿ ಕೊಳ್ಳಬೇಕಾದುದು ನೂತನ ಜನಪ್ರತಿನಿಧಿಗಳ ಪ್ರಥಮ ಹೊಣೆಗಾರಿಕೆಯಾಗಿರುತ್ತದೆ.

**2. ಕುಡಿಯುವ ನೀರಿನ ಸಮಸ್ಯೆ ಮತ್ತು ಪರಿಹಾರ:** ಎಲ್ಲಾರು ಮಾಡುವುದು ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ ಎಂಬ ಪುರಂದರದಾಸರ ಕೀರ್ತನೆಯಂತೆ



ಎಲ್ಲಾ ಜನಪ್ರತಿನಿಧಿಗಳ ಮೊದಲ ಜವಾಬ್ದಾರಿಯೆಂದರೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲು ಕ್ರಮವಹಿಸುವಂತದ್ದು. ಬೇಸಿಗೆ ದಿನಗಳಲ್ಲಿ ಹಾಗೂ ಪ್ರಾಕೃತಿಕ ವಿಕೋಪಗಳು ತಲೆದೋರಿದಾಗ ಉಂಟಾಗುವ ಸಮಸ್ಯೆಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸಬೇಕಾದುದು ಒಂದು ಸವಾಲೇ ಸರಿ.

**3. ರಸ್ತೆ ಮತ್ತು ಚರಂಡಿಗಳ ನಿರ್ಮಾಣ ಮತ್ತು ನಿರ್ವಹಣೆ:**



ಎಲ್ಲಾ ಕವಲು ದಾರಿಗಳು ಮುಖ್ಯರಸ್ತೆಯನ್ನೆ ಸೇರುವುದರಿಂದ ಗ್ರಾಮೀಣ ರಸ್ತೆಗಳನ್ನು ನಿರ್ಮಿಸಿ ಸರ್ವಋತು ಯೋಗ್ಯ ರಸ್ತೆಗಳನ್ನಾಗಿ ನಿರ್ಮಿಸಿ ನಿರ್ವಹಣೆ ಮಾಡಬೇಕಾಗಿರುವುದೂ ಸಹಾ ಒಂದು ಸವಾಲು ಹಾಗೂ ಸಮಸ್ಯೆಯಾಗಿರುತ್ತದೆ. ಕಾರಣ, ಸಾರ್ವಜನಿಕರಿಗೆ ಓಡಾಡಲು ಉತ್ತಮವಾದ ರಸ್ತೆಗಳು, ಮಲಿನಗೊಂಡ ನೀರು ನಿರ್ದಿಷ್ಟ ಜಾಗಕ್ಕೆ ಸೇರಲು ಚರಂಡಿ ಹಾಗೂ ಒಳಚರಂಡಿಯ ನಿರ್ಮಾಣ ಮತ್ತು ನಿರ್ವಹಣೆಯನ್ನು ಒದಗಿಸುತ್ತೇವೆಂಬ ಭರವಸೆಗಳ ಮೇಲೆ ಆಯ್ಕೆ ಬಯಸಿರುವುದು ಒಂದೆಡೆಯಾದರೆ ಅದು ಕನಿಷ್ಟ ಸೌಲಭ್ಯವೂ ಹೌದು. ಈ ಸಮಸ್ಯೆಯನ್ನು ಸವಾಲನ್ನಾಗಿ ಸ್ವೀಕರಿಸಿ ಸಂಬಂಧಪಟ್ಟ ಕಚೇರಿಗಳಲ್ಲಿ ಚರ್ಚಿಸಿ ಮಾರ್ಗೋಪಾಯ ಕಂಡುಹಿಡಿಯ ಬೇಕಾಗಿರುತ್ತದೆ.


### 4. ಗುಡಿಸಲು ಮತ್ತು ಮನೆಗಳ ನಿರ್ಮಾಣದ ಬಗ್ಗೆ:



ಮನುಷ್ಯನ ಕನಿಷ್ಠ ಅವಶ್ಯಕತೆಗಳಲ್ಲಿ ವಸತಿ ಸೌಕರ್ಯವು ಅತ್ಯಂತ ಪ್ರಮುಖವಾದದ್ದು. ದಿನವಿಡೀ ದುಡಿದು ಆಯಾಸಗೊಂಡ ದೇಹಕ್ಕೆ ವಿಶ್ರಾಂತಿಯನ್ನು ಕಲ್ಪಿಸುವ ಏಕೈಕ ದೇವಾಲಯವೆಂದರೆ ಅದು ಗುಡಿಸಲಾಗಿರಲಿ ಅಥವಾ ಬಂಗಲೆಯಾಗಿರಲಿ ಒಟ್ಟಾರೆಯಾಗಿ ಒಂದು ವಸತಿ ಸೌಕರ್ಯವು ಬೇಕಾಗಿರುತ್ತದೆ. ಆದರೆ, ನಾಗಾಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ವಾಸಯುಕ್ತ ನಿವೇಶನಗಳ ಲಭ್ಯತೆ ಪ್ರಮಾಣ ಮರೀಚಿಕೆಯಾಗಿರುತ್ತದೆ. ಸರ್ಕಾರದ ವಸತಿ ಯೋಜನೆಯಡಿ ದೊರೆಯುವ ಸೌಲಭ್ಯಗಳನ್ನು ಉಳ್ಳವರು ಪಡೆದುಕೊಳ್ಳುತ್ತಿರುವುದು ಸಾಮಾಜಿಕ ನ್ಯಾಯಕ್ಕೆ ಬಗೆದ ದ್ರೋಹವಾಗಿರುತ್ತದೆ. ಆದ್ದರಿಂದ ಗ್ರಾಮ ಪಂಚಾಯತಿಯ ಸುಪ್ರೀಂ ಕೋರ್ಟ್ ಎಂದೇ ಹೆಸರಾಗಿರುವ ಗ್ರಾಮಸಭೆಯ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಾಮಾಜಿಕ ಅಸಮಾನತೆಯ ನಿರ್ಮೂಲನಕ್ಕೆ ನಾಂದಿ ಹಾಡಬೇಕಾದುದು ಅವಶ್ಯವೇ ಸರಿ.

### 5. ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ:

Cleanliness is next to Godliness ಎಂಬ ನಾಣ್ಣುಡಿಯಂತೆ ವೈಯಕ್ತಿಕ ಸ್ವಚ್ಛತೆ ಮತ್ತು ಸಮುದಾಯದ ಸ್ವಚ್ಛತೆ ಬಹಳ ಅವಶ್ಯವಾಗಿರುತ್ತದೆ. ಮನುಷ್ಯರಿಗೆ ಆಹಾರದಷ್ಟೇ ಪ್ರಮುಖವಾದುದು ಸ್ವಚ್ಛ ಪರಿಸರದ ನಿರ್ಮಾಣ ಮತ್ತು ನಿರ್ವಹಣೆ. 22ನೇ ಶತಮಾನಕ್ಕೆ ಹತ್ತಿರದಲ್ಲಿರುವ ನಾವು ಇಂದಿಗೂ ಸಹ ಸ್ತ್ರೀ–ಪುರುಷರಾದಿಯಾಗಿ ಮಲಮೂತ್ರ ವಿಸರ್ಜನೆಗೆ ಬಯಲು ಪ್ರದೇಶಗಳನ್ನು ಅರಸಿ ಹೋಗುತ್ತಿರುವುದು ನಾಚಿಕೆಗೇಡಿನ ಸಂಗತಿ. ಆದಕಾರಣ, ಪ್ರತಿಯೊಂದು ಮನೆಗೂ ಒಂದು ಶೌಚಾಲಯವನ್ನು ನಿರ್ಮಿಸಿ ಕೊಳ್ಳಬೇಕಾದುದು ಎಲ್ಲರ ಮೊದಲ ಆದ್ಯತೆ ಯಾಗಿರುತ್ತದೆ. ಈ ನಿಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀಯುತ ಎಚ್.ಕೆ. ಪಾಟೀಲ್ ರವರು



ತೆಗೆದುಕೊಂಡಿರುವ ದಿಟ್ಟ ಹೆಜ್ಜೆ ಶ್ಲಾಘನೀಯ. ಅವರು ಹೇಳಿರುವಂತೆ ಕರ್ನಾಟಕ ರಾಜ್ಯವು 2018ರ ಅಂತ್ಯಕ್ಕೆ ಬಯಲು ಶೌಚಮುಕ್ತ ರಾಜ್ಯವಾಗಿ ಪರಿವರ್ತನೆ ಆಗಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಯಾವುದೇ ತಾರತಮ್ಯ ಮಾಡದೆ ಶೌಚಾಲಯ ಹೊಂದದೆ ಇರುವ ಕುಟುಂಬಗಳನ್ನು ಗುರುತಿಸಿ ಸರ್ಕಾರದಿಂದ ದೊರೆಯುವ ಸಹಾಯಧನದಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡು ಉತ್ತಮವಾಗಿ ನಿರ್ವಹಿಸುವಂತೆ ಕ್ರಮ ವಹಿಸಬೇಕಾದುದು ಅತ್ಯಂತ ಗುರುತರ ಜವಾಬ್ದಾರಿಯಾಗಿದೆ.

# ಗ್ರಾಮೀಣ ಕುಡಿಯುವ ನೀರಿನ ನಿರ್ಜೀವ ಕೊಳವೆಬಾವಿಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮರುಜೀವ

**ರವೀಂದ್ರನಾಥ್**

ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ದಕ್ಷ ಮತ್ತು ಪ್ರಾಮಾಣಿಕ ವಿಧಾನಗಳ ಮೂಲಕ ಬಳಕೆಮಾಡಿಕೊಂಡು ಬಡತನ ಪ್ರಮಾಣ ತಗ್ಗಿಸಿ. ಆದಾಯ ಅಸಮಾನತೆಯನ್ನು ತಗ್ಗಿಸಿ ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಿ ನಿರುದ್ಯೋಗ ಪ್ರಮಾಣವನ್ನು ಕಡಿತ ಮಾಡುವ ಉದ್ದೇಶದಿಂದ ಭಾರತ ಸರ್ಕಾರವು 'ಗ್ರಾಮೀಣ ದುಡಿಯುವ ಕೈಗಳಿಗೆ ಕಾಯಕ' ಎನ್ನುವ ಘೋಷ ವಾಕ್ಯದೊಂದಿಗೆ 2005 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ–2005 ಎನ್ನುವ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೆ ತರಲಾಗಿದೆ.

ಅಂತರ್ಜಲ ಕುಸಿತದಿಂದ ಬತ್ತಿಹೋಗಿರುವ ಗ್ರಾಮೀಣ ಕುಡಿಯುವ ನೀರಿನ ಕೊಳವೆಬಾವಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತಾಂತ್ರಿಕವಾಗಿ ಮರುಪೂರಣಗೊಳಿಸ ಲಾಗುತ್ತಿದೆ.



ಚಿತ್ರದುರ್ಗ ಜಿಲ್ಲೆ ಅತ್ಯಂತ ಪ್ರಸಿದ್ಧಿ ಪಡೆದಂತಹ ಜಿಲ್ಲೆ. ಈ ಜಿಲ್ಲೆಯಲ್ಲಿ ಏಳು ಸುತ್ತಿನ ಕೋಟೆ ಮತ್ತು ಕೊತ್ತಲುಗಳು, ಮಠಗಳು ಹಾಗೂ ಪ್ರಕೃತಿಯ ಸೊಗಡು ಈ ಜಿಲ್ಲೆಯಲ್ಲಿ ಪ್ರಸಿದ್ದ. ರಾಜವೀರ ಮದಕರಿನಾಯಕರ ವಂಶಸ್ಥರು ಆಳ್ವಿಕೆ ನಡೆಸಿದಂತಹ ವೀರ ಪರಂಪರೆಯನ್ನು ಹೊಂದಿದ ಜಿಲ್ಲೆ. ವೀರ ಮಹಿಳೆ ಒನಕೆ ಓಬವ್ವನಂತವರು ಜನಿಸಿದ ನಾಡು. ಚಿತ್ರದುರ್ಗ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಹೋರಾಟಗಾರರು ಹಾಗೂ ಮೈಸೂರು ಸಂಸ್ಥಾನದ ಮೊದಲ ಮುಖ್ಯ ಮಂತ್ರಿ ಮಾನ್ಯ ಶ್ರೀ ದಿ|| ಎಸ್. ನಿಜಲಿಂಗಪ್ಪನವರ ತವರು ಜಿಲ್ಲೆ. ಹಾಗೆಯೇ ಚಿತ್ರದುರ್ಗ ಜಿಲ್ಲೆ ತ.ರಾ.ಸು ಬೆಳಗೆರೆ ಕೃಷ್ಣಶಾಸ್ತ್ರಿ ಯವರಂತಹ ಸಾಹಿತಿಗಳು ಹುಟ್ಟಿ ಬೆಳೆದಂತಹ ನಾಡು.

ಜಿಲ್ಲಾ ಐಇಸಿ ಸಂಯೋಜಕರು, ಜಿಲ್ಲಾ ಪಂಚಾಯತ್, ಚಿತ್ರದುರ್ಗ.

## ಐತಿಹಾಸಿಕ ಗ್ರಾಮ

ಚಿತ್ರದುರ್ಗದಿಂದ ಸುಮಾರು 65 ಕಿ.ಮಿ. ದೂರದಲ್ಲಿರುವ ಕೊಂಡ್ಲಹಳ್ಳಿ ಗ್ರಾಮ ಪೌರಾಣಿಕ ಮಹತ್ವದ ಹಳ್ಳಿಯೂ ಹೌದು. ನಾಯಕನಹಟ್ಟಿಯ ಪವಾಡ ಪುರುಷ ಶ್ರೀ ಗುರುತಿಪ್ಪೇರುದ್ರಸ್ವಾಮಿ ಬಾಯಾರಿಕೆ ತೀರಿಸಿಕೊಳ್ಳಲು ತಮ್ಮ ಬೆತ್ತದಿಂದ ನೆಲವನ್ನು ಸ್ಪರ್ಶಿಸಿದಾಗ ನೀರು ಉದಿಸಿದ "ಬಿಳಿ ನೀರು ಚಿಲುಮೆ" ಇರುವುದು ಕೊಂಡ್ಲಹಳ್ಳಿಯಲ್ಲಿಯೇ. ಇಂತಹ ನೀರಿನ ಹಿನ್ನೆಲೆ ಇರುವ ಗ್ರಾಮದಲ್ಲಿಯೇ ನೀರಿಗೆ ಹಾಹಾಕಾರ ಉಂಟಾಗಿದ್ದು ಶೋಚನೀಯ.

## ಸಂಕ್ಷಿಪ್ತ ಪರಿಚಯ:

ಸುಮಾರು 12 ಸಾವಿರ ಜನಸಂಖ್ಯೆಯುಳ್ಳ ಕೊಂಡ್ಲಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕೊಂಡ್ಲಹಳ್ಳಿ, ಮಾರಮ್ಮನಹಳ್ಳಿ, ಪಿಜಾರಾಹಟ್ಟಿಗಳು ಬರುತ್ತವೆ. ಪ್ರೌಢಶಾಲೆ, ಆಸ್ಪತ್ರೆ, ಪದವಿ ಪೂರ್ವ ಕಾಲೇಜ್, ಚಿತ್ರಮಂದಿರಗಳು ಕಂಡು ಬರುತ್ತವೆ.



## ಜಿಲ್ಲಾ ಪಂಚಾಯಿತಿಯ ಮಾರ್ಗದರ್ಶನ:

ಇಂತಹ ಗ್ರಾಮದಲ್ಲಿ ಸುಮಾರು ಒಂದು ವರ್ಷದಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿತು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳ ಒಂದು ದಿನದ ಕಾರ್ಯಗಾರವನ್ನು ಚಿತ್ರದುರ್ಗದ ಜಲತಜ್ಞರ ಮಾರ್ಗದರ್ಶನದಡಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲ ಮರುಪೂರಣ ಕಾರ್ಯ ಕೈಗೆತ್ತಿಕೊಳ್ಳುವಂತೆ ಆದೇಶಿಸಿ ತುರ್ತಾಗಿ ಕೆಲಸ ನಿರ್ವಹಿಸಲು ಪ್ರೇರೇಪಿಸಿದರು.



## ತಾಲ್ಲೂಕು ಪಂಚಾಯಿತಿಯ ನೇತೃತ್ವ:

ಜಿಲ್ಲಾ ಪಂಚಾಯಿತಿಯ ಆಶಯಕ್ಕೆ ತಕ್ಕಂತೆ ಮೊಳಕಾಲ್ಮೂರು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಳಂಬ ಮಾಡದೆ ತಾಲ್ಲೂಕಿನಲ್ಲಿ ಕೊಳವೆ ಬಾವಿ ಮರುಪೂರಣ ಕಾರ್ಯ ಕೈಗೆತ್ತಿಕೊಂಡು, ನೀರಿನ ಸಮಸ್ಯೆ ಹೆಚ್ಚಾಗಿದ್ದ ಕೊಂಡ್ಲಹಳ್ಳಿ ಗ್ರಾಮವನ್ನು ಪ್ರಥಮವಾಗಿ ಆಯ್ಕೆ ಮಾಡಿಕೊಂಡು ತಾವೇ ಖುದ್ದಾಗಿ ಸಹಾಯಕ ನಿರ್ದೇಶಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ರೊಂದಿಗೆ ಬತ್ತಿಹೋದ



ಬೋರ್‌ವೆಲ್‌ಗಳ ಸಮೀಕ್ಷೆ ನಡೆಸಿ ಗ್ರಾಮದ ಪದವಿ ಪೂರ್ವ ಕಾಲೇಜು ಬಳಿ ಇರುವ ವಿಫಲವಾದ ಬೋರ್‌ವೆಲ್‌ನ್ನು ಆಯ್ಕೆ ಮಾಡಿಕೊಂಡರು.

## ಗ್ರಾಮ ಪಂಚಾಯತಿಯಿಂದ ಕಾರ್ಯಾಚರಣೆ:

2011–12 ನೇ ಸಾಲಿನಲ್ಲಿ ತೆಗೆಸಿದ್ದ 500 ಅಡಿ ಆಳದ ಬೋರ್‌ವೆಲ್‌ನಲ್ಲಿ 2 ಇಂಚು ನೀರು ಬರುತ್ತಿತ್ತು. ಈ ನೀರನ್ನು ಪ್ರೌಢಶಾಲಾ ಮಕ್ಕಳು ಮತ್ತು ಊರಿನ



ಜನ ಕುಡಿಯುವುದಕ್ಕೆ ಬಳಸುತ್ತಿದ್ದರು. ಶಾಲಾ ಮಕ್ಕಳು ಮಧ್ಯಾಹ್ನದ ಬಿಸಿ ಊಟ ಮಾಡಿದ ಮೇಲೆ ದಾಹ ತೀರಿಸಿಕೊಳ್ಳುವುದಕ್ಕೆ, ಶಾಲೆಯ ಗಿಡಮರಗಳಿಗೆ ಹಾಗೂ ಬಿಸಿ ಊಟ ತಯಾರು ಮಾಡುವುದಕ್ಕೆ ಈ ಬೋರ್‌ವೆಲ್‌ನ್ನು ಅವಲಂಬಿಸಿದ್ದರು. 8 ತಿಂಗಳಿನಿಂದ ನೀರಿನ ಲಭ್ಯತೆ ಕಡಿಮೆ ಆಗಿದ್ದು, ಕಳೆದ 3 ತಿಂಗಳಿನಿಂದ ನೀರು ಸಂಪೂರ್ಣ ಬತ್ತಿಹೋಗಿತ್ತು. ಶಾಲಾ ಶಿಕ್ಷಕರು, ಊರಿನ ಜನ ಈ ಬೋರ್‌ವೆಲ್ ಬತ್ತಿಹೋಗಿರುವುದಕ್ಕೆ ತುಂಬ ಬೇಸರಗೊಂಡು ಸುಮ್ಮನಾಗಿದ್ದರು. ನಾಲ್ಕೈದು ಎಕರೆ ವ್ಯಾಪ್ತಿಯ ಮಳೆ ನೀರು ವ್ಯರ್ಥವಾಗಿ ಹರಿಯುವ ನೀರನ್ನು ಭೂಮಿಯಲ್ಲಿ ಹಿಂಗಿಸಲು ಗ್ರಾಮ ಪಂಚಾಯತಿಯು ಕೂಲಿ ಕಾರ್ಮಿಕರನ್ನು ಬಳಸಿಕೊಂಡು ದಿನಾಂಕ: 24.04.2015 ರಿಂದ 23.05.2015 ರವರೆಗೆ 200 ಮಾನವ ದಿನಗಳಿಗೆ ಎನ್.ಎಂ.ಆರ್. ಸೃಜಿಸಿ ಸಮರೋಪಾದಿಯಲ್ಲಿ ಕೊಳವೆ ಬಾವಿ ಮರುಪೂರಣ ಕೆಲಸ ಆರಂಬಿಸಲಾಯಿತು. ಮೊದಲಿಗೆ ಬೋರ್‌ವೆಲ್‌ನ ಸುತ್ತಲು 12x12x12 ಆಳದ ಗುಂಡಿಯನ್ನು ತೆಗೆದು ಕೇಸಿಂಗ್ ಪೈಪ್‌ನಿಂದ ನೀರು ಒಳಹೋಗಲು ಅನುವಾಗುವಂತೆ 2 ಇಂಚಿಗೊಂದ ರಂತೆ ರಂಧ್ರ ಕೊರೆದು ನೀರಿನ ಜೊತೆ ಮಣ್ಣು ಒಳ ಸೇರದಂತೆ ಪರದೆ ಕಟ್ಟಲಾಯಿತು. ನಂತರ ಕಡುಗಲ್ಲುಗಳನ್ನು ಸ್ವಲ್ಪ ಭಾಗದವರೆಗೆ ತುಂಬಿ ನಂತರ ಬೋಲ್ಡರ್ಸ್ ಹಾಕಲಾಯಿತು. ಅದರ ಮೇಲ್ಭಾಗದಲ್ಲಿ 40 ಎಂ.ಎಂ.ಜಲ್ಲಿಯನ್ನು ಹರಡಲಾಯಿತು. ನಂತರ 20 ಎಂ.ಎಂ.ಜಲ್ಲಿಯನ್ನು ಹಾಕಲಾಯಿತು. ನಂತರ ನೀರಿನ ಶುದ್ಧೀಕರಣಕ್ಕಾಗಿ ಇದ್ದಿಲನ್ನು ಹಾಕಲಾಗಿ, ಅದರ ಮೇಲೆ ಮತ್ತೊಮ್ಮೆ ಪರದೆಯನ್ನು ಹರಡಿ ಉತ್ತಮ ಗುಣಮಟ್ಟದ 2 ಟ್ರಾಕ್ಟರ್ ಮರಳನ್ನು ಹರಡಲಾಯಿತು. ಮರುಪೂರಣದ ಸುತ್ತ ಪ್ಯಾರಾಪಿಟ್ ನಿರ್ಮಿಸಿ ಅದಕ್ಕೆ 2 ಇನ್‌ಲೆಟ್ 1 ಔಟ್‌ಲೆಟ್ ಒಳಗೊಂಡ ಮರುಪೂರಣ ಘಟಕ ನಿರ್ಮಾಣ ಮಾಡಲಾಯಿತು. ಈ ಘಟಕಕ್ಕೆ ಕೂಲಿ ಮೊತ್ತ ರೂ.40,800=00, ಸಾಮಾಗ್ರಿ ಮೊತ್ತ ರೂ.27,200=00ಗಳು ಸೇರಿ ಒಟ್ಟು ರೂ. 68,000=00 ಗಳನ್ನು ವೆಚ್ಚ ಮಾಡಲಾಯಿತು.

## ಫಲ ನೀಡಿದ ಕಾರ್ಯಕ್ರಮ:

ಮೇ–2015ರ ಮಾಹೆಯಲ್ಲಿ ಸುರಿದ ಮಳೆಯಿಂದಾಗಿ ಈ ಮರುಪೂರಣ ಘಟಕಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬಂದು ಮರುಪೂರಣ ಘಟಕದಿಂದ ಹಿಂಗಿದೆ. ಹೀಗೆ ಮುಂದುವರೆದಲ್ಲಿ ನಿರ್ಜೀವ ಕೊಳವೆ ಬಾವಿಯಿಂದ ಸಮೃದ್ಧ ನೀರನ್ನು



ಪಡೆಯಬಹುದಾಗಿದೆ. ಇದನ್ನು ಕಂಡ ಕೆಲವರು ಸ್ವ–ಇಚ್ಛೆಯಿಂದ ತಮ್ಮ ಜಮೀನುಗಳಲ್ಲಿ ಬತ್ತಿ ಹೋದ ಬೋರ್‌ವೆಲ್‌ಗಳಿಗೆ ಸ್ವಂತ ಖರ್ಚಿನಿಂದ ಈ ಮಾದರಿ ಯಲ್ಲಿ ಮರುಪೂರಣ ಘಟಕ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಕಾರ್ಯನಿರ್ವಾಹಕ ಅಧಿಕಾರಿಗಳು ಕಡ್ಡಾಯವಾಗಿ ಎಲ್ಲಾ ಗ್ರಾಮ ಪಂಚಾಯತಿಗಳು ಮರುಪೂರಣ ಘಟಕ ಮಾಡಿಕೊಳ್ಳುವಂತೆ ಸೂಚನೆಗಳನ್ನು ನೀಡಿದ್ದು, ಗ್ರಾಮಸ್ಥರು ಈ ಜಲಮರುಪೂರಣ ಘಟಕಕ್ಕೆ ಶ್ರಮಿಸಿದ ಎಲ್ಲಾ ಅಧಿಕಾರಿಗಳು ಮತ್ತು ನೌಕರರುಗಳಿಗೆ ಈ ಮೂಲಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಯಶೋಗಾಥೆ



ಡಾ. ಆರ್. ರಾಗಪ್ರಿಯ ಭಾ.ಆ.ಸೇ.,

ಕಾಫಿ ನಾಡು ಚಿಕ್ಕಮಗಳೂರು ಜಿಲ್ಲೆಗೆ 2013–14ನೇ ಸಾಲಿನ ಕೇಂದ್ರ ಸರ್ಕಾರದ ಯೋಜನೆಗಳನ್ನು ಯಶಸ್ವಿ ಅನುಷ್ಠಾನಗೊಳಿಸಿ 2014–15ನೇ ಸಾಲಿನಲ್ಲಿ ಸಶಸ್ತ್ರೀಕರಣ ಪುರಸ್ಕಾರವನ್ನು ಮುಡಿಗೇರಿಸಿಕೊಂಡಿದೆ.

# 2014-15ನೇ ಸಾಲಿನ ಪಂಚಾಯತ್ ಸಶಸ್ತ್ರೀಕರಣ ಪುರಸ್ಕಾರ ಪ್ರಶಸ್ತಿಯನ್ನು ಮುಡಿಗೇರಿಸಿದ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ.

ಚಿಕ್ಕಮಗಳೂರು ಜಿಲ್ಲೆಯು ಭೌಗೋಳಿಕವಾಗಿ ವೈಶಿಷ್ಟ್ಯಪೂರ್ಣವಾದ ಜಿಲ್ಲೆ. ಜಿಲ್ಲೆಯು 7 ತಾಲ್ಲೂಕುಗಳನ್ನು ಹೊಂದಿದ ಅರೆ ಮಲೆನಾಡು ಜಿಲ್ಲೆಯಾಗಿರುತ್ತದೆ. ಮೂಡಿಗೆರೆ ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳು ಪೂರ್ಣ ಮಲೆನಾಡು ಪ್ರದೇಶವಾಗಿದ್ದು, ಕಡೂರು, ತರೀಕೆರೆ ತಾಲ್ಲೂಕುಗಳು ಬಯಲುಸೀಮೆ ಪ್ರದೇಶವಾಗಿರುತ್ತವೆ. ಚಿಕ್ಕಮಗಳೂರು ತಾಲ್ಲೂಕು ಅರೆಮಲೆನಾಡು ಪ್ರದೇಶವಾಗಿರುತ್ತದೆ. ಚಿಕ್ಕಮಗಳೂರಿನ ಗಿರಿಶ್ರೇಣಿಗಳು ಪಶ್ಚಿಮಘಟ್ಟಗಳ ಒಂದು ಭಾಗವಾಗಿದ್ದು, ತುಂಗಾ, ಭದ್ರಾ ಮತ್ತು ಹೇಮಾವತಿ ಜೀವನದಿಗಳ ಉಗಮ ಸ್ಥಾನವಾಗಿದೆ. ಕರ್ನಾಟಕದ ಅತ್ಯಂತ ಎತ್ತರ ಶಿಖರವಾದ ಮುಳ್ಳಯ್ಯನಗಿರಿ ಇರುವುದು ಚಿಕ್ಕಮಗಳೂರು ಜಿಲ್ಲೆಯಲ್ಲಿಯೇ. ಅಭಯಾರಣ್ಯಗಳು, ನಿತ್ಯಹರಿದ್ವರ್ಣ ಕಾಡುಗಳಿಂದ ಕೂಡಿದ ಪರ್ವತಶ್ರೇಣಿಗಳು ಹಾಗೂ ಅನೇಕ ಜಲಪಾತಗಳು ಇದ್ದು ಜಲ ಮತ್ತು ಪ್ರಕೃತಿ ಸಂಪತ್ತಿಗೆ ಪ್ರಸಿದ್ದಿ ಪಡೆದಿದೆ. ಕಾಫಿ, ಟೀ, ಏಲಕ್ಕಿ ,ಮೆಣಸು, ಅಡಿಕೆ ಬಾಳೆ, ತೆಂಗು ಜಿಲ್ಲೆಯ ಮುಖ್ಯ ಬೆಳೆಯಾಗಿ ಕಾಫಿ ನಾಡು ಎಂದೇ ಪ್ರಸಿದ್ಧಿ ಪಡೆದಿದೆ.




ಚಿಕ್ಕಮಗಳೂರು ಜಿಲ್ಲೆಯು ಪ್ರಸಿದ್ಧ ಪ್ರವಾಸಿ ತಾಣವಾಗಿದ್ದು, ರಾಜ್ಯದಲ್ಲಿ 5ನೇ ಸ್ಥಾನ ಹೊಂದಿರುತ್ತದೆ. ಜಿಲ್ಲೆಗೆ ಪ್ರತಿ ವರ್ಷ ಲಕ್ಷಾಂತರ ದೇಶಿ–ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಜಿಲ್ಲೆಯ ಆದಾಯದಲ್ಲಿ ಪ್ರವಾಸಿ ಕ್ಷೇತ್ರದಿಂದ ಬರುವ ಆದಾಯುವೂ ಒಂದು ಮೂಲವಾಗಿದ್ದು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿರುತ್ತದೆ. ಶಂಕರಾಚಾರ್ಯರು ಸ್ಥಾಪಿಸಿದ 4 ಪ್ರಮುಖ ಮಠಗಳಲ್ಲಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.



ಮೊದಲನೆಯದನ್ನು ಹೊಂದಿರುವ ಕ್ಷೇತ್ರ ಶೃಂಗೇರಿಯ ಶ್ರೀ ಶಾರದಾಪೀಠ. ಕಿಗ್ಗಾದಲ್ಲಿರುವ ಋಷ್ಯ ಶೃಂಗೇಶ್ವರ ದೇವಸ್ಥಾನ, ಖಾಂಡ್ಯ, ಬಾಳೆಹೊನ್ನೂರು ರಂಭಾಪುರಿ ಮಠ, ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಕಳಸೇಶ್ವರ ದೇವಸ್ಥಾನ, ಹೊಯ್ಸಳ ಸಾಮ್ರಾಜ್ಯದ ಉಗಮಸ್ಥಾನ ಸೊಸೆಯೂರು (ಅಂಗಡಿ), ಅಮೃತಾಪುರದ ಶ್ರೀ ಅಮೃತೇಶ್ವರ ದೇವಸ್ಥಾನ, ಹಿರೇಮಗಳೂರು ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನ, ಬೆಳವಾಡಿಯ ಶ್ರೀ ವೀರನಾರಾಯಣ ದೇವಸ್ಥಾನ, ದತ್ತಾತ್ರೇಯ ಪೀಠ ಮುಂತಾದ ಇತಿಹಾಸ ಪ್ರಸಿದ್ಧ ಧಾರ್ಮಿಕ ಸ್ಥಳಗಳಾಗಿರುತ್ತದೆ. ಮಾಣಿಕ್ಯಧಾರ, ಹೆಬ್ಬೆ, ಕಲ್ಲತ್ತಿಗಿರಿ ಜಲಪಾತಗಳು, ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ ಮುಂತಾದವು ಪ್ರವಾಸಿಗರ ಆಕರ್ಷಣೀಯ ಸ್ಥಳಗಳಾಗಿರುತ್ತವೆ.

ಚಿಕ್ಕಮಗಳೂರು ಜಿಲ್ಲೆಯು ಭೌಗೋಳಿಕವಾಗಿ 7,22,075 ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು ರಾಜ್ಯದಲ್ಲಿ 14ನೇ ಸ್ಥಾನದಲ್ಲಿರುತ್ತದೆ. ಒಟ್ಟಾರೆ ಭೌಗೋಳಿಕ ವಿಸ್ತೀರ್ಣದಲ್ಲಿ 3,13,377 ಹೆಕ್ಟೇರ್ ಹಿಡುವಳಿ ವಿಸ್ತೀರ್ಣವಿರುತ್ತದೆ ಹಾಗೂ 200485 ಹೆಕ್ಟೇರ್ ಅರಣ್ಯ ಭೂಮಿ ಇರುತ್ತದೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯ ಜನಸಂಖ್ಯೆ 11,37,961 ಆಗಿದ್ದು, ಇದರಲ್ಲಿ 2,53,651 ಪರಿಶಿಷ್ಟ ಜಾತಿ ಹಾಗೂ 44,970 ಪರಿಶಿಷ್ಟ ವರ್ಗದವರಾಗಿರುತ್ತಾರೆ. ಜಿಲ್ಲೆಯ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ಸರಾಸರಿ 158 ಆಗಿರುತ್ತದೆ. ಜಿಲ್ಲೆಯು ಶೇಕಡ 76.28 ರಷ್ಟು ಸಾಕ್ಷರತೆಯನ್ನು ಹೊಂದಿರುತ್ತದೆ.

ಚಿಕ್ಕಮಗಳೂರು ಜಿಲ್ಲೆಯು 7 ತಾಲ್ಲೂಕುಗಳು, 2 ಕಂದಾಯ ಉಪವಿಭಾಗಗಳು, 34 ಹೋಬಳಿಗಳು, 227 ಗ್ರಾಮ ಪಂಚಾಯತಿಗಳು ಮತ್ತು 11 ನಾಡ ಕಛೇರಿಗಳನ್ನು, 1 ನಗರಸಭೆ, 3 ಪುರಸಭೆಗಳನ್ನು, 4 ಪಟ್ಟಣ ಪಂಚಾಯತಿಗಳು ಹಾಗೂ 1 ಅಧಿಸೂಚಿತ ಪ್ರದೇಶ ಹೊಂದಿರುತ್ತದೆ. 1,034 ಜನವಸತಿ ಇರುವ, 83 ಜನವಸತಿ ಇಲ್ಲದಿರುವ ಹಾಗೂ 3,053 ದಾಖಲೆ ಗ್ರಾಮಗಳನ್ನು ಹೊಂದಿರುತ್ತದೆ. ಕಡೂರು ಹಾಗೂ ತರೀಕೆರೆ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿರುತ್ತವೆ. ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 1904 ಮಿ.ಮೀ.ಇದ್ದು, ಶೃಂಗೇರಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಹಾಗೂ ಕಡೂರು ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ 2014–15ನೇ ಸಾಲಿನ ಕೇಂದ್ರ ಸರ್ಕಾರದ ಪಂಚಾಯತ್ ಸಶಸ್ತ್ರೀಕರಣ ಪುರಸ್ಕಾರ ಪ್ರಶಸ್ತಿ ಲಭಿಸಿದ್ದು ಜಿಲ್ಲೆಗೆ ಹೆಮ್ಮೆ ತರುವ ಹಾಗೂ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಕಿರೀಟ ವಿಟ್ಟಂತಾಗಿದೆ. ಈ ಪ್ರಶಸ್ತಿಯಿಂದ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ಅಭಿವೃದ್ಧಿಗೆ ಮತ್ತಷ್ಟು ವೃದ್ಧಿಯಾಗಿರುತ್ತದೆ. 2013–14ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ಉನ್ನತೀಕರಣ, ಗ್ರಾಮೀಣ ಕುಡಿಯುವ ನೀರು, ಪೌಷ್ಟಿಕ ಆಹಾರ, ನಿರ್ಮಲ ಭಾರತ ಅಭಿಯಾನ, ಬೀದಿದೀಪ, ಆರೋಗ್ಯ ಕಾರ್ಯಕ್ರಮಗಳಲ್ಲಿ ಉತ್ತಮವಾಗಿ ಪ್ರಗತಿ ಸಾಧಿಸಲಾಗಿದೆ,

2013–14ನೇ ಸಾಲಿನಲ್ಲಿ 6 ಸಾಮಾನ್ಯ ಸಭೆಗಳು ನಡೆದಿದ್ದು, ಅವುಗಳಲ್ಲಿ ಕೋರಂ ಕೊರತೆಯಿಂದ ಯಾವುದೇ ಸಭೆಗಳನ್ನು ಮುಂದೂಡಲಾಗಿಲ್ಲ. ಎಲ್ಲಾ ಸಭೆಗಳ ನಡವಳಿಗಳನ್ನು ಕ್ರಮಬದ್ಧವಾಗಿ ದಾಖಲಿಸಲಾಗಿದೆ. 2013–14ನೇ ಸಾಲಿನಲ್ಲಿ ಎಲ್ಲಾ 5 ಸ್ಥಾಯಿ ಸಮಿತಿ ಸಭೆಗಳು ಕ್ರಮಬದ್ಧವಾಗಿ 4 ಬಾರಿ ಸಭೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ, ಹೀಗಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಲು ಕಾರಣ



ವಾಗಿರುತ್ತದೆ. ಚುನಾಯಿತ ಜನಪ್ರತಿನಿಧಿಗಳಿಗೆ ಆಗಿಂದಾಗ್ಗೆ ಎಲ್ಲಾ ಕಾರ್ಯಕ್ರಮಗಳ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಕುರಿತು ತರಬೇತಿ ನೀಡುವಲ್ಲಿ ಜಿಲ್ಲಾ ಪಂಚಾಯತಿ ಯಶಸ್ವಿಯಾಗಿರುತ್ತದೆ ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರುಗಳು ಸಹ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಪ್ರಗತಿ ಸಾಧಿಸಲು ಉತ್ತಮ ಸಹಕಾರ ನೀಡಿರುತ್ತಾರೆ. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆ ಮತ್ತು ಸ್ಥಾಯಿ ಸಮಿತಿ ಸಭೆಗಳಿಗೆ ಅಧಿಕಾರಿಗಳು ಸಹ ಸಕ್ರಿಯವಾಗಿ ಪಾಲ್ಗೊಂಡು ಅಭಿವೃದ್ಧಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ ಜಿಲ್ಲಾಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿರುವುದನ್ನು ಜಿಲ್ಲಾ ಪಂಚಾಯತಿಯಲ್ಲಿ ಆಗಿಂದಾಗ್ಗೆ ಪರಿಶೀಲನೆ ಮಾಡುವುದರ ಮೂಲಕ ಉತ್ತಮವಾಗಿ ಹಾಗೂ ಗುಣಮಟ್ಟದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಾಧ್ಯವಾಗಿರುತ್ತದೆ ಹಾಗೂ ನಿಗದಿತ ಸಮಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿ ಜಿಲ್ಲೆಯು ಮಾದರಿ ಜಿಲ್ಲೆಯಾಗಿರುತ್ತದೆ.

ವಿವಿಧ ಇಲಾಖೆ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಪ್ರತಿ ತಿಂಗಳು ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗುವ ಮಾಸಿಕ ಕೆಡಿಪಿ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗುವ ತ್ರೈಮಾಸಿಕ ಕೆಡಿಪಿ ಸಭೆಗಳು ನಡೆಸಿ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಶೇಕಡ 96ರಷ್ಟು ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಚುನಾಯಿತ ಜನಪ್ರತಿನಿಧಿಗಳು ಇದರಲ್ಲಿ ಹೆಚ್ಚಿನ ಆಸಕ್ತಿ ಮತ್ತು ಉತ್ಸಾಹ ತೋರಿಸಿ ಉತ್ತಮ ಸಹಕಾರ ನೀಡಿರುತ್ತಾರೆ.

ಪ್ರತಿ ವರ್ಷದಂತೆ ಮುಂಬರುವ ಆರ್ಥಿಕ ವರ್ಷಕ್ಕೆ ಕರಡು ಯೋಜನೆಯನ್ನು ತಯಾರಿಸುವಾಗ ಆದ್ಯತೆಯನ್ನು ಚುನಾಯಿತ ಜನಪ್ರತಿನಿಧಿಗಳಿಂದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬೇಕಾಗುವಷ್ಟು ಅನುದಾನವನ್ನು ನಿಗದಿಪಡಿಸಿ ಸರ್ಕಾರಕ್ಕೆ ಸಲ್ಲಿಸುವಲ್ಲಿ ಜಿಲ್ಲಾ ಪಂಚಾಯತಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದೆ.

ವಿವಿಧ ಸ್ಥಾಯಿ ಸಮಿತಿ ಸಭೆಗಳಲ್ಲಿ, ಸಾಮಾನ್ಯ ಸಭೆ ಹಾಗೂ ಇತರೆ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಪರವಾದ ಚರ್ಚೆ, ಕಾರ್ಯಕ್ರಮಗಳ ಅನುಷ್ಠಾನವನ್ನು ಗಣನೆಗೆ



ತೆಗೆದುಕೊಂಡಿರುವ ಆಯ್ಕೆ ಸಮಿತಿ ಪ್ರಶಸ್ತಿಗೆ ಈ ಜಿಲ್ಲೆಯನ್ನು ಆಯ್ಕೆ ಮಾಡಿರುವುದು ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ ಕಳಸವಿಟ್ಟಂತಾಗಿದೆ.

ಕೇಂದ್ರ ಸರ್ಕಾರದ ಯೋಜನೆಗಳಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ನಿರ್ಮಲ ಭಾರತ ಅಭಿಯಾನ,



ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಗಳಲ್ಲಿ ವಿವಿಧ ಇಲಾಖೆ ಅಂದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅರಣ್ಯ, ಪಶುಪಾಲನೆ, ಕೃಷಿ, ವಸತಿ ಇಲಾಖೆಯೊಂದಿಗೆ ಒಗ್ಗೂಡಿಸಿ ಹೆಚ್ಚಿನ ಪ್ರಗತಿ ಸಾಧಿಸುವಲ್ಲಿ ಯಶಸ್ವಿ ಯಾಗಿದೆ.

ಶಿಕ್ಷಣ ಇಲಾಖೆಯಲ್ಲಿ ಶೇಕಡ 100ರಷ್ಟು 6–14 ವರ್ಷದೊಳಗಿನ ಮಕ್ಕಳನ್ನು ಶಾಲೆಗಳಿಗೆ ದಾಖಲಿಸ ಲಾಗಿದೆ. 0–5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಾಗೂ ಇತರೆ ಸಂಸ್ಥೆಗಳ ಮೂಲಕ ಡಿಪಿಟಿ ವ್ಯಾಕ್ಸಿನ್ ಮಾಡಲಾಗಿದೆ. ವಿಶೇಷವಾಗಿ ಹೆಚ್‌ಐವಿ ಇರುವ ಮಹಿಳೆಯರ ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯ ಕಲ್ಪಿಸಲಾಗಿದೆ. ಹೆಚ್‌ಐವಿ ಗರ್ಭಿಣಿಯರಿಗೆ ಯಶಸ್ವಿನಿ ಕಾರ್ಡ್ ನೀಡುವುದರ ಮೂಲಕ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. 1286 ಹೆಚ್‌ಐವಿ ರೋಗಿಗಳಿಗೆ ಎಆರ್‌ಟಿ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗಿದೆ. 2026 ಲೈಂಗಿಕ ಕಾರ್ಯಕರ್ತೆಯರಿಗೆ ಉಚಿತವಾಗಿ ವೈದ್ಯಕಿಯ ಸೌಲಭ್ಯ ಒದಗಿಸಲಾಗಿದೆ. ಇವರಿಗೆ ಆಧಾರ್ ಕಾರ್ಡ್, ಅಂತ್ಯೋದಯ ಪಡಿತರ ಚೀಟಿ ಗಳನ್ನು ವಿತರಿಸಲಾಗಿದೆ.

ಸಾಮಾಜಿಕ ಮತ್ತು ಪ್ರಾದೇಶಿಕ ಅರಣ್ಯ ಇಲಾಖೆ ಮುಖಾಂತರ ಉತ್ತಮ ಗಿಡಗಳನ್ನು ಬೆಳೆಸಿ ನೆಡುವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ನೈಸರ್ಗಿಕ ಸಂರಕ್ಷಣೆ ಮಾಡಲಾಗಿದೆ.

ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆ ಮತ್ತು ಸ್ಥಾಯಿ ಸಮಿತಿಗಳ ನಡಾವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸಿ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಿಗದಿತ ನಮೂನೆಗಳಲ್ಲಿ ವಾರ್ಷಿಕ ಲೆಕ್ಕ ನಿರ್ವಹಣೆ ಮಾಡಲಾಗಿದೆ ಹಾಗೂ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ನಿಗದಿತ ಸಮಯಕ್ಕೆ ಸಲ್ಲಿಸಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಕಛೇರಿಯಲ್ಲಿ ಮತ್ತು ಅಧೀನ ಕಛೇರಿಗಳಲ್ಲಿ ಪತ್ರ ವ್ಯವಹಾರಗಳನ್ನು ಎಲ್‌ಎಂಎಸ್ ಮತ್ತು ಎಫ್‌ಎಂಎಸ್ ಮೂಲಕ ವಿಲೇವಾರಿ ಮಾಡಿ ತ್ವರಿತ ಗತಿಯಲ್ಲಿ ಪತ್ರಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಹಾಗೂ ವರ್ಷಾಂತ್ಯದಲ್ಲಿ ಕಡತಗಳನ್ನು ಆರ್.ಸಿ. ಪೋರ್ಟಲ್‌ಗೆ ಅಳವಡಿಸಲಾಗುತ್ತಿದೆ ಹಾಗೂ 4(1)ಎ ಮತ್ತು 4(1)ಬಿ ಯಲ್ಲಿ ವರದಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿನ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೂ ಹಾಗೂ 226 ಗ್ರಾಮ ಪಂಚಾಯತಿಗಳಿಗೂ ಬ್ರಾಡ್‌ಬ್ಯಾಂಡ್ ಸೌಲಭ್ಯ ಒದಗಿಸಿ ಪತ್ರಗಳ ವ್ಯವಹಾರವನ್ನು ಆನ್‌ಲೈನ್‌ನಲ್ಲಿ ಮಾಡುವುದರ ಮೂಲಕ ವಿಳಂಬಕ್ಕೆ ಅವಕಾಶ ನೀಡದಂತೆ ಆಡಳಿತವನ್ನು ಚುರುಕುಗೊಳಿಸಲಾಗುತ್ತಿದೆ.

ಹಿಂದಿನ ವರ್ಷದಲ್ಲಿ ಬಾಕಿ ಇದ್ದ ಎಲ್ಲಾ 44 ಆಡಿಟ್ ಪ್ಯಾರಾಗಳಿಗೆ ಅನುಪಾಲನೆ ನೀಡಿ ಮುಕ್ತಾಯಗೊಳಿಸಿದೆ. ಸಾರ್ವಜನಿಕ ಕುಂದುಕೊರತೆ ವಿಭಾಗಕ್ಕೆ 160 ಅರ್ಜಿಗಳು ಸ್ವೀಕೃತವಾಗಿದ್ದು ಇವುಗಳಿಗೆ ಸೂಕ್ತ ಕ್ರಮವಹಿಸಿ ಸಮಂಜಸವಾಗಿ ಉತ್ತರಿಸಲಾಗಿದೆ. ಮಾಹಿತಿ ಹಕ್ಕು ಅಧಿನಿಯಮ 2005ರಡಿ ಮಾಹಿತಿ ಕೋರಿ 138 ಅರ್ಜಿಗಳು ಸ್ವೀಕೃತವಾಗಿದ್ದು, 137 ಅರ್ಜಿಗಳಿಗೆ ಉತ್ತರಿಸಲಾಗಿದೆ. 5 ಅರ್ಜಿಗಳನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸಿದೆ.

2013–14ನೇ ಸಾಲಿನ ಆಯವ್ಯಯ ಮತ್ತು 13ನೇ ಹಣಕಾಸು ಹಾಗೂ ಅನಿರ್ಬಂಧಿತ ಅನುದಾನ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಕುಡಿಯುವ ನೀರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾರ್ಯಕ್ರಮಗಳಿಗೆ ಮಾರ್ಗಸೂಚಿ ಪ್ರಕಾರ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾ ಪಂಚಾಯತಿ ಅನುಮೋದನೆ ಪಡೆದು ನಿಯಮಾನುಸಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಅನುದಾನ ವನ್ನು ವೆಚ್ಚ ಮಾಡಲಾಗಿದೆ.

| ಕ್ರ. ಸಂ. | ಕಾರ್ಯಕ್ರಮ | ಭೌತಿಕ | | ಆರ್ಥಿಕ (ರೂ.ಲಕ್ಷಗಳಲ್ಲಿ) | | ಷರಾ |
|---|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ | |
| 1 | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ | 15 ಲಕ್ಷ ಮಾನವ ದಿನಗಳು | 13.20ಲಕ್ಷ ಮಾನವ ದಿನಗಳು | 3105.60 | 2989.57 | |
| 2 | ಶೌಚಾಲಯ | | | 754.20 | 407.11 | |
| | ವೈಯಕ್ತಿಕ | 30000 | 13637 | | | |
| | ಅಂಗನವಾಡಿ | 40 | 40 | | | |
| | ಶಾಲಾ | 40 | 40 | | | |
| 3 | ವಿಶೇಷ ಘಟಕ ಯೋಜನೆ | 738 | 730 | 113.00 | 112.29 | |
| 4 | ಗಿರಿಜನ ಉಪಯೋಜನೆ | 269 | 265 | 60.00 | 59.79 | |
| 5 | ಮಹಿಳಾ ಕಾರ್ಯಕ್ರಮಗಳು | 80100 | 70965 | 1546.00 | 1061.43 | |
| 6 | ಅನಿರ್ಬಂಧಿತ ಅಭಿವೃದ್ಧಿ ಅನುದಾನ | 158 | 158 | 200.00 | 197.60 | |
| 7 | ಸುವರ್ಣ ಗ್ರಾಮೋದಯ | 88 | 47 | 2632.00 | 1807.68 | 41 ಪ್ರಗತಿ |
| 8 | 13ನೇ ಹಣಕಾಸು ಆಯೋಗ | 206 | 136 | 235.48 | 192.81 | |
| 9 | ಇತರೆ ಅಭಿವೃದ್ಧಿ ಕಾಮಗಾರಿಗಳು | 151 | 127 | 79.84 | 56.46 | |
| 10 | ಎನ್‌ಆರ್‌ಡಬ್ಲ್ಯೂಪಿ | 2200 | 1283 | 4948.74 | 3119.27 | |



ಮೂರು ಹಂತದ ಜಿಲ್ಲಾ ಪಂಚಾಯತಿ ಪದ್ಧತಿ ಅನುಷ್ಠಾನಕ್ಕೆ ಬಂದ ನಂತರ 4ನೇ ಅವಧಿಯ ಮೂರು ಹಂತದಲ್ಲೂ ಮಹಿಳೆಯರೇ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದು 2013-14ನೇ ಸಾಲಿನ ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಹಿರಿಯ ಸದಸ್ಯರಾಗಿದ್ದು ಇವರ ಅನುಭವ ಸಲಹೆ ಸೂಚನೆ ಜಿಲ್ಲೆಯ ಅಭಿವೃದ್ಧಿಗೆ ತುಂಬಾ ಸಹಕಾರಿಯಾಗಿರುತ್ತದೆ. ಅಲ್ಲದೇ ಜಿಲ್ಲಾ ಪಂಚಾಯತಿ ಸದಸ್ಯರು, ಶಾಸಕರು, ಸಂಸದರು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪಕ್ಷಭೇಧ ಮರೆತು ಒಂದಾಗಿ ಸಹಕರಿಸಿ ಪ್ರೋತ್ಸಾಹಿಸಿ ಈ ಜಿಲ್ಲೆಯನ್ನು ಮಾದರಿ ಜಿಲ್ಲೆಯಾಗಿ ಅಭಿವೃದ್ಧಿ ಹೊಂದಲು ಸಹಕರಿಸಿರುತ್ತಾರೆ.

ಈ ಎಲ್ಲಾ ಅಂಶಗಳ ಕುರಿತು ಮೌಲ್ಯಮಾಪನ ಮಾಡಿದ ಕೇಂದ್ರ ತಂಡವು ಜಿಲ್ಲಾ ಪಂಚಾಯಿತಿ ಆಡಳಿತ ಮತ್ತು ಅಭಿವೃದ್ಧಿ ಹಾಗೂ ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಯಲ್ಲಿ ಮಂಚೂಣಿಯಲ್ಲಿ ಇರುವುದನ್ನು ಪರಿಶೀಲಿಸಿ 2014-15ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ 'ಪಂಚಾಯತ್ ಸಶಸ್ತ್ರೀಕರಣ ಪುರಸ್ಕಾರ' ಪ್ರಶಸ್ತಿ ಲಭಿಸಿರುವುದು ಜಿಲ್ಲಾ ಪಂಚಾಯತಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗಿದೆ.

ಯಶೋಗಾಥೆ



ಅಪ್ಪಣ್ಣ ರು. ಹಿರೇಗೌಡರ್

# "ಯಲಿವಾಳ" ಆದರ್ಶ ಪಂಚಾಯಿತಿ

"ಒಂದು ರಾಷ್ಟ್ರದ ಯುವ ಶಕ್ತಿ ಆ ರಾಷ್ಟ್ರದ ನೈಜ ಹಾಗೂ ಸಂಪದ್ಭರಿತ ಶಕ್ತಿ" ಎಂಬುದನ್ನು ಸಾರ್ವಕಾಲಿಕ ಸತ್ಯ. ಆದರೆ ಆ ಯುವಶಕ್ತಿ ಕ್ರೀಯಾಶೀಲವಾಗಿದ್ದು ಅವಿರತ ಪರಿಶ್ರಮಿಗಳಾಗಬೇಕಾದದ್ದು ಅಷ್ಟೇ ಅನಿವಾರ್ಯ. ಭಾರತ ಬಹುಸಂಖ್ಯಾತ ಗ್ರಾಮಗಳಿಂದ ಕೂಡಿದ, ಕೃಷಿಯನ್ನೇ ಜೀವಾಳವಾಗಿಸಿಕೊಂಡ ದೇಶ, ಗ್ರಾಮಗಳು ಅಭಿವೃದ್ಧಿ ಸಾಧಿಸಿ ತನ್ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಬೇಕಾದದ್ದು ಇಂದಿನ ಅಗತ್ಯ. ಈ ಹಿನ್ನಲೆಯಲ್ಲಿ ಸ್ವಾತಂತ್ರ್ಯ ನಂತರ ದೇಶದ ಚುಕ್ಕಾಣಿ ಹಿಡಿದ ವಿವಿಧ ಸರ್ಕಾರಗಳು ಗ್ರಾಮ ವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅವರ ಬದುಕು ಹಸನಾಗಿಸಲು ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದವು. ಆದರೆ ಸ್ಥಳೀಯ ಆಡಳಿತದ ಇಚ್ಛಾಶಕ್ತಿಯ ಕೊರತೆಯಿಂದಾಗಿ ಸೂಕ್ತ ಸಂವಹನದ ಅಭಾವದಿಂದಾಗಿ ಈ ಎಲ್ಲ ಯೋಜನೆಗಳು ನಿರೀಕ್ಷಿತ ಯಶಸ್ಸು ಸಾಧಿಸದೆ ಇರುವುದು ವಿಷಾದನೀಯ ಸಂಗತಿ.

> ಗ್ರಾಮಗಳು ಅಭಿವೃದ್ಧಿ ಸಾಧಿಸಿ ತನ್ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಬೇಕಾದದ್ದು ಅವಶ್ಯಕವಾಗಿದೆ ಮತ್ತು ಗಾಂಧೀಜಿಯವರ ರಾಮರಾಜ್ಯ ಪರಿಕಲ್ಪನೆಗೆ ಯುವಜನತೆ ಭರವಸೆ ಮೂಡಿಸಬೇಕಾಗಿದೆ.



ಅನೇಕರ ಪರಿಶ್ರಮದ ಫಲದಿಂದ ಹಾಗೂ ಅವರ ನಿಶ್ವಾರ್ಥ ದೇಶ ಸೇವೆಯ ಫಲದಿಂದ ಇಂದು ಭಾರತಕ್ಕೆ ಸ್ವಾತಂತ್ರ ದೊರೆತಿದೆ. ಇಂತಹ ಪರಿಶ್ರಮಿಗಳ ಅಗತ್ಯ ಎದ್ದುಕಾಣುತ್ತಿದೆ. ಗಾಂಧೀಜಿಯವರ "ರಾಮರಾಜ್ಯ" "ಕಲ್ಯಾಣರಾಜ್ಯ"ಗಳ ಪರಿಕಲ್ಪನೆಗೆ ಈ ದೇಶದ ಯುವ ಜನತೆ ಭರವಸೆ ಮೂಡಿಸಬೇಕಾಗಿದೆ.

ಅಧ್ಯಕ್ಷರು, ಗ್ರಾಮ ಪಂಚಾಯತ್ ಯಲಿವಾಳ, ತಾಲ್ಲೂಕು, ಕುಂದಗೋಳ, ಜಿಲ್ಲೆ ಧಾರವಾಡ.
ಪಿನ್ 581207 ಮೊಬೈಲ್: 9845132353




ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಯಲಿವಾಳ ಗ್ರಾಮಪಂಚಾಯತಿ ಅನೇಕ ಪ್ರಗತಿಪರ ಕಾರ್ಯಕ್ರಮದ ಮೂಲಕ ಅನೇಕ ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಜನರಿಗೆ ಅತಿ ಮುಖ್ಯವಾದ ವಿದ್ಯುತ್, ರಸ್ತೆ, ನೀರು, ಗಾಟಾರ ನಿರ್ಮಾಣ ಮತ್ತು ಸರ್ಕಾರದ 15 ಅನುಷ್ಠಾನ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿ ಕಂಡ ಗ್ರಾಮ ಪಂಚಾಯತಿಯಾಗಿದೆ.

## ಕುಡಿಯು ನೀರಿನ ವ್ಯವಸ್ಥೆ :

ಜನತೆಗೆ ನಿರಂತರ ಶುದ್ಧ ಕುಡಿಯುವ ಸಿಹಿ ನೀರು ಪೂರೈಕೆ ಘಟಕ ಸ್ಥಾಪಿಸಿ ಜನರಿಗೆ ಸಿಹಿ ನೀರು ಕೊಟ್ಟು ಜನರ ಪ್ರೀತಿಗೆ ಪಾತ್ರವಾಗಿದೆ. ಕೆಲವು ಕಡೆ ಶುದ್ಧ ನೀರು ಘಟಕವು ಉದ್ಘಾಟನೆಯಾದ ನಂತರ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಹಾಳಾದ ಸ್ಥಿತಿಯಲ್ಲಿವೆ. ಆದರೆ ಯಲಿವಾಳ ಗ್ರಾಮದ ಶುದ್ಧ ನೀರು ಘಟಕವು ನಿರಂತರ ಸಿಹಿ ನೀರು ಒದಗಿಸುವ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ.

## ಶೌಚಾಲಯ ವ್ಯವಸ್ಥೆ :

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಯಲು ಶೌಚಾಲಯ ಮುಕ್ತ ಗ್ರಾಮವನ್ನಾಗಿಸುವ ಉದ್ದೇಶವನ್ನಿಟ್ಟುಕೊಂಡು ಹಲವಾರು ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಿ ಎಲ್ಲರೂ ಶೌಚಾಲಯ ನಿರ್ಮಿಸಿಕೊಳ್ಳಲು ಪಂಚಾಯತಿ ಅವಕಾಶ ಮಾಡಿಕೊಟ್ಟು ಗ್ರಾಮವನ್ನು ಬಯಲು ಮುಕ್ತ ಶೌಚಾಲಯ ಕಾರ್ಯದಲ್ಲಿ ಹೆಚ್ಚು ಯಶಸ್ಸು ಕಂಡಿದೆ. ಈ ಕಾರ್ಯದಲ್ಲಿ ಗ್ರಾಮದ ಶ್ರೀ ಶಿವಶಕ್ತಿ ಯುವಕ ಮಂಡಳದ ಸದಸ್ಯರು ಗ್ರಾಮದ ಜನತೆಗೆ ಶೌಚಾಲಯದ ಮಹತ್ವ ತಿಳಿಸಿ ಪಂಚಾಯತಿಯಿಂದ ದೊರೆಯುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಜನರಿಗೆ ತಿಳುವಳಿಕೆ ನಿಡುವಲ್ಲಿ ಶ್ರಮಿಸಿದ್ದಾರೆ.

## ರಸ್ತೆ-ಕಾಂಕ್ರೀಟ್ ಗಟಾರು :

ಗ್ರಾಮದ ಎಲ್ಲ ಓಣಿಗಳಲ್ಲಿನ ರಸ್ತೆಗಳನ್ನು ಸುಧಾರಿಸಿ ಬಹುಭಾಗ ಕಾಂಕ್ರಿಟ್ ರಸ್ತೆ ನಿರ್ಮಾಣ ಮಾಡಲಾಗಿದೆ. ಅದರ ಜೊತೆಗೆ ಪಕ್ಕಾ ಗಟಾರು,

ಚರಂಡಿ, ಸರ್ಕಾರಿ ಶಾಲೆಗೆ ಆಟದ ಮೈದಾನ, ನಮ್ಮ ಹೊಲ ನಮ್ಮ ರಸ್ತೆ ಯೋಜನೆಯಲ್ಲಿ ರೈತರು ಸುಲಭವಾಗಿ ತಮ್ಮ ಹೊಲಗಳಿಗೆ ಹೋಗಲು ಕಚ್ಚಾರಸ್ತೆ ನಿರ್ಮಿಸಿದೆ. ಗ್ರಾಮದಲ್ಲಿ ಸರ್ಕಾರಿ ಸ್ಮಶಾನ ಭೂಮಿಯನ್ನು ಸಮತಟ್ಟಾಗಿ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟಿದೆ, ರೈತರಿಗೆ ದನದ ಕೊಟ್ಟಿಗೆ ಕಟ್ಟಿಕೊಳ್ಳಲು ಸರ್ಕಾರದ ಸಹಾಯಧನ ಮಂಜೂರು ಮಾಡಲು ಶ್ರಮಿಸಿದೆ,

**ಯುವಜನತೆಗೆ ಅನುಕೂಲತೆಗಳು :**

ಗ್ರಾಮದ ಅಭಿವೃದ್ಧಿಯೊಂದಿಗೆ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ರಕ್ತದಾನ ಶಿಬಿರ, ಉಚಿತ ದಂತ ತಪಾಸಣೆ, ಕಣ್ಣಿನ ತಪಾಸಣೆ ಮತ್ತು ಚಿಕಿತ್ಸೆ ಮಾಡಿಸಲಾಗಿದೆ. ನಿರುದ್ಯೋಗಿ ಯುವಕ ಯುವತಿಯರನ್ನು ಗುರುತಿಸಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿ ಸ್ವಯಂ ಉದ್ಯೋಗ ಹೊಂದಲು ಅನುಕೂಲ ಮಾಡಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯುವತಿಯರಿಗೆ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರವನ್ನು ನೀಡಿ ಸ್ವಯಂ ಉದ್ಯೋಗ ಮಾಡಲು, ಹಾಗೂ ಅಂಗವಿಕಲ ಫಲಾನುಭವಿಗಳಿಗೆ ತ್ರಿಚಕ್ರ ಸೈಕಲ್ ವಿತರಣೆ ಮಾಡಿ ಅವರ ಬದುಕು ಹಸನಾಗಲು ಶ್ರಮಿಸಿದೆ. ರಾಜೀವಗಾಂಧಿ ನಿರ್ಮಾಣ ಕೇಂದ್ರದ ಕಟ್ಟಡ ಪ್ರಗತಿಯಲ್ಲಿದೆ.

**ಗ್ರಾಮ ಪಂಚಾಯತಿಯಲ್ಲಿ ವಿನೂತನ ವ್ಯವಸ್ಥೆಗಳು :**

ತಾಲ್ಲೂಕಿನಲ್ಲಿ ಪ್ರಥಮ ಭಾರಿಗೆ ಗ್ರಾಮ ಪಂಚಾಯತಿಗೆ ಸಿ.ಸಿ. ಕ್ಯಾಮರಾ ಅಳವಡಿಸಿ ಪ್ರಥಮವೆನಿಸಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳು ಗ್ರಾಮ ಪಂಚಾಯತಿ ಸಾಮಾನ್ಯ ಸಭೆ/ ಗ್ರಾಮ ಸಭೆಯನ್ನು



ವೀಕ್ಷಣೆ ಮಾಡಲು ನೇರ ದೂರಸಂಪರ್ಕ (ಟಿ.ವಿ.) ವ್ಯವಸ್ಥೆ ಮಾಡಿ ಸಾರ್ವಜನಿಕರು ತಮ್ಮ ಮನೆಯಲ್ಲೇ ಕುಳಿತುಕೊಂಡು ಕಾರ್ಯಕ್ರಮ ವೀಕ್ಷಿಸಲು ಕ್ರಮ ಕೈಗೊಳ್ಳಲು ಮುಂದಾಗಿದೆ.

ಕುಂದಗೋಳ ತಾಲ್ಲೂಕಿನ ಈ ಯಲಿವಾಳ ಗ್ರಾಮ ಪಂಚಾಯತಿಗೆ ಸನ್ 2012–13ನೇ ಸಾಲಿನಲ್ಲಿ ಘನ ಸರ್ಕಾರವು ನಿರ್ಮಲ ಗ್ರಾಮ ಪುರಸ್ಕಾರ ನೀಡಿ ಗೌರವಿಸಿದೆ. ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಂಡು ಬಂದಿದ್ದಕ್ಕಾಗಿ ಸರ್ಕಾರವು ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ನೀಡಿ ಗೌರವಿಸಿದೆ.

ನವದೆಹಲಿಯ ಯುವಜನ ಸೇವೆ ಕ್ರೀಡಾ ಸಚಿವಾಲಯವು ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ರಾಷ್ಟ್ರೀಯ ಯುವ ಪುರಸ್ಕಾರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ರಾಜ್ಯದಲ್ಲಿ ಮಾದರಿ ಗ್ರಾಮ ಆಗಲು ಇಲ್ಲಿಯ ಸರ್ವ ಸದಸ್ಯರು, ಸಾರ್ವಜನಿಕರ ಸಹಕಾರ, ಗುರು–ಹಿರಿಯರು ಹಾಗೂ ಮೇಲಾಧಿಕಾರಿಗಳ ಮಾರ್ಗದರ್ಶನದಿಂದ ಮಾತ್ರ ಸಾಧ್ಯವಾಗುತ್ತದೆ.

## ಕವಿಯ(ಕ್ಷ) ಪ್ರಶ್ನೆ?

# ನಮ್ಮಗಳ ಹಿತಕ್ಕಾಗಿ ಪರಿಸರ ಹಾಳುಮಾಡುವುದು ಎಷ್ಟು ಸರಿ?

ಪ್ರತಿ ವರ್ಷ ಪರಿಸರ ದಿನವನ್ನು ಆಚರಿಸುತ್ತೇವೆ. ಮನುಷ್ಯ ಸಕಲ ಜೀವಸಂಕುಲದ ಅತ್ಯಂತ ಬುದ್ಧಿ ಜೀವಿ. ಮನುಷ್ಯ ಪ್ರತಿಯೊಂದು ಕ್ಷೇತ್ರದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಸಾಧನೆ ಮಾಡುತ್ತಲೇ ಬರುತ್ತಿದ್ದಾನೆ. ಹೊಸತನವನ್ನು ಸೃಷ್ಟಿಸುತ್ತಾ ಬರುತ್ತಿದ್ದಾನೆ. ಈ ಎಲ್ಲಾ ಪ್ರಯೋಗಗಳು / ಪ್ರಯತ್ನಗಳ ಹಿಂದೆ ನಮ್ಮ ಪರಿಸರ ಎಷ್ಟು ಹಾಳಾಗುತ್ತಿದೆ ಎಂಬುದು ನಮ್ಮ ಅರಿವಿಗೆ ಬಂದರೂ, ಅದನ್ನು ಲೆಕ್ಕಿಸದೇ ಮುಂದೆ ಸಾಗುತ್ತಲೇ ಇದ್ದೇವೆ.

ಬೆಂಗಳೂರನ್ನು ಗ್ರೀನ್ ಸಿಟಿ ಎಂದೆಲ್ಲಾ ವರ್ಣಿಸುತ್ತಿದ್ದೆವು. ಈಗ ಬೆಂಗಳೂರು ಮಾಲಿನ್ಯದ ಸಿಟಿಯಾಗಿ ಬದಲಾಗುತ್ತಿದೆ. ಕಾಮಗಾರಿಗಳಿಗಾಗಿ ಮರ ಕಡಿಯುವುದು, ಬೋರ್‌ವೆಲ್‌ಗಳ ಕೊರೆತ ಹೀಗೆ ಹಲವಾರು ರೀತಿಯಲ್ಲಿ ಪರಿಸರವನ್ನು ಹಾಳುಮಾಡುತ್ತಲೇ ಇದ್ದೇವೆ. ಹೀಗೆ ಮುಂದುವರೆದರೆ ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಗಾಳಿ, ನೀರು, ಆಹಾರಕ್ಕಾಗಿ ಪರದಾಡುವ ಸಂದರ್ಭವನ್ನು ನಾವು ತಂದೊಡ್ಡುವುದು ಖಂಡಿತ.



### ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ಪ್ರತಿಯೊಬ್ಬರು ತಮ್ಮ ಮನೆ ಮುಂದೆ ಮರಗಳನ್ನು ನೆಟ್ಟು, ಪೋಷಿಸುವ ಕಾರ್ಯ ಏಕೆ ಮಾಡಬಾರದು?
2. ಎಲ್ಲದಕ್ಕೂ ಪರಿಸರವನ್ನೇ ಅವಲಂಬಿಸಿರುವ ನಾವು, ಪರಿಸರವನ್ನು ಸ್ವಚ್ಛವಾಗಿಡುವ ಕಾರ್ಯ ನಮ್ಮದಲ್ಲವೇ?
3. ಮನೆಯ ಪ್ರತಿಯೊಬ್ಬರು ಪ್ರಯಾಣಕ್ಕಾಗಿ ಪ್ರತ್ಯೇಕ ವಾಹನವನ್ನು ಬಳಸುವ ಬದಲು, ಸರ್ಕಾರಿ ಬಸ್ಸುಗಳಲ್ಲಿ ಓಡಾಡಬಹುದಲ್ಲವೇ? (ಪ್ರವಾಸಕ್ಕೆ ಸ್ವಂತ ಕಾರುಗಳನ್ನು ಉಪಯೋಗಿಸಿ, ಉಳಿದ ಸಮಯದಲ್ಲಿ ಸಾರ್ವಜನಿಕ ವಾಹನ ಬಳಸುವುದರಿಂದ ವಾಹನ ದಟ್ಟಣೆ, ವಾಯು ಮಾಲಿನ್ಯ ತಡೆಗಟ್ಟಬಹುದು)
4. ಕೈಗಾರಿಕೆಗಳಿಂದ ಹರಿದು ಬರುವ ತ್ಯಾಜ್ಯ ನೀರನ್ನು ನದಿ / ಕೆರೆಗೆ ನೇರವಾಗಿ ಬಿಡುವ ಬದಲು ಅದನ್ನು ಸಂಸ್ಕರಿಸಿ ಬಿಡಬಹುದಲ್ಲವೇ?
5. ಮನೆಯ ಅಂಗಳ ಮತ್ತು ತಾರಸಿಯಲ್ಲಿ ನಿತ್ಯ ಉಪಯೋಗಿ ತರಕಾರಿಗಳನ್ನು ಬೆಳೆಸಿ ಏಕೆ ಉಪಯೋಗಿಸಬಾರದು?

**ಎಂ. ಗೀತಾ**
ಮನೆ ನಂ. 413, ಪಿಡಬ್ಲೂಡಿ ಕ್ವಾಟ್ರಸ್, 14ನೇ ಬಿ ಅಡ್ಡರಸ್ತೆ,
ಯಲಹಂಕ ನ್ಯೂಟೌನ್, ಬೆಂಗಳೂರು 560006.

ಕಾವ್ಯ ವಿಕಾಸ

# ಆದರ್ಶ ಗ್ರಾಮವ ಕಟ್ಟೋಣ ಬನ್ನಿ



ಕೊದ್ದಡ್ಡಿ ಮಹೇಶ್

ನಾವೆಲ್ಲರು ಒಂದಾಗಿ ದುಡಿಯೋಣ ಬನ್ನಿ
ಗಾಂಧೀಜಿ ಕನಸನ್ನು ನನಸಾಗಿ ಮಾಡುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಅಗತ್ಯಕ್ಕೆ ತಕ್ಕಂತೆ ಗ್ರಾಮಸಭೆಯ ಮಾಡುತ್ತ
ಜನಸೇವೆಯಲ್ಲಿ ದೇವರನ್ನು ಕಾಣುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಸೂರಿಲ್ಲದವರಿಗೆ ಸೂರನ್ನು ಕಲ್ಪಿಸುತ
ಗುಡಿಸಲು ಮುಕ್ತ ಗ್ರಾಮವನ್ನು ಮಾಡುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಶೌಚವಿಲ್ಲದ ಮನೆಗೆ ಶೌಚಾಲಯವ ಕಟ್ಟಿಸುತ
ಬಹಿರ್ದೆಶೆ ಮುಕ್ತ ಗ್ರಾಮವಾಗಿ ಮಾಡುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಸಂಪೂರ್ಣ ಸ್ವಚ್ಚತೆಗೆ ಆಧ್ಯತೆಯ ನೀಡುತ್ತ
ರೋಗರುಜಿನುಗಳನ್ನ ತಡೆಯುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಬಡಮಕ್ಕಳ ಶಿಕ್ಷಣಕ್ಕೆ ನೆರವು ನೀಡುತ್ತ
ದೇಶದ ಸತ್ಪ್ರಜೆಯಾಗಿ ಮಾಡುತ್ತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

ಸಾರ್ವಜನಿಕರ ಕುಂದುಕೊರತೆಯನ್ನಿವಾರಿಸುತ್ತ
ಭ್ರಷ್ಟಮುಕ್ತ ಸಮಾಜವ ನಿರ್ಮಿಸುತ ನಾವು
ಆದರ್ಶ ಗ್ರಾಮವ ಕಟ್ಟೋಣ ಬನ್ನಿ ॥

SDAA, ನಕ್ಕಲಹಳ್ಳಿ ಗ್ರಾಮ ಪಂಚಾಯಿತಿ, ತಾ: ಗೌರಿಬಿದನೂರು ಜಿ: ಚಿಕ್ಕಬಳ್ಳಾಪುರ

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 29-06-2015 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011–12 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2012–13 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2013–14 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 207 | 100 | 68 | 83 | 38 | 97 | 36 | 0 | 60 | 1 |
| ದಕ್ಷಿಣ ಕನ್ನಡ | 203 | 100 | 100 | 92 | 19 | 75 | 36 | 0 | 60 | 2 |
| ಉಡುಪಿ | 146 | 99 | 71 | 59 | 29 | 61 | 65 | 0 | 54 | 3 |
| ಬೆಂಗಳೂರು (ಗ್ರಾ | 98 | 100 | 98 | 16 | 69 | 68 | 32 | 0 | 54 | 4 |
| ಬಾಗಲಕೋಟೆ | 161 | 100 | 74 | 6 | 72 | 97 | 21 | 0 | 52 | 5 |
| ಕೊಡಗು | 98 | 100 | 100 | 51 | 4 | 78 | 34 | 0 | 52 | 6 |
| ತುಮಕೂರು | 321 | 100 | 92 | 1 | 70 | 71 | 10 | 0 | 49 | 7 |
| ಚಿತ್ರದುರ್ಗ | 185 | 100 | 81 | 0 | 70 | 80 | 8 | 0 | 48 | 8 |
| ಚಿಕ್ಕಮಗಳೂರು | 226 | 100 | 100 | 23 | 18 | 59 | 31 | 0 | 47 | 9 |
| ಮಂಡ್ಯ | 232 | 100 | 40 | 1 | 59 | 95 | 36 | 0 | 47 | 10 |
| ಹಾವೇರಿ | 208 | 100 | 68 | 0 | 63 | 83 | 11 | 0 | 46 | 11 |
| ಹಾಸನ | 258 | 100 | 88 | 7 | 51 | 63 | 18 | 0 | 46 | 12 |
| ಮೈಸೂರ್ | 235 | 100 | 47 | 0 | 69 | 89 | 12 | 0 | 45 | 13 |
| ರಾಮನಗರ | 130 | 100 | 16 | 1 | 87 | 96 | 16 | 0 | 45 | 14 |
| ದಾವಣಗೆರೆ | 230 | 100 | 44 | 1 | 59 | 96 | 13 | 0 | 44 | 15 |
| ಧಾರವಾಡ | 127 | 100 | 16 | 4 | 72 | 99 | 18 | 0 | 44 | 16 |
| ಕೋಲಾರ | 156 | 100 | 0 | 0 | 100 | 92 | 14 | 0 | 43 | 17 |
| ಚಿಕ್ಕಬಳ್ಳಾಪುರ | 151 | 100 | 15 | 3 | 78 | 91 | 7 | 0 | 42 | 18 |
| ಗದಗ | 106 | 100 | 4 | 0 | 74 | 92 | 13 | 0 | 40 | 19 |
| ಬೀದರ್ | 175 | 100 | 25 | 0 | 74 | 79 | 3 | 0 | 40 | 20 |
| ಶಿವಮೊಗ್ಗ | 260 | 100 | 21 | 22 | 35 | 88 | 14 | 0 | 40 | 21 |
| ವಿಜಯಪುರ | 199 | 100 | 65 | 1 | 52 | 52 | 8 | 0 | 39 | 22 |
| ಚಾಮರಾಜನಗರ | 120 | 100 | 10 | 0 | 48 | 81 | 13 | 0 | 36 | 23 |
| ಬೆಂಗಳೂರು (ನ) | 86 | 100 | 18 | 38 | 60 | 17 | 13 | 0 | 35 | 24 |
| ಬಳ್ಳಾರಿ | 189 | 100 | 46 | 2 | 12 | 56 | 21 | 0 | 33 | 25 |
| ಕೊಪ್ಪಳ | 134 | 100 | 25 | 3 | 23 | 64 | 4 | 0 | 31 | 26 |
| ಬೆಳಗಾವಿ | 486 | 100 | 23 | 0 | 25 | 59 | 5 | 0 | 30 | 27 |
| ರಾಯಚೂರು | 165 | 100 | 15 | 2 | 43 | 48 | 0 | 0 | 29 | 28 |
| ಕಲಬುರಗಿ | 220 | 100 | 13 | 0 | 37 | 51 | 0 | 0 | 28 | 29 |
| ಯಾದಗಿರಿ | 117 | 100 | 16 | 9 | 0 | 30 | 0 | 0 | 22 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಜೂನ್ 2015)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಟ್ಟು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಟ್ಟು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಬೆಂಗಳೂರು (ಗ್ರಾ) | 5720 | 5709 | 0.7 | 5 | 635 | 2 | 1 |
| ಬಾಗಲಕೋಟೆ | 7826 | 7674 | 0.2 | 2 | 434 | 4 | 2 |
| ಕೋಲಾರ | 25379 | 25168 | 1.5 | 10 | 1691 | 1 | 3 |
| ಚಿಕ್ಕಬಳ್ಳಾಪುರ | 7345 | 7423 | 1.6 | 11 | 612 | 3 | 4 |
| ಶಿವಮೊಗ್ಗ | 2964 | 2935 | 0.2 | 2 | 174 | 10 | 5 |
| ತುಮಕೂರು | 11075 | 10763 | 2.3 | 14 | 425 | 5 | 6 |
| ಉಡುಪಿ | 1914 | 1761 | 1.2 | 6 | 174 | 10 | 7 |
| ಚಿಕ್ಕಮಗಳೂರು | 3184 | 2927 | 2.7 | 16 | 289 | 7 | 8 |
| ರಾಯಚೂರು | 6337 | 6546 | 6.1 | 22 | 333 | 6 | 9 |
| ಹಾವೇರಿ | 2499 | 2469 | 1.7 | 12 | 166 | 12 | 10 |
| ಉತ್ತರ ಕನ್ನಡ | 1288 | 1351 | 0 | 1 | 92 | 17 | 11 |
| ರಾಮನಗರ | 2077 | 2093 | 3.5 | 20 | 207 | 9 | 12 |
| ವಿಜಯಪುರ | 4849 | 4750 | 6.4 | 24 | 230 | 8 | 13 |
| ಚಾಮರಾಜನಗರ | 1340 | 1228 | 2.9 | 17 | 134 | 14 | 14 |
| ಚಿತ್ರದುರ್ಗ | 2177 | 2313 | 5.1 | 21 | 136 | 13 | 15 |
| ಗದಗ | 1307 | 1338 | 3.1 | 18 | 130 | 15 | 16 |
| ಮಂಡ್ಯ | 1173 | 1106 | 1.2 | 6 | 65 | 21 | 17 |
| ಕೊಪ್ಪಳ | 1503 | 1577 | 3.4 | 19 | 115 | 16 | 18 |
| ಬೆಳಗಾವಿ | 1991 | 1843 | 0.5 | 4 | 42 | 24 | 19 |
| ಕೊಡಗು | 365 | 383 | 2.6 | 15 | 73 | 20 | 20 |
| ಮೈಸೂರ್ | 1290 | 1293 | 1.4 | 9 | 44 | 23 | 21 |
| ಬೀದರ್ | 1365 | 1388 | 6.3 | 23 | 80 | 18 | 22 |
| ದಾವಣಗೆರೆ | 569 | 518 | 1.2 | 6 | 29 | 26 | 23 |
| ಹಾಸನ | 1329 | 1273 | 12.3 | 29 | 78 | 19 | 24 |
| ದಕ್ಷಿಣ ಕನ್ನಡ | 917 | 930 | 7.7 | 25 | 45 | 22 | 25 |
| ಧಾರವಾಡ | 140 | 142 | 2.1 | 13 | 7 | 29 | 26 |
| ಬೆಂಗಳೂರು (ನ) | 2853 | 3015 | 10.1 | 28 | 30 | 25 | 27 |
| ಬಳ್ಳಾರಿ | 457 | 433 | 9.2 | 26 | 18 | 27 | 28 |
| ಕಲಬುರಗಿ | 294 | 285 | 9.5 | 27 | 11 | 28 | 29 |
| ಯಾದಗಿರಿ | 43 | 59 | 23.7 | 30 | 3 | 30 | 30 |

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ: 716 :ಉಖಾಯೋ 2015

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿಕಟ್ಟಡ,
ಬೆಂಗಳೂರು-1. ದೂ. 080-22372738
E-mail: nregs-ka@nic.in
ದಿನಾಂಕ: 30-06-2015

**ರವರಿಗೆ,**
ನಿರ್ದೇಶಕರು,
ತೋಟಗಾರಿಕೆ ಇಲಾಖೆ
ಲಾಲ್‌ಬಾಗ್ ಬೆಂಗಳೂರು.

ಮಾನ್ಯರೇ,

ವಿಷಯ: 2015-16ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತೋಟಗಾರಿಕೆ ಇಲಾಖೆಯ ಒಗ್ಗೂಡಿಸುವಿಕೆ ಯೋಜನೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2012 ಬೆಂಗಳೂರು, ದಿನಾಂಕ:23.10.2013
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2012 ಬೆಂಗಳೂರು, ದಿನಾಂಕ:02.09.2014
3. ತಮ್ಮ ಕಛೇರಿ ಪತ್ರ ಸಂಖ್ಯೆ: ತೋಇ ಯೋ ಸತೋಅ 5/12015-16 ದಿನಾಂಕ;25.05.2015
4. ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ರವರ ಪತ್ರ ಸಂಖ್ಯೆ: ತೋಇ 32 ತೋಯೋಕಾ 2015 ದಿನಾಂಕ: 24.06.2015

************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಆದೇಶದ ಪ್ರಕಾರ ತಮ್ಮ ಇಲಾಖೆಯನ್ನು ಅನುಷ್ಠಾನ ಇಲಾಖೆಯನ್ನಾಗಿ ನೇಮಕ ಮಾಡಲಾಗಿದೆ ಹಾಗೂ ಉಲ್ಲೇಖ (2) ರಂತೆ ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳಿಗೆ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯನ್ನಾಗಿ ಘೋಷಿಸಲಾಗಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯ ಒಗ್ಗೂಡಿಸುವಿಕೆ ಯೋಜನೆಯನ್ನು ಉಲ್ಲೇಖ (3)ರ ಪತ್ರದ ತಮ್ಮ ಪ್ರಸ್ತಾವನೆಯನ್ನು ಉಲ್ಲೇಖ (4)ರ ಪತ್ರದಲ್ಲಿ ಅನುಮೋದನೆಗಾಗಿ ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ತಮ್ಮ ಇಲಾಖೆಯ ಒಗ್ಗೂಡಿಸುವಿಕೆ ಯೋಜನೆಯನ್ನು ಪರಿಶೀಲಿಸಿ, ಅನುಮೋದಿಸಿದೆ (ಪ್ರತಿ ಅನುಭಂದಿಸಿದೆ). ಈ ಯೋಜನೆಯನ್ವಯ ಪ್ರತಿಯೊಂದು ಕಾಮಗಾರಿಗಳನ್ನು (ಫಲಾನುಭವಿ ಹಾಗೂ ಸ್ಥಳವಾರು) ಗುರುತಿಸಿ, ಯೋಜನೆಯ ನಿಯಮಾನುಸಾರ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು. ವೈಯಕ್ತಿಕ ಫಲಾನುಭವಿಗಳ ಆಯ್ಕೆ ಮತ್ತು ಕಾಮಗಾರಿ ಅನುಷ್ಠಾನದ ವಿಧಿ ವಿಧಾನಗಳ ಕುರಿತಂತೆ, ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ದಿ ಮಂತ್ರಾಲಯವು ಹೊರಡಿಸಿರುವ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳು-2013, 4ನೇ ಆವೃತ್ತಿ ಮತ್ತು ಉಲ್ಲೇಖ (1) ಮತ್ತು (2) ರ ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶಗಳಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಕೋರಿದೆ.

**ಷರತ್ತುಗಳು:**

1. ವ್ಯಕ್ತಿಗತ ಕಾಮಗಾರಿ ಕುರಿತಂತೆ ಈ ಯೋಜನೆಯ ಕುರಿತು ಕೇಂದ್ರ ಸರ್ಕಾರ ನೀಡಿದ ಅನುಸೂಚಿ-1ರ ಕಂಡಿಕೆ 5ರಲ್ಲಿನ ಅರ್ಹ ಫಲಾನುಭವಿ ಅವರಿಗೆ ಮಾತ್ರ ಮಂಜೂರು ಮಾಡಬಹುದು. ಪ್ರಥಮ ಆಧ್ಯತೆ ಪರಿಶಿಷ್ಟ ಜಾತಿ/ಪಂಗಡ ರವರಿಗೆ ನೀಡಬಹುದು, ನಂತರ ಉಳಿದ ಫಲಾನುಭವಿಗಳಿಗೆ ಆಧ್ಯತೆ ನೀಡಬಹುದು.

2. ವ್ಯಕ್ತಿಗತ ಫಲಾನುಭವಿ ಕಾಮಗಾರಿಗಳಲ್ಲಿ ಸಂಬಂಧಪಟ್ಟ ಫಲಾನುಭವಿ ಅವರ ಜಮೀನಿನಲ್ಲಿ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು.ಇದಕ್ಕಾಗಿ ಅವರ ಅರ್ಜಿಯನ್ನು ಕೂಲಿ ಬೇಡಿಕೆಯನ್ನಾಗಿ ಪರಿಗಣಿಸುವುದು.

3. ಇಲಾಖಾ ಲಾಗಿನ್‌ನಿಂದ ಅನುಷ್ಠಾನ ಮಾಡಿದ ಕಾಮಗಾರಿಗಳಿಗೆ, ಜಿಲ್ಲಾ ಮಟ್ಟದಲ್ಲಿ ಕೂಲಿ ಹಾಗೂ ಸಾಮಗ್ರಿ ಅನುಪಾತವನ್ನು ಶೇಕಡ 60:40ಕ್ಕೆ ಕಾಪಾಡಿಕೊಳ್ಳಬೇಕಾಗುತ್ತದೆ.

4. ಪ್ರತಿಯೊಂದು ಕಾಮಗಾರಿಗಳ ಅನುಷ್ಠಾನದ ಮೂರು ಹಂತಗಳ ಛಾಯಾ ಚಿತ್ರಗಳನ್ನು, ದಿನಾಂಕ ಹಾಗೂ ಲ್ಯಾಟ್‌ಲಾಂಗ್ (GPS reading) ನೊಂದಿಗೆ ನಿರ್ವಹಿಸಬೇಕು ಮತ್ತು ನರೇಗಾ soft ತಂತ್ರಾಂಶದಲ್ಲಿ ಆರೋಹಿಸುವುದು ಹಾಗೂ ಕಾಮಗಾರಿ ಸ್ಥಳದಲ್ಲಿ ಕಡ್ಡಾಯವಾಗಿ ನಾಮಫಲಕ ಅಳವಡಿಸುವುದು. ನಾಮಫಲಕ ವೆಚ್ಚ ಶೇ.40 ರಷ್ಟು ಸಾಮಗ್ರಿ ವೆಚ್ಚದಲ್ಲಿ ಅಳವಡಿಸುವುದು.

5. 2014–15ನೇ ಸಾಲಿನಲ್ಲಿ ಅನುಮೋದನೆ ಆಗಿರುವ ಕಾಮಗಾರಿಗಳನ್ನು ಮೊದಲನೇ ಆದ್ಯತೆ ಮೇರೆಗೆ ಅನುಷ್ಠಾನ ಮಾಡಲು ಕೋರಲಾಗಿದೆ. 2015–16 ನೇ ಸಾಲಿನ ಕೂಲಿ ಅಯವ್ಯಯಗಾಗಿ ಮಂಜೂರಾದ ಕಾಮಗಾರಿಗಳ ಹಾಗೂ ಫಲಾನುಭವಿಗಳ ಪಟ್ಟಿ ಪಡೆದು, ಫಲಾನುಭವಿಗಳ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ತಮ್ಮ ಇಲಾಖೆಯ ಲಾಗಿನ್‌ನಿಂದ ಅಥವಾ ಗ್ರಾಮ ಪಂಚಾಯಿತಿ ಲಾಗಿನ್‌ನಿಂದ ಅನುಷ್ಠಾನಗೊಳಿಸಬಹುದು.

   ತಮ್ಮ ಇಲಾಖೆಯಿಂದ ಆಯ್ಕೆಯಾದ ಹೊಸ ಕಾಮಗಾರಿಗಳನ್ನು end 2 end ನರೇಗಾ soft ನಲ್ಲಿ ದಾಖಲಿಸಿ, ಗ್ರಾಮ ಸಭೆಯಿಂದ ಅನುಮೋದನೆ ಆದ ನಂತರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.

6. ಕಾಮಗಾರಿಗಳು ಗ್ರಾಮ ಸಭೆ ಅನುಮೋದನೆ ಹಾಗೂ ಕ್ರಿಯಾ ಯೋಜನೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯಾದ ನಂತರ ಸಂಬಂಧಪಟ್ಟ ವ್ಯಕ್ತಿಗತ ಫಲಾನುಭವಿಗಳಿಂದ ಅರ್ಜಿ ಪಡೆದು, ಅವರ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

7. ಈ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಆಯುಕ್ತಾಲಯದಿಂದ ಮಂಜೂರಾದ ಮಾದರಿ ಅಂದಾಜು ಪತ್ರಿಕೆಯಂತೆ ಅನುಷ್ಠಾನಗೊಳಿಸುವುದು.

8. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ಥಾಪಿತವಾಗಿರುವ ತೋಟಕ್ಕೆ ಮಾತ್ರ 2 ಹಾಗೂ 3ನೇ ವರ್ಷ ತೋಟ ನಿರ್ವಹಣೆ ಮಾಡಬಹುದಾಗಿದೆ, ಎಂಬುದರ ಬಗ್ಗೆ ಅನುಷ್ಠಾನ ಅಧಿಕಾರಿಗಳು ಖಚಿತಪಡಿಸಿಕೊಳ್ಳುವುದು.

9. ಅನುಷ್ಠಾನ ಅಧಿಕಾರಿಗಳು ಒಬ್ಬ ಫಲಾನುಭವಿಗೆ ಒಂದು ಹೆಕ್ಟೇರ್‌ಗಿಂತ ಹೆಚ್ಚು ಸಹಾಯಧನ ಸೌಲಭ್ಯಕ್ಕೆ ಅವಕಾಶ ಕೊಡುವ ಮೊದಲು ಬೇರೆ ಯಾವ ಅರ್ಹ ಫಲಾನುಭವಿಯು ಈ ಸೌಲಭ್ಯದಿಂದ ವಂಚಿತರಾಗಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಒಬ್ಬ ಫಲಾನುಭವಿಗೆ ಹೆಚ್ಚು ಸಹಾಯಧನ ಕೊಡುವ ಬದಲಾಗಿ, ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ಈ ಸೌಲಭ್ಯ ಕಲ್ಪಿಸಿಕೊಡಲು ಅನುವು ಮಾಡಿಕೊಡುವುದು ಸೂಕ್ತ. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಕ್ಕೆ ಆದ್ಯತೆ ನೀಡುವುದು.

10. ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಲಾಗಿನ್ನಿಂದ ಕೂಲಿ ಬೇಡಿಕೆ ಪಡೆಯುವುದು, ಕಾಮಗಾರಿಗಳ ಹಂಚಿಕೆ ಮಾಡುವುದು ಹಾಗೂ ಎನ್.ಎಂ.ಆರ್ ಸೃಜಿಸಲು ನರೇಗಾ ಸಾಫ್ಟ್‌ನಲ್ಲಿ ಈಗಾಗಲೇ ಅವಕಾಶ ನೀಡಿರುವುದರಿಂದ, ಕೂಲಿ ಕಾರ್ಮಿಕರನ್ನು ಸಂಘಟಿಸಿ, ಅವರಿಂದ ಕೂಲಿ ಬೇಡಿಕೆಯನ್ನು ಪಡೆದು, ತಮ್ಮ ಇಲಾಖಾ ಲಾಗಿನ್‌ನಿಂದ ಎನ್.ಎಂ.ಆರ್ ಗಳನ್ನು ಸೃಜಿಸಿ, ಕಾಮಗಾರಿಗಳನ್ನು ನಿರ್ವಹಿಸಲು ಇಲಾಖಾ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

11. ಕಾಮಗಾರಿಗಳ ಚಾಲನೆ ಅಧಿಕಾರ ಹಾಗೂ ಅಂದಾಜು ಪತ್ರಿಕೆಗಳ ಫ್ರೀಜಿಂಗ್ ಜಿಲ್ಲಾ ಮಟ್ಟದ ಅಧಿಕಾರಿಗಳ ಲಾಗಿನ್‌ನಲ್ಲಿ ಈಗಾಗಲೇ ನೀಡಲಾಗಿದೆ. ಈ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಕೂಲಿ ಹಾಗೂ ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಹಣ ಪಾವತಿ ಇ.ಎಫ್.ಎಂ.ಎಸ್ (e-FMS) ಮೂಲಕ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ನಿಗದಿ ಪಡಿಸಿದ ಅಧಿಕಾರಿಗಳಿಗೆ DSC ಡೋಂಗಲ್ ಬೇಕಾಗಿದಲ್ಲಿ ಅರ್ಜಿಸಲ್ಲಿಸಿದಲ್ಲಿ ನೀಡಲಾಗುವುದು.

12. ಪ್ರತಿ ಕಾಮಗಾರಿಯ ಮಾದರಿ ಅಂದಾಜು ಪತ್ರಿಕೆಯನ್ನು ನರೇಗಾ ತಂತ್ರಾಂಶದಲ್ಲಿ ಅಂತಿಮಗೊಳಿಸುವಾಗ (freezing), ಕಾಮಗಾರಿ ಅನುಷ್ಠಾನದ ಫಲಶೃತಿಯ (out come) ವಿವರಗಳನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ. ಇದರ ಬಗ್ಗೆ ಪ್ರತಿ ಕಾಮಗಾರಿಗಳ ಫಲಶೃತಿಯನ್ನು ತಮ್ಮ ಹಂತದಲ್ಲಿಯೇ ನಿರ್ಧರಿಸಿ, ಇಲಾಖಾ ಅಧಿಕಾರಿಗಳಿಗೆ ನಮೂದಿಸಲು ಸೂಚನೆ ನೀಡುವುದು.

13. ಪ್ರತಿ ಕಾಮಗಾರಿಗೆ ಪ್ರತ್ಯೇಕ ಕಡತವನ್ನು ನಿರ್ವಹಿಸ ಬೇಕಾಗುತ್ತದೆ, ಅದರಂತೆ ಎಲ್ಲಾ ದಾಖಲಾತಿಗಳನ್ನು ಕ್ರಮಬದ್ದವಾಗಿ ನಿರ್ವಹಿಸುವುದು ಮತ್ತು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡ ನಂತರ ಹಾಗೂ ಹಣ ಪಾವತಿಯಾದ ನಂತರ ಸಮಾಪನಾ ವರದಿ ಪಡೆದು ನರೇಗಾ ತಂತ್ರಾಂಶದಲ್ಲಿ ದಾಖಲಿಸುವುದು.

ಈ ಮಾದರಿ ಅಂದಾಜು ಪತ್ರಿಕೆಗಳಲ್ಲಿ ಏನಾದರೂ ಅವಶ್ಯಕ ಮಾರ್ಪಾಡು ಮಾಡಬೇಕಿದಲ್ಲಿ ತಮ್ಮ ಹಂತದಲ್ಲಿ ಶೇ.10 ಮೊತ್ತದಲ್ಲಿ ಮಾತ್ರ ಬದಲಾವಣೆ ಮಾಡಬಹುದಾಗಿರುತ್ತದೆ. ಈ ಯೋಜನೆಯ ಇತರೆ ವಿಧಿ ವಿಧಾನಗಳನ್ನು ಅನುಸರಿಸಲು ತಮ್ಮ ಇಲಾಖೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(signature)

**ಆಯುಕ್ತರು**
ಗ್ರಾಮೀಣಾಭಿವೃದ್ದಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ:271:ಉಖಾಯೋ 2015

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿಕಟ್ಟಡ,
ಬೆಂಗಳೂರು-1. ದೂ. **080-22372738**
E-mail: nregs-ka@nic.in
ದಿನಾಂಕ: 30-06-2015

**ರವರಿಗೆ,**
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು,
ಬೆಂಗಳೂರು.

ಮಾನ್ಯರೇ,

ವಿಷಯ: 2015-16ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ರೇಷ್ಮೆ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳ ಮಾದರಿ ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2012 ಬೆಂಗಳೂರು, ದಿನಾಂಕ:23-10-2013
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2012 ಬೆಂಗಳೂರು, ದಿನಾಂಕ:02-09-2014
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ:ರೇಬಿ ರೇಕ್ಷೇ:ನರೇಗಾ:ಕ್ರಿಯಾ ಯೋಜನೆ:03:2015-16, ದಿನಾಂಕ:20-06-2015.

************

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಆದೇಶದ ಪ್ರಕಾರ ತಮ್ಮ ಇಲಾಖೆಯನ್ನು ಅನುಷ್ಠಾನ ಇಲಾಖೆಯನ್ನಾಗಿ ನೇಮಕ ಮಾಡಲಾಗಿದೆ ಹಾಗೂ ಉಲ್ಲೇಖ (2) ರಂತೆ ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳಿಗೆ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯನ್ನಾಗಿ ಘೋಷಿಸಲಾಗಿರುತ್ತದೆ. ಉಲ್ಲೇಖ (3)ರ ಪತ್ರದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೇಷ್ಮೆ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳಾದ 1) ಹಿಪ್ಪುನೇರಳೆ ನರ್ಸರಿ ಅಭಿವೃದ್ಧಿ 2) ಹೊಸ ಹಿಪ್ಪುನೇರಳೆ ತೋಟ ಅಭಿವೃದ್ಧಿ 3) ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ 4) ಕಾಂಪೋಸ್ಟ್/ಇಂಗು ಗುಂಡಿಗಳ ನಿರ್ಮಾಣ ಘಟಕಗಳ ಪರಿಷ್ಕೃತ ಮಾದರಿ ಅಂದಾಜು ಪಟ್ಟಿಗಳನ್ನು ಸಿದ್ದಪಡಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತೀರಿ.

2015-16ನೇ ಸಾಲಿನ ಮಾದರಿ ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಿ ಈ ಪತ್ರದೊಂದಿಗೆ ಅನುಬಂಧ-1 (ಪುಟ ಸಂಖ್ಯೆ: 1 ರಿಂದ 10ರವರೆಗೆ) ಲಗತ್ತಿಸಿದೆ. ಈ ಕಾಮಗಾರಿಗಳನ್ನು ತಾವು ಮಹಾತ್ಮ ಗಾಂಧಿ ನರೇಗಾದ ನಿಯಮಾನುಸಾರ ಅನುಷ್ಠಾನಗೊಳಿಸುವುದು. ವೈಯಕ್ತಿಕ ಫಲಾನುಭವಿಗಳ ಆಯ್ಕೆ ಮತ್ತು ಕಾಮಗಾರಿ ಅನುಷ್ಠಾನದ ವಿಧಿ ವಿಧಾನಗಳ ಕುರಿತಂತೆ, ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಹೊರಡಿಸಿರುವ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳು-2013, 4ನೇ ಆವೃತ್ತಿ ಮತ್ತು ಉಲ್ಲೇಖ (1) ಮತ್ತು (2) ರ ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶಗಳಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಕೋರಿದೆ.

**ಷರತ್ತುಗಳು:**

1. ವ್ಯಕ್ತಿಗತ ಕಾಮಗಾರಿ ಕುರಿತಂತೆ ಈ ಯೋಜನೆಯ ಕುರಿತು ಕೇಂದ್ರ ಸರ್ಕಾರ ನೀಡಿದ ಅನುಸೂಚಿ-1ರ ಕಂಡಿಕೆ 5ರಲ್ಲಿನ ಅರ್ಹ ಫಲಾನುಭವಿ ಅವರಿಗೆ ಮಾತ್ರ ಮಂಜೂರು ಮಾಡಬಹುದು. ಪ್ರಥಮ ಆಧ್ಯತೆ ಪರಿಶಿಷ್ಟ ಜಾತಿ/ಪಂಗಡ ರವರಿಗೆ ನೀಡಬಹುದು, ನಂತರ ಉಳಿದ ಫಲಾನುಭವಿಗಳಿಗೆ ಆಧ್ಯತೆ ನೀಡಬಹುದು.
2. ವ್ಯಕ್ತಿಗತ ಫಲಾನುಭವಿ ಕಾಮಗಾರಿಗಳಲ್ಲಿ ಸಂಬಂಧಪಟ್ಟ ಫಲಾನುಭವಿ ಅವರ ಜಮೀನಿನಲ್ಲಿ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು.ಇದಕ್ಕಾಗಿ ಅವರ ಅರ್ಜಿಯನ್ನು ಕೂಲಿ ಬೇಡಿಕೆಯನ್ನಾಗಿ ಪರಿಗಣಿಸುವುದು.
3. ಇಲಾಖಾ ಲಾಗಿನ್‌ನಿಂದ ಅನುಷ್ಠಾನ ಮಾಡಿದ ಕಾಮಗಾರಿಗಳಿಗೆ, ಜಿಲ್ಲಾ ಮಟ್ಟದಲ್ಲಿ ಕೂಲಿ ಹಾಗೂ ಸಾಮಗ್ರಿ ಅನುಪಾತವನ್ನು ಶೇಕಡ 60:40ಕ್ಕೆ ಕಾಪಾಡಿಕೊಳ್ಳಬೇಕಾಗುತ್ತದೆ.
4. ಪ್ರತಿಯೊಂದು ಕಾಮಗಾರಿಗಳ ಅನುಷ್ಠಾನದ ಮೂರು ಹಂತಗಳ ಛಾಯಾ ಚಿತ್ರಗಳನ್ನು, ದಿನಾಂಕ ಹಾಗೂ ಲ್ಯಾಟ್‌ಲಾಂಗ್ (GPS reading) ನೊಂದಿಗೆ ನಿರ್ವಹಿಸಬೇಕು ಮತ್ತು ನರೇಗಾ soft ತಂತ್ರಾಂಶದಲ್ಲಿ ಆರೋಹಿಸುವುದು ಹಾಗೂ ಕಾಮಗಾರಿ ಸ್ಥಳದಲ್ಲಿ ಕಡ್ಡಾಯವಾಗಿ ನಾಮಫಲಕ ಅಳವಡಿಸುವುದು. ನಾಮಫಲಕ ವೆಚ್ಚ ಶೇ.40 ರಷ್ಟು ಸಾಮಗ್ರಿ ವೆಚ್ಚದಲ್ಲಿ ಅಳವಡಿಸುವುದು.
5. 2014-15ನೇ ಸಾಲಿನಲ್ಲಿ ಅನುಮೋದನೆ ಆಗಿರುವ ಕಾಮಗಾರಿಗಳನ್ನು ಈ ಪರಿಷ್ಕೃತ ಮಾದರಿ ಅಂದಾಜು ಪತ್ರಿಕೆ ಅನ್ವಯ ಅನುಷ್ಠಾನ

ಮಾಡಲು ಕೋರಲಾಗಿದೆ. 2015–16 ನೇ ಸಾಲಿನ ಕೂಲಿ ಅಯವ್ಯಯಗಾಗಿ ಮಂಜೂರಾದ ಕಾಮಗಾರಿಗಳ ಹಾಗೂ ಫಲಾನುಭವಿಗಳ ಪಟ್ಟಿ ಪಡೆದು, ಫಲಾನುಭವಿಗಳ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ತಮ್ಮ ಇಲಾಖೆಯ ಲಾಗಿನ್‌ನಿಂದ ಅಥವಾ ಗ್ರಾಮ ಪಂಚಾಯಿತಿ ಲಾಗಿನ್‌ನಿಂದ ಅನುಷ್ಠಾನಗೊಳಿಸಬಹುದು.

ತಮ್ಮ ಇಲಾಖೆಯಿಂದ ಆಯ್ಕೆಯಾದ ಹೊಸ ಕಾಮಗಾರಿಗಳನ್ನು end 2 end ನರೇಗಾ soft ನಲ್ಲಿ ದಾಖಲಿಸಿ, ಗ್ರಾಮ ಸಭೆಯಿಂದ ಅನುಮೋದನೆ ಆದ ನಂತರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.

6. ಕಾಮಗಾರಿಗಳು ಗ್ರಾಮ ಸಭೆ ಅನುಮೋದನೆ ಹಾಗೂ ಕ್ರಿಯಾ ಯೋಜನೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯಾದ ನಂತರ ಸಂಬಂಧಪಟ್ಟ ವ್ಯಕ್ತಿಗತ ಫಲಾನುಭವಿಗಳಿಂದ ಅರ್ಜಿ ಪಡೆದು, ಅವರ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

7. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ಥಾಪಿತವಾಗಿರುವ ಹಿಪ್ಪುನೇರಳೆ ತೋಟಕ್ಕೆ 2 ಹಾಗೂ 3ನೇ ವರ್ಷ ತೋಟ ನಿರ್ವಹಣೆ ಕೈಗೊಳ್ಳಲಾಗಿದೆಯೇ ಎಂಬುದರ ಬಗ್ಗೆ ಅನುಷ್ಠಾನ ಅಧಿಕಾರಿಗಳು ಖಚಿತಪಡಿಸಿಕೊಳ್ಳುವುದು.

8. ಅನುಷ್ಠಾನ ಅಧಿಕಾರಿಗಳು ಒಬ್ಬ ಫಲಾನುಭವಿಗೆ ಒಂದು ಎಕರೆಗಿಂತ ಹೆಚ್ಚು ಸಹಾಯಧನ ಸೌಲಭ್ಯಕ್ಕೆ ಅವಕಾಶ ಕೊಡುವ ಮೊದಲು ಬೇರೆ ಯಾವ ಅರ್ಹ ಫಲಾನುಭವಿಯು ಈ ಸೌಲಭ್ಯದಿಂದ ವಂಚಿತರಾಗಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಒಬ್ಬ ಫಲಾನುಭವಿಗೆ ಹೆಚ್ಚ ಸಹಾಯಧನ ಕೊಡುವ ಬದಲಾಗಿ, ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ಈ ಸೌಲಭ್ಯ ಕಲ್ಪಿಸಿಕೊಡಲು ಅನುವು ಮಾಡಿಕೊಡುವುದು ಸೂಕ್ತ. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಕ್ಕೆ ಆಧ್ಯತೆ ನೀಡುವುದು.

9. ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಲಾಗಿನ್‌ನಿಂದ ಕೂಲಿ ಬೇಡಿಕೆ ಪಡೆಯುವುದು, ಕಾಮಗಾರಿಗಳ ಹಂಚಿಕೆ ಮಾಡುವುದು ಹಾಗೂ ಎನ್.ಎಂ.ಆರ್ ಸೃಜಿಸಲು ನರೇಗಾ ಸಾಫ್ಟ್‌ನಲ್ಲಿ ಈಗಾಗಲೇ ಅವಕಾಶ ನೀಡಿರುವುದರಿಂದ, ಕೂಲಿ ಕಾರ್ಮಿಕರನ್ನು ಸಂಘಟಿಸಿ, ಅವರಿಂದ ಕೂಲಿ ಬೇಡಿಕೆಯನ್ನು ಪಡೆದು, ತಮ್ಮ ಇಲಾಖಾ ಲಾಗಿನ್‌ನಿಂದ ಎನ್.ಎಂ.ಆರ್ ಗಳನ್ನು ಸೃಜಿಸಿ, ಕಾಮಗಾರಿಗಳನ್ನು ನಿರ್ವಹಿಸಲು ಇಲಾಖಾ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

10. ಕಾಮಗಾರಿಗಳ ಚಾಲನೆ ಅಧಿಕಾರ ಹಾಗೂ ಅಂದಾಜು ಪತ್ರಿಕೆಗಳ ಫ್ರೀಜಿಂಗ್ ಜಿಲ್ಲಾ ಮಟ್ಟದ ಅಧಿಕಾರಿಗಳ ಲಾಗಿನ್‌ನಲ್ಲಿ ಈಗಾಗಲೇ ನೀಡಲಾಗಿದೆ. ಈ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಕೂಲಿ ಹಾಗೂ ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಹಣ ಪಾವತಿ ಇ.ಎಫ್.ಎಂ.ಎಸ್ (e-FMS) ಮೂಲಕ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ನಿಗಧಿ ಪಡಿಸಿದ ಅಧಿಕಾರಿಗಳಿಗೆ DSC ಡೋಂಗಲ್ ಬೇಕಾಗಿದಲ್ಲಿ ಅರ್ಜಿಸಲ್ಲಿಸಿದಲ್ಲಿ ನೀಡಲಾಗುವುದು.

11. ಪ್ರತಿ ಕಾಮಗಾರಿಯ ಮಾದರಿ ಅಂದಾಜು ಪತ್ರಿಕೆಯನ್ನು ನರೇಗಾ ತಂತ್ರಾಂಶದಲ್ಲಿ ಅಂತಿಮಗೊಳಿಸುವಾಗ (freezing), ಕಾಮಗಾರಿ ಅನುಷ್ಠಾನದ ಫಲಶೃತಿಯ (out come) ವಿವರಗಳನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ. ಇದರ ಬಗ್ಗೆ ಪ್ರತಿ ಕಾಮಗಾರಿಗಳ ಫಲಶೃತಿಯನ್ನು ತಮ್ಮ ಹಂತದಲ್ಲಿಯೇ ನಿರ್ಧರಿಸಿ, ಇಲಾಖಾ ಅಧಿಕಾರಿಗಳಿಗೆ ನಮೂದಿಸಲು ಸೂಚನೆ ನೀಡುವುದು.

12. ಪ್ರತಿ ಕಾಮಗಾರಿಗೆ ಪ್ರತ್ಯೇಕ ಕಡತವನ್ನು ನಿರ್ವಹಿಸ ಬೇಕಾಗುತ್ತದೆ, ಅದರಂತೆ ಎಲ್ಲಾ ದಾಖಲಾತಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದು ಮತ್ತು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡ ನಂತರ ಹಾಗೂ ಹಣ ಪಾವತಿಯಾದ ನಂತರ ಸಮಾಪನಾ ವರದಿ ಪಡೆದು ನರೇಗಾ ತಂತ್ರಾಂಶದಲ್ಲಿ ದಾಖಲಿಸುವುದು.

ಈ ಮಾದರಿ ಅಂದಾಜು ಪತ್ರಿಕೆಗಳಲ್ಲಿ ಏನಾದರೂ ಅವಶ್ಯಕ ಮಾರ್ಪಾಡು ಮಾಡಬೇಕಿದಲ್ಲಿ ತಮ್ಮ ಹಂತದಲ್ಲಿ ಶೇ.10 ಮೊತ್ತದಲ್ಲಿ ಮಾತ್ರ ಬದಲಾವಣೆ ಮಾಡಬಹುದಾಗಿರುತ್ತದೆ. ಈ ಯೋಜನೆಯ ಇತರೆ ವಿಧಿ ವಿಧಾನಗಳನ್ನು ಅನುಸರಿಸಲು ತಮ್ಮ ಇಲಾಖೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

**ಆಯುಕ್ತರು**
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ




ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪತ್ರಿಕಾ ಗೋಷ್ಠಿಯಲ್ಲಿ ಗ್ರಾಮ ವಿಕಾಸ ಯೋಜನೆಯ ಅನುಷ್ಠಾನ ಕುರಿತು ಮಾರ್ಗಸೂಚಿ ಪುಸ್ತಕವನ್ನು ಬಿಡುಗಡೆ ಮಾಡಿದರು.



# KARNATAKA VIKAS : JULY - 2015

A Monthly Magazine for Rural Development and Panchayath Raj Department, Government of Karnataka

Regd. KA / BGGPO / 2531 / 2015-17, License to Post "without Prepayment" WPP - 32

RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru on 9th, 10th, 11th of Every Month




ನೀತಿ ಆಯೋಗದ ಮುಖ್ಯಮಂತ್ರಿಗಳ ಉಪ ಸಮಿತಿ ಸಭೆಯಲ್ಲಿ ಏರ್ಪಡಿಸಿದ್ದ ವಸ್ತು ಪ್ರದರ್ಶನ.


Name of the Editor
**Y. Mahankalappa**

Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka

Price : ಬೆಲೆ : ₹10.00